॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ,
ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ........ 2
ಸಂಪಾದಕೀಯ........ 3
ವಕಾಲತ್........ 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ ........ 5
ಶ್ರೀಧರ ಸ್ಮರಣೆ ........ 7
ಶ್ರೀರಾಮ ಕಥಾಸಾರ ........ 8
ಸಂಪ್ರದಾಯ ........ 10
ಕವನ - ಮಾನವತೆ ........ 10
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 11
ಮಹಾಕ್ಷತ್ರಿಯ ........ 11
ಬದುಕಲೊಂದಿಷ್ಟು ಆಪ್ತಮಾತುಗಳು ........ 14
ಧರೆಗಿಳಿದ ದಿವ್ಯತೇಜ ........ 15
ಕಗ್ಗದ ಬೆಳಕಿನಲ್ಲಿ ........ 18
ವಚನಭಾಗವತ ........ 20
ಆನೋ ಭದ್ರಾಃ ಕೃತವೋಯಂತು ವಿಶ್ವಥಃ ........ 21
ಔಷಧೀಯ ಸಸ್ಯ ಸಂಪತ್ತು ........ 22
ಸುಂದರಕಾಂಡದ ಸೌಂದರ್ಯ ........ 23
ಪದಬಂಧ-40 ........ 24

**ಹೇಮಪುರ ಘನ ಗಂಭೀರ**
ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಕ್ರಿ.ಪೂ.2005-1500. ಹರಪ್ಪ ನಾಗರಿಕತೆ.

# ಪರಿವರ್ತನೆಯ ದೋಣಿಯಲ್ಲಿ ಪರಿಪೂರ್ಣತೆಯೆಡೆಗೆ..



ಪ್ರಪಂಚದ ಆಧ್ಯಾತ್ಮಿಕ ಇತಿಹಾಸದಲ್ಲಿ ಜನರು ಅದ್ಭುತ ಪರಿವರ್ತನೆಯನ್ನು ಹೊಂದುವುದನ್ನು ಕಾಣುತ್ತೇವೆ. ಪ್ರಾಣಿಸಹಜ ಪ್ರವೃತ್ತಿಯಿಂದ ದಿವ್ಯತೆಯನ್ನು ಹೊರಸೂಸುವ ಸಂತಪುರುಷರಾಗಿ ಮಾರ್ಪಾಡಾಗಿರುವವರನ್ನು ಕಾಣುತ್ತೇವೆ. ಇದು ಆಧ್ಯಾತ್ಮಿಕ ಸಾಧಕರ ಸಂಗದಿಂದ ಪ್ರಾಣಿಸಹಜ ಪ್ರವೃತ್ತಿಗಳನ್ನು ಕಳೆದುಕೊಂಡು, ದಿವ್ಯ ಪರಿಶುದ್ಧತೆಯ ಹಾಗೂ ಆ ಸ್ಥಿತಿಯಲ್ಲಿ ದಿವ್ಯ ಪ್ರಜ್ಞೆಯ ಅನುಭವವನ್ನು ದಿನದ ಪ್ರತಿಕ್ಷಣದಲ್ಲೂ ಪಡೆಯುವುದು ಸಾಧ್ಯ. ಇಂಥಹ ಕಣ್ಣಿಗೆ ಕಟ್ಟುವಂತಹ ಘಟನೆಗಳು ನಮಗೆ ತುಂಬ ಮೆಚ್ಚುಗೆಯಾಗುವವು. ಆದರೆ ಅನೇಕರಲ್ಲಿ ಇಂತಹ ಪರಿವರ್ತನೆ ಸರಳ ರೀತಿಯಲ್ಲಿ ಆಗುವವು ಅಥವಾ ಕ್ರಮೇಣ ಆಗುವುದು. ಒಂದು ಹೊಸ ವ್ಯಕ್ತಿತ್ವ ಅವರಲ್ಲಿ ಉದ್ಭವಿಸಿ ಅವರನ್ನು ಸಂಪೂರ್ಣ ಬೇರೆಯೇ ವ್ಯಕ್ತಿಯನ್ನಾಗಿ ಮಾರ್ಪಡಿಸುವುದು. ಭೌತಿಕವಾಗಿ ಅವರು ಮೊದಲಿನಂತೆಯೇ ಇದ್ದರೂ ಆಂತರಿಕ ಸತ್ತ್ವದಲ್ಲಿ ಸಂಪೂರ್ಣ ಬದಲಾವಣೆ ಆಗಿರುತ್ತದೆ. "ಪ್ರಕೃತಿಯ ಪರಿವರ್ತನೆಗೆ ಕರ್ಮವು ನೇರ ಕಾರಣವಲ್ಲ. ಪ್ರಕೃತಿಯ ವಿಕಾಸದಲ್ಲಿ ಅದು ತಡೆಯ ನಿವಾರಕದಂತೆ. ರೈತನು ನೀರಿನ ಪ್ರವಾಹಕ್ಕೆ ಅಡ್ಡಿಯಾಗಿರುವ ತಡೆಯನ್ನು ತೆಗೆದ ಕೂಡಲೇ ನೀರು ತನ್ನ ಸ್ವಭಾವಕ್ಕೆ ಅನುಗುಣವಾಗಿ ತಾನಾಗಿಯೇ ಹರಿಯುವಂತೆ ಕರ್ಮವು ಪ್ರಕೃತಿಯ ವಿಕಾಸಕ್ಕೆ ಇರುವ ಅಡ್ಡಿಯನ್ನು ನಿವಾರಿಸುತ್ತದೆ". ನೀರಾವರಿಯ ನೀರು ಆಗಲೇ ಇದೆ, ಕೇವಲ ಬಾಗಿಲ ತಡೆ ಮಾತ್ರ ಇದೆ. ರೈತ ಬಾಗಿಲನ್ನು ತೆಗೆದಕೂಡಲೇ ನೀರು ತನ್ನ ಸ್ವಭಾವದಿಂದಲೇ ಗುರುತ್ವ ನಿಯಮದಂತೆ ಹರಿದು ಬರುವುದು. ಹಾಗೆಯೇ ಎಲ್ಲ ಪ್ರಗತಿ ಮತ್ತು ಶಕ್ತಿ ಮನುಷ್ಯನಲ್ಲಿ ಆಗಲೇ ಇದೆ. ಪರಿಪೂರ್ಣತೆ ಮನುಷ್ಯನ ಸ್ವರೂಪ, ಅದು ವ್ಯಕ್ತವಾಗದೇ ತಡೆಯಲ್ಪಟ್ಟಿದೆ. ತಡೆಯನ್ನು ತೆಗೆದಕೂಡಲೇ ಅದು ಪುಟಿದೇಳುವುದು. ಆಗ ಮನುಷ್ಯ ಶಕ್ತಿವಂತನಾಗುವನು. ತಡೆಯನ್ನು ತೆಗೆದು ಸ್ವರೂಪ ಹೊರಬಂದಕೂಡಲೇ ದುಷ್ಟನೂ ಸಹ ಸಂತನಾಗುವನು. ಪ್ರಕೃತಿಯೇ ನಮ್ಮನ್ನು ಪರಿಪೂರ್ಣತೆಯೆಡೆಗೆ ಸೆಳೆದುಕೊಂಡು ಹೋಗುತ್ತಿರುವಳು. ಕೊನೆಯಲ್ಲಿ ಎಲ್ಲರನ್ನೂ ಅಲ್ಲಿಗೆ ತರುವಳು. ಎಲ್ಲ ಧಾರ್ಮಿಕ ಸಾಧನೆ, ಹೋರಾಟಗಳು ನಿಷೇಧಾತ್ಮಕ. ಇವು ನಮ್ಮ ಸ್ವರೂಪವಾದ ಪರಿಪೂರ್ಣತೆಯ ಅಭಿವ್ಯಕ್ತಿಗಿರುವ ತಡೆಯನ್ನು ತೆಗೆಯುವವು. ಎಲ್ಲಜೀವಿಗಳಲ್ಲಿಯೂ ಮೊದಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತವೇ ವಿಕಾಸ. ಈ ಪರಿಪೂರ್ಣತೆ ತಡೆಯಲ್ಪಟ್ಟಿದೆ, ಈ ಮಹಾಪ್ರವಾಹ ವ್ಯಕ್ತವಾಗಲು ಹೆಣಗುತ್ತಿದೆ. ಈ ಹೋರಾಟ ಸ್ಪರ್ಧೆಗಳೆಲ್ಲವೂ ಅಜ್ಞಾನದ ಫಲ, ಏಕೆಂದರೆ ನಮಗೆ ಬಾಗಿಲನ್ನು ತೆರೆದು ನೀರನ್ನು ಬಿಡುವ ಉಪಾಯತಿಳಿಯದಾಗಿದೆ. ಜೀವನ, ಸ್ಪರ್ಧೆ ಮತ್ತು ಲೈಂಗಿಕತೃಪ್ತಿ–ಇವು ಅಜ್ಞಾನದಿಂದ ಉಂಟಾದ ಕ್ಷಣಿಕ ಅನವಶ್ಯಕ ಬಾಹ್ಯ ಪರಿಣಾಮಗಳು. "ಪ್ರಾಣಿಯಲ್ಲಿ ಮನುಷ್ಯ ಅಡಗಿರುವನು, ಬಾಗಿಲು ತೆರೆದಕೂಡಲೇ ಹೊರಬರುವನು. ಹಾಗೆಯೇ ಮನುಷ್ಯನಲ್ಲಿ ದೈವತ್ವ ಅಡಗಿರುವುದು, ಅಜ್ಞಾನದ ಮುಸುಕನ್ನು ತೆಗೆದಕೂಡಲೇ ಅದೈವತ್ವ ಪ್ರಕಾಶಗೊಳ್ಳುವುದು".

ಆಧ್ಯಾತ್ಮಿಕ ದೃಷ್ಟಿಯಿಂದ ಹೇಳುವುದಾದರೆ ಎಲ್ಲ ಸೂಕ್ಷ್ಮ ಪ್ರವೃತ್ತಿಗಳಿಗೂ, ಸಂಸ್ಕಾರಗಳಿಗೂ ಆಧ್ಯಾತ್ಮಿಕ ತಿರುವನ್ನು ನೀಡಬೇಕು. ಅಭ್ಯಾಸಗಳನ್ನೂ, ಪ್ರವೃತ್ತಿಗಳನ್ನೂ ಅವುಗಳ ಬೇರಿನಲ್ಲೇ ತಕ್ಕರೀತಿಯಲ್ಲಿ ಸಂಸ್ಕರಿಸಿ ಅನಂತರ ಅವುಗಳನ್ನು ಮೀರಿ ಹೋಗಬೇಕು.

ರಾಗದ್ವೇಷಗಳು ಅಹಂಕಾರದಿಂದ ಬರುತ್ತವೆ. ಅಹಂಕಾರ ಅವಿದ್ಯೆಯಿಂದ ಬರುತ್ತದೆ. ಆತ್ಮಜ್ಞಾನವೊಂದೇ ಆಸೆಯಬೀಜಗಳನ್ನು ಸುಟ್ಟು ಸ್ವಾತಂತ್ರ್ಯ ಮತ್ತು ಶಾಂತಿಯನ್ನು ನೀಡುವುದು. ನಮ್ಮ ಮನಸ್ಸು ವಿಷಯವಸ್ತುಗಳಲ್ಲಿ ರಮಿಸುತ್ತಿದ್ದರೆ ಅದರ ಪರಿಣಾಮವಾಗಿ ಬಂಧನಕ್ಕೆ ಒಳಗಾಗುತ್ತದೆ. ಆ ಬಂಧನ ಹೋದರೆ ನಮ್ಮಲ್ಲಿ ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕಾದ ಮುಕ್ತಿ ದೊರೆಯುತ್ತದೆ.

ಕೆಟ್ಟ ಆಲೋಚನೆಗಳು ಮತ್ತು ಭಾವೋದ್ವೇಗಗಳು ಮನಸ್ಸು ದೇಹಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಸಾಮಾನ್ಯ ಅನುಭವ. ನಮ್ಮ ತಪ್ಪು ಭಾವನೆಗಳು, ಭಾವೋದ್ವೇಗಗಳು ಅನೇಕ ಬಗೆಯ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕಾರಣವಾಗುತ್ತದೆ ಎಂದು ಅನೇಕ ಮನೋವೈದ್ಯರೂ ಹೇಳುತ್ತಾರೆ. ನಮ್ಮ ಬಾಹ್ಯಕ್ರಿಯೆಗಳಿಗಿಂತ ನಮ್ಮ ಆಲೋಚನೆ ಮತ್ತು ಭಾವಗಳ ಸ್ವರೂಪ ಮುಖ್ಯ.

ಹೀಗೆ ನಮ್ಮ ಎಲ್ಲಾ ಪ್ರೇರಣೆ, ಆಸೆ, ವ್ಯಾಮೋಹಗಳ ಹಿಂದೆ ಜೀವನದ ಸತ್–ಚಿತ್–ಆನಂದದ ಆಸೆ ಇದೆ. ಸಚ್ಚಿದಾನಂದ ಸತ್ಯದ ಸಾಕ್ಷಾತ್ಕಾರದಿಂದಲೇ ಇದು ಪೂರ್ಣವಾಗುವುದು. ಅದು ನಮ್ಮ ಸ್ವಭಾವವೇ ಆಗಿದ್ದರೂ ಅಜ್ಞಾನದಿಂದ ನಾವು ಮರೆತಿರುವೆವು. ಆತ್ಮಜ್ಞಾನದಿಂದ ಮುಕ್ತಿ ಲಭ್ಯವಾಗುತ್ತದೆ. ಇದುವೇ ಆಧ್ಯಾತ್ಮಿಕ ಜೀವನದ ರಹಸ್ಯ.

ಹೀಗೆ ಪ್ರಾಪಂಚಿಕ ವ್ಯಕ್ತಿಯು ತನ್ನ ಪ್ರಾಪಂಚಿಕತೆಯನ್ನು ಬಿಟ್ಟರೆ ಬದಲಾಗಬಹುದು. ಸುಮ್ಮನೆ ತೋರಿಕೆಯ ಆಧ್ಯಾತ್ಮಿಕತೆಯಿಂದ ಏನೂ ಪ್ರಯೋಜನವಾಗದು. ಲಂಗರು ಹಾಕಿದ ದೋಣಿ ಚಲಿಸದು. ನಮ್ಮ ವ್ಯಾಮೋಹಗಳು ನಮ್ಮನ್ನು ಪ್ರಾಪಂಚಿಕತೆಗೆ ಕಟ್ಟಿಹಾಕಿವೆ. ಎಷ್ಟೇ ವೇದನಾಸ್ವರೂಪವಾದರೂ ಪ್ರಾಪಂಚಿಕತೆಯ ವ್ಯಾಮೋಹದ ಕಟ್ಟನ್ನು ಬಿಚ್ಚಬೇಕು. ಅದರೊಂದಿಗೆ ನಮ್ಮಲ್ಲಿಯ ದೈವತ್ವವನ್ನು ಪ್ರಕಟಿಸಬೇಕು. ಹೀಗೆ ನಮ್ಮ ಜೀವನದ ದೋಣಿಯನ್ನು ಮುನ್ನಡೆಸಿಕೊಂಡು ಹೋಗಬೇಕು. ಈ ಚಿಂತನೆಯ ಮಂಥನದೊಂದಿಗೆ ಮುನ್ನಡೆಯೋಣ.

**ಶ್ರೀ ರಾಮಸ್ಮರಣಂ**

**ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**



ಕ್ರಿ.ಪೂ.1500 ಭಾರತದ ಮೇಲೆ ಆಯ್ರರ ದಾಳಿ.

# ಪ್ರೇರಣೆ

ಈರ್ ಗತೌ ಕಂಪನೇಚ ಪ್ರ ಉಪಸರ್ಗ ಲ್ಯುಟ್ ಪ್ರತ್ಯಯದ ಮೂಲಕ ಉಂಟಾದ ಪ್ರೇರಣೆ ಎನ್ನುವ ಶಬ್ದ.

ಜೀವನದಲ್ಲಿ ಪ್ರೇರಣೆ ಅತ್ಯಂತ ಮಹತ್ವವಾದದ್ದು. ಪ್ರೇರಣೆ ಮನುಷ್ಯನ ದಿಕ್ಕನ್ನೇ ಬದಲಾಯಿಸುತ್ತದೆ. ಪ್ರೇರಣೆಯಿಂದ ನಾಸ್ತಿಕನು ಆಸ್ತಿಕನಾಗುತ್ತಾನೆ. ದರಿದ್ರನು ಧನಾಢ್ಯನಾಗುತ್ತಾನೆ. ಅಜ್ಞಾನಿ ಜ್ಞಾನಿಯಾಗುತ್ತಾನೆ.
ಮೂರ್ಖನು ಸಜ್ಜನನಾಗುತ್ತಾನೆ. ಹೀಗೆ ಪ್ರೇರಣೆಗೆ ಅಂತಹ ಪರಿವರ್ತಿಸುವ ಮಹಾಶಕ್ತಿಯಿದೆ. ಇಂತಹ ಪ್ರೇರಣೆ ಪಡೆಯುವ ಅಥವಾ ಪ್ರೇರಿಸುವ ಬಗೆ ಹೇಗೆ?

ವಿವೇಕಾನಂದರ ವಾಣಿಯ ಪ್ರೇರಣೆಯಿಂದ ವಿವೇಕವನ್ನು ಪಡೆದು ಸಂನ್ಯಾಸ ದೀಕ್ಷೆ ಪಡೆದ ಜ್ಞಾನಿಗಳ ಪರಂಪರೆ ದೇಶದ ಉದ್ದಗಲಕ್ಕೂ ಇದೆ. ಗಾಂಧೀಜಿಯವರ ನುಡಿ, ಕೃತಿಗಳು ಅನ್ಯರಿಗೆ ಪ್ರೇರಣೆ ನೀಡಿ ಈ ದೇಶ ಬೆಳಕು ಕಂಡಿತು. ಪ್ರೇರಣೆ ದುಃಖಿತನಾದವನಿಗೆ ಸಂತಸವನ್ನು ತಂದರೆ, ಸಂತಸದಲ್ಲಿದ್ದವನಿಗೆ ಇನ್ನೂ ಸಾಹಸ ಮಾಡಬೇಕೆನ್ನುವ ಬುದ್ಧಿ ನೀಡಿತು. ಹೀಗೆ ಪ್ರೇರಣೆ ಮನುಷ್ಯನ ಪರಿವರ್ತನೆಗೆ ನಾಂದಿ ಹಾಡಿತು. ಹೀಗೆ ಪ್ರೇರಣೆ ಬಾಲರಿಂದ ವೃದ್ಧರ ತನಕ ಕ್ರಿಯಾಶೀಲತೆಗೆ, ಕಾರ್ಯತತ್ಪರತೆಗೆ ಎಲ್ಲ ರೀತಿಯಲ್ಲಿ ಬದಲಿಸುವ ಶಕ್ತಿ ಪಡೆದಿದೆ.

ಗುರು ಹಿರಿಯರ ಶುಭವಾಣಿ ಪ್ರೇರಣೆ ನೀಡುತ್ತದೆ. ಯಶಸ್ಸನ್ನು ಪಡೆಯಲು ನಿರಂತರ ಪರಿಶ್ರಮ ಬೇಕು. ದುಶ್ಚಟ ಬಿಡಲು, ಕೆಟ್ಟ ಕಾರ್ಯದಿಂದ ದೂರಾಗಲು ಪ್ರೇರಣೆಯಿಂದ ಸಾಧ್ಯ. ಹೀಗೆ ಪ್ರೇರಣೆ ಪಡೆಯಲು, ಪ್ರೇರಣೆ ನೀಡಲು ಸಮರ್ಥರಾದರೆ ಆಗ ಆಂತರಂಗಿಕ ಬಾಹ್ಯ ಬದಲಾವಣೆ ತನ್ನಿಂದ ತಾನೇ ಸಾಧ್ಯ.

ಜಾಂಬವಂತನ ಪ್ರೇರಣೆಯಿಂದ ಹನುಮಂತ ಅಂತಃಶಕ್ತಿಯ ಪರಿಜ್ಞಾನ ಪಡೆದು ಲಂಕೆಗೆ ಹಾರಿದ. ಪ್ರಧಾನಿ ತಾನೇ ಸ್ವಚ್ಛಮಾಡುವ ಪ್ರಕ್ರಿಯೆಯ ಮೂಲಕ ದೇಶದ ಸ್ವಚ್ಛಭಾರತಕ್ಕೆ ಪ್ರೇರಣೆ ನೀಡಿದರು. ಹೀಗೆ ಪ್ರೇರಣೆಯಿಂದ ವ್ಯಕ್ತಿಯ, ಕುಟುಂಬದ, ಸಮಗ್ರ ದೇಶದ ಬದಲಾವಣೆ ಸಾಧ್ಯ. ಅಂತಹ ಕಾರ್ಯಕ್ಕೆ ಮುನ್ನುಗ್ಗುವ ಪ್ರಕ್ರಿಯೆ ಅದು ನಿರಂತರವಾಗಿರಬೇಕು.

ಪ್ರೇರಣೆ ಸಿಗದೆ ಅಂದರೆ ಅರಿತುಕೊಳ್ಳದೆ ದುರ್ಮಾರ್ಗದ ಪಥವನ್ನು ಹಿಡಿದರು. ಪ್ರೇರಣೆ ಪಡೆದು ಅನೇಕರು ಸಜ್ಜನರಾದರು. ಅಂದರೆ ನಿಜ ಜೀವನದಲ್ಲಿ ಪ್ರತಿಯೊಬ್ಬನೂ ಸತ್ಕಾರ್ಯವನ್ನು ಮಾಡುತ್ತ ತನ್ಮೂಲಕ ಇನ್ನೊಬ್ಬರ ಬದುಕಿಗೆ ಪ್ರೇರಣೆ ನೀಡಿ ಅನ್ಯರಿಗೆ ಸತ್ಕಾರ್ಯದಲ್ಲಿ ತೊಡಗುವಂತೆ ಮಾಡಿದರೆ ಆಗ ಒಳ್ಳೆಯ ಸಮಾಜವನ್ನು ಕಟ್ಟಬಹುದು. ದೈನಂದಿನ ಜೀವನದಲ್ಲಿ ಒಳ್ಳೆಯ ಮಾತನಾಡುವ ಮೂಲಕ, ಒಳ್ಳೆಯ ಕೆಲಸ ಮಾಡಿ ತೋರಿಸುವ ಮೂಲಕ, ಇನ್ನೊಬ್ಬರಿಗೆ ಪ್ರೇರಣೆ ನೀಡಿದರೆ ಅದು ಬದುಕಿನ ಸಾರ್ಥಕತೆ ತಾನೆ?

ಜಗತ್ತಿಗೆ ಭಾರತ ಶೂನ್ಯದ ಮಹತ್ವವನ್ನು ಎತ್ತಿ ಸಾರಿದೆ. ನಾವೀಗ ಶೂನ್ಯ ಮಾಸ, ಪುಷ್ಯಮಾಸದತ್ತ ನೋಡುತ್ತಿದ್ದೇವೆ. ಸೂರ್ಯ ಮಕರದತ್ತ ತಿರುಗಿ, ಸಂಕ್ರಾಂತಿಯ ಪುಣ್ಯಕಾಲ ಲಭ್ಯವಾಗಲಿದೆ. ನಾವು ಸತ್ ಸಂಕಲ್ಪದೊಂದಿಗೆ ಪ್ರಕೃತಿ, ಸಂಸ್ಕೃತಿ ನೆನಪಿಸುತ್ತ ವಿಕೃತಿಗೆ ವಿದಾಯ ಹೇಳಲಾದೀತೆ? ಶೂನ್ಯ ಅಂದರೆ ಪುನಃ ಪೂರ್ಣತೆಯತ್ತ ಸಾಗುವ ಕೈಂಕರ್ಯ ಸುಲಭಸಾಧ್ಯವಲ್ಲ. ಪ್ರೇರಣೆಯ ಮೂಲಕ ಪೂರ್ಣತೆಯತ್ತ ಸಾಗುತ್ತ, ಅನ್ಯರನ್ನು ಸಾಗಿಸುತ್ತ, ಶ್ರೇಷ್ಠರ ಪ್ರೇರಣೆಯಿಂದ ಅನ್ಯರಿಗೆ ನಾವೂ ಪ್ರೇರಣೆ ನೀಡುವಂತಾದರೆ ಅದೇ ಜೀವನದ ಪರಿಪೂರ್ಣತೆ.

ಸತ್ಕಾರ್ಯ ಸತ್ಕೃತಿಯಿಂದ ಪಡೆಯಬೇಕು ಪ್ರೇರಣೆ.
ಕ್ರಿಯಾತತ್ಪರತೆ, ಕ್ರಿಯಾನ್ವಯನವೇ ಜೀವನ ಧಾರಣೆ.
ಮುದಪಡೆಯುವ, ಮುದನೀಡುವ ಈ ಜೀವನರಂಗ
ಸತ್ಪ್ರೇರಣೆ ನೀಡಲಿ ಜೀವನಕ್ಕೆ ಬದ್ಧ ಶುದ್ಧ ಅಂತರಂಗ.

ಸಂಪಾದಕರು

**ವಿ.ಸೂ :–** ಶ್ರೀ ವೀರಾಂಜನೇಯ ಭಕ್ತ ಮಹಾಜನಗಳೇ ಹಾಗೂ ಪ್ರಿಯ ಹೇಮಪುರ ಓದುಗರೇ ನಿಮ್ಮಲ್ಲಿ ವಿನಂತಿಸುವುದೇನೆಂದರೇ ಪತ್ರಿಕೆಯ ಚಂದಾದಾರರಾಗಿರುವ ತಾವುಗಳು ತಮ್ಮ ಚಂದಾ ಅವಧಿಯು ಮುಗಿದು ನಿಮ್ಮ ಮನೆಗೆ ಪತ್ರಿಕೆ ಬರುತ್ತಿದ್ದರೆ ತಕ್ಷಣ ಶ್ರೀಕ್ಷೇತ್ರ ಬಂಗಾರಮಕ್ಕಿ, ಗೇರಸೊಪ್ಪಾ ಈ ವಿಳಾಸಕ್ಕೆ ನಿಮ್ಮ ಚಂದಾ ಹಣವನ್ನು ಡಿ.ಡಿ. ಅಥವಾ ಎಂ.ಒ. ಮಾಡಿ ಅಥವಾ ಖಾತೆಗೆ NEFT ಮಾಡಿ, ದೂರವಾಣಿ: 08387–268545 ಅಥವಾ ಮೊಬೈಲ್ +919449109299 ಗೆ ತಿಳಿಸಿ ನಿಮ್ಮ ಚಂದಾ ಅವಧಿಯನ್ನು ನವೀಕರಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ.

NEFT ಮಾಡಲು ಬ್ಯಾಂಕ್ ವಿವರ

**ಖಾತೆ ಹೆಸರು :** ಶ್ರೀ ವೀರಾಂಜನೇಯ ಪ್ರಕಾಶನ
**ಖಾತೆ ಸಂಖ್ಯೆ :** 03393070000807
**IFSC :** SYNB0000339
**ಶಾಖೆ :** ಗೇರಸೊಪ್ಪ, ಕೆ.ಪಿ.ಸಿ. ಕಾಲೋನಿ, ಜ್ಯೋತಿ ನಗರ.



ಕ್ರಿ.ಪೂ.1000 ಕಬ್ಬಿಣದ ಬಳಕೆ

ವಕಾಲತ್

# ಶಿಕ್ಷೆ ಗೋಡೆಯಿಂದಾಚೆ ಬರಲಿ

ಲೇ॥ ನ್ಯಾಯಾವಾದಿ ನಾಗರಾಜ ನಾಯಕ

Hate the sin, but not the sinner( ಪಾಪವನ್ನು ದ್ವೇಷಿಸು, ಆದರೆ ಪಾಪಿಯನ್ನಲ್ಲ) ಎಂದು ಮಹಾತ್ಮ ಗಾಂಧೀಜಿ ಹೇಳಿ ಬಹಳ ವರ್ಷವಾಯಿತು. ಅಪರಾಧಿಗಳಿಂದ ಇಂದು ಜೈಲು ದೊಡ್ಡದಾಗುತ್ತಿದೆಯೇ ವಿನಃ ಇನ್ನೇನೂ ಸಾಧನೆಯಾಗುತ್ತಿಲ್ಲ. ಮಹರಾಣಿ ಕಾಲೇಜಿನ ಮುಂದಿದ್ದ ಜೈಲು ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರವಾಯಿತು. ಜೈಲು ದೊಡ್ಡದಾದೊಡನೆ ದೇಶದ ಸ್ಥಿತಿಗತಿ ಸುಧಾರಿಸುತ್ತದೆ ಎಂಬುದು ನಮ್ಮ ಭ್ರಮೆ. ಇಂದು ಜೈಲುಗಳು ಅಫರಾಧಿಗಳ ಗುರುಕುಲವಾಗುತ್ತಿದೆ. ಸಣ್ಣ ಅಪರಾಧಿಗೆ ಉನ್ನತ ಶಿಕ್ಷಣದ (ದೊಡ್ಡ ಅಪರಾಧ ಮಾಡಲು) ಕೇಂದ್ರವಾಗುತ್ತಿದೆ. ಜೈಲಿನಲ್ಲಿ ಮೊಬೈಲ್ ಸೇವೆ, ಯಥೇಚ್ಚ ವಿಸ್ಕಿ, ಗಾಂಜಾ, ಅಫೀಮು ಇತ್ಯಾದಿ ಇದ್ದ ಮೇಲೆ ಅಪರಾಧಿಗಳಿಗೆ ಅದೇ ಸ್ವರ್ಗವಾದೀತು. ಜೈಲಿನಲ್ಲಿಯೇ ಕೊಲೆ, ಬಡಿದಾಟ, ಜೈಲಿನಲ್ಲಿ ಕುಳಿತೇ ಹೊರಗಿನ ಪ್ರಪಂಚದ ಚಟುವಟಿಕೆ ನಿಯಂತ್ರಿಸಲು ಅನುಸರಿಸುವ ವಿಧಾನಗಳ ಕುರಿತು ಸಾಕಷ್ಟು ನಾವು ಕೇಳಿದ್ದೇವೆ. ಒಟ್ಟಿನಲ್ಲಿ ಈ ಜೈಲು ಕೆಟ್ಟು ಕೆರೆ ಹಿಡಿದಿರುವ ಒಂದು ಪ್ರದೇಶವಷ್ಟೇ. ಈ ಜೈಲಿನಲ್ಲಿ ಯಾವ ಮಹಾತ್ಕಾರ್ಯಗಳು ಸಾಧಿಸಲಿಕ್ಕಾಗುವುದಿಲ್ಲ ಎನ್ನುವುದು ವೇದ್ಯವಾಗಿದೆ. ದುಡ್ಡಿದ್ದರೆ ಜೈಲಿನಲ್ಲಿ ಏನು ಮಾಡಬಹುದು ಎಂಬಷ್ಟಕ್ಕೆ ಬಂದಿದೆ. ಇದು ವ್ಯವಸ್ಥೆಯಲ್ಲಿನ ಭ್ರಷ್ಟರ ದೇಸೆಯಿಂದಾಗಿದ್ದು, ಹೋಗಲಿ ಜೈಲಿನ ನಿಯಮಾವಳಿಗೆ ಅನುಗುಣವಾಗಿ ಕೈದಿಗಳು ಇದ್ದಾರೆ ಎಂತಾದರೂ ಈ ಜೈಲುಗಳಿಂದ ಯಾವ ಪುರುಷಾರ್ಥ ಸಿದ್ದಿಸಿದೆ ಎನ್ನುವುದನ್ನು ನೋಡಿದರೆ ಏನೂ ಇಲ್ಲ. ಜೈಲಿನಿಂದ ಬಿಡುಗಡೆಯಾಗಿ ಬರುವವರೆಗೆ ಆತನು ಮಾನಸಿಕವಾಗಿ ಬಳಲಿರುತ್ತಾನೆ. ಆದ್ದರಿಂದ ಈ ಶತಮಾನದ ಆದಿಯಲ್ಲಿರುವ ನಾವು ಈ ಶಿಕ್ಷೆ, ಜೈಲು, ಅವುಗಳಲ್ಲಿಯ ವ್ಯವಸ್ಥೆ ಇವುಗಳ ಕುರಿತು ಗಂಭೀರವಾಗಿ ಚಿಂತಿಸುವ ಕಾಲ ಬಂದಿದೆ.

ಶಿಕ್ಷೆಯ ಉದ್ದೇಶ ಅಪರಾಧಿಯನ್ನು ಬದಲಾಯಿಸುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅಂದರೆ Tit for Tat ಎಂಬ ಓಬಿರಾಯನ ಸೂತ್ರಕ್ಕೆ ಅಂಟು ಬಿದ್ದು ಸೇಡಿನ ರೂಪದ ಶಿಕ್ಷೆಗೆ ಜೋತು ಬೀಳಬೇಕೆಂದೇನಿಲ್ಲ. ಅಪರಾಧಿಯ ಮನೋಪರಿವರ್ತನೆ ಆಗಬೇಕು. ಹಾಗಂತ ಕೊಲೆಗಡುಕನಿಗೆ ವಿನಾಯತಿ ನೀಡಿ ಆತನನ್ನು ಬಿಟ್ಟು ಬಿಡಬೇಕೆಂದಲ್ಲ. ತಪ್ಪು ಮಾಡಿದವನಿಗೆ ಶಿಕ್ಷೆ ಆಗಲೇ ಬೇಕು. ಆದರೆ ಅದರ ರೂಪ ಯಾವುದು?

ಸಮಾಜ ಸೇವೆ ಮಾಡಲು ಆದೇಶಿಸಿ, ಆ ಮೂಲಕ ಅದನ್ನೇ ಸಣ್ಣ ಅಪರಾಧಿಗಳಿಗೆ ಶಿಕ್ಷೆಯ ರೂಪದಲ್ಲಿ ನೀಡಬೇಕು ಎಂಬ ವಾದ ಅಲ್ಲಿ-ಇಲ್ಲಿ ಕೇಳಬರುತ್ತಿದೆ. ಆಂಧ್ರ ಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಂತರಾಷ್ಟ್ರೀಯ ಮಟ್ಟದ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಸಮಾಜ ಸೇವೆಯನ್ನೇ ( Community Service ) ಶಿಕ್ಷೆ ಎಂಬುದಾಗಿ ಕೆಲ ಅಪರಾಧಿಗಳಿಗೆ ಪರಿಗಣಿಸಲು ಸರ್ಕಾರ ಕಾಯಿದೆಯನ್ನು ತರಲು ಇಚ್ಚಿಸಿದೆ ಎನ್ನುವುದಾಗಿ ಹೇಳಿದ್ದರು. ಆದರೆ ನಂತರ ಮಾತ್ರ ಯಾವುದೇ ಬೆಳವಣಿಗೆ ಆಗಲಿಲ್ಲ. ಅಪರಾಧ ಎಸಗಿದ್ದಾನೆ ಎಂಬುದು ನ್ಯಾಯಾಲಯದಲ್ಲಿ ಸಿದ್ಧವಾದೊಡನೆ ಕೆಲ ಸಣ್ಣ ಅಪರಾಧಗಳಲ್ಲಿ ಸಮಾಜ ಸೇವೆ ಮಾಡಲು ಕೆಲ ದೇಶಗಳಲ್ಲಿ ಆದೇಶಿಸಲಾಗುತ್ತದೆ. ಇಂಗ್ಲೆಂಡ್, ನ್ಯೂಜಿಲೆಂಡ್, ಶ್ರೀಲಂಕಾ, ಹಾಂಗ್‌ಕಾಂಗ್, ಫಿಜಿ, ಜಿಂಬಾಬ್ವೆ, ಕೆನಡಾ, ಫ್ರಾನ್ಸ್, ಕೀನ್ಯಾ ಮತ್ತು ಉಗಾಂಡದಂತಹ ದೇಶಗಳಲ್ಲಿ ಸಮಾಜ ಸೇವೆಯನ್ನೇ ಶಿಕ್ಷೆಯ ರೂಪದಲ್ಲಿ ಪರಿಗಣಿಸಲಾಗುತ್ತದೆ. ಭಾರತದಲ್ಲಿಯೂ ಸಹ ಭಾರತೀಯ ದಂಡ ಸಂಹಿತೆ( IPC )ಯಲ್ಲಿ ಸಮಾಜ ಸೇವೆಯನ್ನೇ ಶಿಕ್ಷೆ ಎಂದು ನೀಡಲು ಅನೂಕುಲವಾಗುವ ಒಟ್ಟು 61 ಅಪರಾಧ'ಗಳಿವೆ. ಈ ಅಪರಾಧಗಳಿಗೆ ಜೈಲು ಶಿಕ್ಷೆ ಕಡಿಮೆ ಇದ್ದು, ಕೆಲ ಅವಧಿಯ ಶಿಕ್ಷೆಯ ಅಪರಾಧಿಗಳಿಗೆ ಜೈಲಿಗೆ ಕಳುಹಿಸಿ ಅವರನ್ನು, ಅವರ ಕುಟುಂಬವನ್ನು ಬೀದಿಪಾಲು ಮಾಡುವುದಕ್ಕಿಂತಲೂ ಆ ಅಪರಾಧಿಗಳನ್ನು ಸಮಾಜ ಸೇವೆಯಲ್ಲಿ ತೊಡಗುವಂತೆ ಮಾಡಿದರೆ ಸಮಾಜಕ್ಕೆ ಅಷ್ಟೇ ಅಲ್ಲ. ಆ ಅಪರಾಧಿಗೂ ಉತ್ತಮ.

ಈ ಶಿಕ್ಷೆಯ ರೂಪದ ಸಮಾಜ ಸೇವೆ (Community Servive Order ) ಭಾರತಕ್ಕೆ ಹೊಸದೇನಲ್ಲ. ಬಾಲಾಪರಾಧಿಗಳಿಗೆ ಮೀಸಲಾದ ಖಿಜಎಣಾಚುಟುಜಎಣಾಚಿಜಂಥಿಣ ದ ಕಲಂ 15 ರಲ್ಲಿ ಕಮ್ಯುನಿಟಿ ಸರ್ವಿಸ್ ಬಗ್ಗೆ ಹೇಳಲಾಗಿದೆ. ಅಷ್ಟೇ ಅಲ್ಲದೇ ಅಪರಾಧಿಕ ಪ್ರತಿಬಂಧಕ ಕಾನೂನು ಅದಿನಿಯಮ-1958 ( Probation of fenders Act ) ಕಲಂ 4ರಲ್ಲಿ ಈ ರೀತಿಯದೇ ಅರ್ಥ ಬರುವ ಕಾಯಿದೆ ಇರುತ್ತದೆ. ಕಲಂ 4ರಲ್ಲಿ ಹೇಳಿರುವ ಕೆಲವೊಂದು ಅಪರಾಧಗಳಿಗೆ Good Conduct ಮತ್ತು Good behaviour ಮೇಲೆ ಜೈಲಿಗೆ ಕಳುಹಿಸದೇ ಬಿಡುಗಡೆಮಾಡಬಹುದು ಎಂದು ವಿವರಿಸಲಾಗಿದೆ. ಅಡುಜಣಾಛಿಣ ಎನ್ನುವ ಶಬ್ಧ ನೆಡೆಸು, ದಾರಿ ತೋರು, ವ್ಯವಸ್ಥೆಗೊಳಿಸು, ಜರುಗಿಸು, ನಿರ್ವಹಿಸು ಎಂಬಿತ್ಯಾದಿ ಅರ್ಥವನ್ನು ಕೊಡುತ್ತದೆ. Good Conduct ಎಂದರೆ ಸುಮ್ಮನೆ ಕುಳಿತು ಕೊಳ್ಳುವುದು ಎಂದರ್ಥವಲ್ಲ. ಒಳ್ಳೆಯ ನಡವಳಿಕೆಗಳು, ಜನಪರ ಕಾರ್ಯಗಳು Good Conduct ಗಳಾಗಬಲ್ಲವು. ಅಪರಾಧಿಕ ಪ್ರತಿಬಂಧಕ ಕಾನೂನಿನ ಮೇಲೆ ಬಿಡುಗಡೆ ಮಾಡುವಾಗ ಸಮಾಜ ಸೇವೆಯನ್ನು ಮಾಡಲು ನ್ಯಾಯಲಯಗಳು ನಿರ್ದೇಶಿಸಿಬಹುದು ಎಂಬುದು ಈ ಲೇಖಕನ ಅಭಿಪ್ರಾಯ.

ಹೊಸದಿಲ್ಲಿ ರಸ್ತೆಯಲ್ಲಿ ಯರ್‍ರಾಬಿರ್‍ರಿ ಬೈಕ್ ಓಡಿಸಿ ಪೊಲೀಸರ ಕೈಗೆ ಸಿಕ್ಕಿಬಿದ್ದ ಸವಾರರಿಬ್ಬರಿಗೆ ಗುರುದ್ವಾರದಲ್ಲಿ ಪಾತ್ರೆ ತೊಳೆಯುವಂತೆ ದಿಲ್ಲಿಯ ನ್ಯಾಯಲಯವೊಂದು ಆದೇಶಿಸಿದೆ. ಈ ಆರೋಪಿಗಳಿಗೆ ಜಾಮೀನಿನ ನಿಯಮಗಳನ್ನು ಹಾಕಲಾಗಿದೆ.

ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವಾಗ ಷರತ್ತುಗಳನ್ನು ಹಾಕಬಹುದು. ಆದರೆ ಆ ಷರತ್ತುಗಳು ಆ ಪ್ರಕರಣದ ತನಿಖೆಯ ಅನುಕೂಲಕ್ಕಾಗಿ ಮತ್ತು ಪ್ರಕರಣದ ವಿಲೇವಾರಿಗಾಗಿ, ಜಾಮೀನಿನ ಸಂದರ್ಬದಲ್ಲಿ ಈ ರೀತಿ ಪಾತ್ರೆ ತೊಳೆಯುವ ಷರತ್ತುಗಳನ್ನು ವಿಧಿಸಲು ಕಾನೂನಿನಲ್ಲಿ ಬರಲಾರದು ಎನ್ನುವುದು ಈ ಲೇಖಕನ ಅಭಿಪ್ರಾಯ. ಶಿಕ್ಷೆಯು ಎಂದಿಗೂ ಜಾಮೀನಿನ ಸಂದರ್ಬದಲ್ಲಿ ಬರಲಾರದು. ಒಟ್ಟಿನಲ್ಲಿ ಸಮಾಜ ಸೇವೆ ಎಂಬ ಶಿಕ್ಷೆ ಜಾರಿಗೆ ಬರಬೇಕಾದದ್ದು ಇಂದು ಅನಿವಾರ್ಯ. ಟ್ರಾಫಿಕ್ ನಿಯಮ ಮುರಿದವನಿಗೆ ಟ್ರಾಫಿಕ್ ಪೋಲಿಸರ ಜೊತೆ ಟ್ರಾಫಿಕ್ ನಿಯಂತ್ರಣ ಮಾಡುವ ಶಿಕ್ಷೆ, ಕುಡಿದು ಗಾಡಿ ಓಡಿಸಿದವನಿಗೆ ಪೌರ ಕಾರ್ಮಿಕರೊಟ್ಟಿಗೆ ರಸ್ತೆ ಸ್ವಚ್ಚ ಮಾಡುವ ಶಿಕ್ಷೆ, ರಸ್ತೆಯಲ್ಲಿ ಜಗಳವಾಡಿದವನಿಗೆ ಆಸ್ಪತ್ರೆಯಲ್ಲಿನ ತ್ಯಾಜ್ಯ ಸ್ವಚ್ಚ ಮಾಡುವ ಶಿಕ್ಷೆ, ಒಂದು ಗಿಡ ಕಡಿದವನಿಗೆ 100 ಗಿಡ ನೆಟ್ಟು ಅದನ್ನು ಎರಡು ವರ್ಷಗಳವರೆಗೆ ಪಾಲನೆ ಮಾಡುವ ಶಿಕ್ಷೆ-ಹೀಗೆ ಸಮಾಜ ಸೇವೆಯ ಶಿಕ್ಷೆ ನೀಡಿದರೆ ಅಪರಾಧಿಗಳೇ ದೇಶ ಕಟ್ಟುವ ಕಾಯಕದಲ್ಲಿ ಇಳಿದಂತಾಗುತ್ತದೆ. ಶಿಕ್ಷೆಯು ನಾಲ್ಕು ಗೋಡೆಯ ಒಳಗಿರುವುದಕ್ಕಿಂತ ಈ ರೀತಿಯ ಸಮಾಜ ಸೇವೆಯ ರೂಪದಲ್ಲಿದ್ದರೆ ಒಳ್ಳೆಯದು. ಇವೆಲ್ಲ ಚಿಂತಿಸಲು ನಮ್ಮ ಜನ ನಾಯಕರಿಗೆ ಪುರುಸೊತ್ತು ಎಲ್ಲಿದೆ? ಪುರುಸೊತ್ತು ಇದ್ದರೂ ಇಂತಹ ವಿಷಯಗಳು ತಲೆಗೆ ಹೋಗಬೇಕಲ್ಲ !!

ಮಧುರ ಪ್ರಕಾಶನ

# ಪ್ರೋಗ್ರೆಸಿವ್ ರಿಲ್ಯಾಕ್ಸೇಷನ್ ವಿಧಾನ

...ಎಂ.ಎಲ್. ರಾಘವೇಂದ್ರ ರಾವ್

ಈ ವಿಧಾನದ ಮೂಲಕ ನೀವು ಸೆಲ್ಫ್ ಹಿಪ್ನಾಸಿಸ್‌ನೊಳಗೆ ಹೋಗುವುದು ತುಂಬಾ ಸುಲಭ. ಮೊದಲು ನೀವು ಸೋಫದಲ್ಲಾಗಲೀ, ಈಜೀ ಚೇರ್‌ನಲ್ಲಾಗಲೀ ಕೂರಬೇಕು. ಅಥವಾ ಮಂಚದ ಮೇಲೆ ಅಂಗಾತ ಮಲಗಬೇಕು. ನೀವು ಕುರ್ಚಿಯಲ್ಲಿ ಕುಳಿತರೇ ಎರಡು ಕಾಲುಗಳು ಬೇರೆ ಬೇರೆಯಾಗಿರಬೇಕು. ಕಾಲ್ಮೇಲೆ ಕಾಲು ಹಾಕಬಾರದು. ಕೈಗಳನ್ನು ಸಹ ಯಾವ ಕಾಲು ಕಡೆ ಕೈ ಆ ಕಾಲು ಕಡೆನೇ ಇರಬೇಕು. ಹಾಗಲ್ಲದೆ ನೀವು ಮಂಚದ ಮೇಲೆ ಅಂಗಾತ ಮಲಗಿದರೆ ಕೈಗಳನ್ನು ಸಹ ಮಂಚಕ್ಕೆ ಒರಗುವಂತೆ ಪೂರ್ತಿಯಾಗಿ ವಿಶ್ರಾಂತಿ ಪೊಜಿಷನ್‌ನಲ್ಲಿ ಮಲಗಬೇಕು.

ನೀವು ಮನಸ್ಸಿನಲ್ಲಿ ಬೇರೆ ವಿಷಯಗಳ ಬಗ್ಗೆ ಆಲೋಚಿಸಬಾರದು. ಈಗ ನೀವು ಸಜೆಷನ್ಸ್... ನಿಮಗಾಗಿ ನೀವು ಮನಸ್ಸಿನಲ್ಲಿ ಕೊಟ್ಟುಕೊಳ್ಳಬೇಕು. ಸಜೆಷನ್ಸ್ ಹೊರಗೆ ಕೇಳುವಂತೆ ಅನ್ನಬಾರದು.

**ಸಜೆಷನ್ಸ್ ಹೀಗೆ ಕೊಡಬೇಕು...**

(ನಿಮ್ಮ ಬಲಗಾಲನ್ನು ಮನಸ್ಸಿನ ಊಹಿಸುತ್ತಲಿರಿ. ಕಣ್ಣುಗಳನ್ನು ಮುಚ್ಚಿಕೊಂಡು ಮನಸ್ಸಿನಲ್ಲಿ ಕಾಲನ್ನು ಊಹಿಸಿವುದು)

"ನನ್ನ ಬಲಗಾಲು ಬೆರಳುಗಳು ರಿಲಾಕ್ಸ್ ಆಗುತ್ತಿರುವಂತಿದೆ."

(ಕ್ರಮವಾಗಿ ರಿಲಾಕ್ಸ್ ಅಂದಾಗ ಆ ಜಾಗದಲ್ಲಿ ಟೆನ್ಷನ್ ಇಲ್ಲದೇ, ಹಾಯಾಗಿ ಭಾರವಾಗಿ ಗಂಭೀರವಾಗಿ ಫೀಲ್ ಆಗಿತ್ತಿರಬೇಕು)

"ಇನ್ನೂ... ಇನ್ನೂ...' ಇನ್ನೂ ಚೆನ್ನಾಗಿ ರಿಲಾಕ್ಸ್ ಆಗುತ್ತಿವೆ.

"ಹಾಗೇ ಕಾಲುಗಳ ಮೆಲ್ಬಾಗದವರೆಗೂ ಕ್ರಮ ಕ್ರಮೇಣ ರಿಲಾಕ್ಸ್ ಆಗುತ್ತಿದೆ."

"ಕಾಲುಗಳು ಅಷ್ಟು ಭಾರವನ್ನು ಕದಲಿಸಿದಂತಾಗುತ್ತದೆ ವಿಶ್ರಾಂತಿ ಹಂತದಲ್ಲಿರುವಂತೆ."

"ನನ್ನ ಬಲಗಾಲೆಲ್ಲಾ ಚೆನ್ನಾಗಿ ರಿಲಾಕ್ಸ್ ಆಗಿಹೋಗಿದೆ."

"ಇನ್ನೂ... ಇನ್ನೂ... ರಿಲಾಕ್ಸ್... ರಿಲಾಕ್ಸ್...'

(ನೀವು ರಿಲಾಕ್ಸ್ ಆಗಿಸುತ್ತಿರುವ ಭಾಗವನ್ನೇ ಮನಸ್ಸಿನಲ್ಲಿ ಊಹಿಸುತ್ತಿರಬೇಕು)

(ಹಾಗೇ ಬಲಗೈಯನ್ನು ಸಹ ಊಹಿಸಿರಿ)

"ನನ್ನ ಬಲಗೈ ಬೆರಳುಗಳು ಕ್ರಮೇಣ ರಿಲಾಕ್ಸ್ ಆಗುತ್ತಿವೆ..."

"ರಿಲಾಕ್ಸ್... ರಿಲಾಕ್ಸ್... ರಿಲಾಕ್ಸ್..."

(ಎನ್ನುತ್ತಾ ಹಿತವಾಗಿ ಅನುಭವಿಸಿ )

ಕೈ ಕ್ರಮಕ್ರಮೇಣ ಭಾರವಾಗಿ... ಚೆನ್ನಾಗಿ ರಿಲಾಕ್ಸಾಗಿರುತ್ತದೆ... ರಿಲಾಕ್ಸ್... ರಿಲಾಕ್ಸ್...

"ಕೈ ಪೂರ್ತಿಯಾಗಿ ರಿಲಾಕ್ಸ್ ಆಗುತ್ತಿದೆ... ಇನ್ನೂ... ಇನ್ನು... ನನ್ನ ಬಲಗೈ ಚೆನ್ನಾಗಿ ರಿಲಾಕ್ಸ್ ಆಯಿತು.'

ಈಗ ತನ್ನ ಬಲಗಾಲು, ಬಲಗೈ ಪೂರ್ತಿಯಗಿ ರಿಲಾಕ್ಸ್ ಆಗಿರೆ. ಎಂಥಾದ್ದೋ ವಿಶೇಷವಾದ ಸ್ಥಿತಿ ಉಂಟದಂತಿದೆ (ಈಗ ನಿಮ್ಮ ಬಲಗಾಲು , ಬಲಗೈಗೆ, ಎಡಗಾಲು, ಎಡಗೈಗೆ ವ್ಯತ್ಯಾಸವನ್ನು ಗಮನಿಸಬೇಕು)

ಎಡಗಾಲನ್ನು ರಿಲಾಕ್ಸ್ ಮಾಡಿ

'ನನ್ನ ಎಡಗಾಲು ಪಾದದ ಹತ್ತಿರದಿಂದ ಕ್ರಮೇಣ ಮೇಲಕ್ಕೆ ಕಾಲೆಲ್ಲ ರಿಲಾಕ್ಸ್ ಆಗುತ್ತಿದೆ."

"ರಿಲಾಕ್ಸ್... ರಿಲಾಕ್ಸ್... ರಿಲಾಕ್ಸ್..."

" ಮೇಲಕ್ಕೆ ಇನ್ನೂ ಮೇಲಕ್ಕೆ ... ಮೇಲ್ಮೆಲಕ್ಕೆ ರಿಲಾಕ್ಸ್ ಆಗುತ್ತಿದೆ.'

(ಹೀಗೆ ಕ್ರಮವಾಗಿ ರಿಲಾಕ್ಸ್ ಮಾಡಿ)

**ಎಡಗೈಯನ್ನು ರಿಲಾಕ್ಸ್ ಮಾಡಿ**

' ನನ್ನ ಎಡಗೈ ಕೂಡಾ ಕ್ರಮವಾಗಿ ರಿಲಾಕ್ಸ್ ಆಗುತ್ತಾ ಕ್ರಮೇಣ ಕೈ ಮೇಲ್ಭಾಗದವರೆಗೂ ರಿಲಾಕ್ಸ್ ಆಗುತ್ತದೆ."

'ರಿಲಾಕ್ಸ್... ರಿಲಾಕ್ಸ್... ರಿಲಾಕ್ಸ್...'

ಇನ್ನೂ... ಇನ್ನೂ... ಮೇಲಕ್ಕೆ... ಮೇಲ್ಮೇಲಕ್ಕೆ ಪೂರ್ತಿಯಾಗಿ ಕೈ ಎಲ್ಲ ರಿಲಾಕ್ಸ್ ಆಗುತ್ತದೆ.

ಈಗ ನನ್ನ ಎರಡು ಕೈಗಳು, ಎರಡು ಕಾಲುಗಳು ಚೆನ್ನಗಿ ರಿಲಾಕ್ಸ್ ಅದೆವು. ನನ್ನ ಎರಡು ಕೈಗಳು, ಎರಡು ಕಲುಗಳ ಜೊತೆಗೆ ಇತರ ದೇಹವೆಲ್ಲ ಕ್ರಮೇಣ ಭಾರವಾಗಿ ಹೋಗುತಿದೆ. ಇನ್ನೂ... ಇನ್ನೂ... ಭಾರವೇರುತ್ತಿದೆ...

ರಿಲಾಕ್ಸ್... ರಿಲಾಕ್ಸ್... ಈಗ ನನಗೆ ತುಂಬಾ ಹಿತವಾಗಿ... ಹಾಯಾಗಿ... ಪ್ರಶಾಂತವಾಗಿ... ಸುಖವಾಗಿದೆ.

ಹೀಗೆ ಕಾಲುಗಳು, ಕೈಗಳು, ದೇಹವೆಲ್ಲ ರಿಲಾಕ್ಸ್ ಆದ ನಂತರ ನೀವು ಉಸಿರನ್ನು ಗಾಢವಾಗಿ ಹೀರುತ್ತಾ, ಬಿಡುತ್ತಲಿರಿ. ಹಾಗೇ ಹತ್ತು ಬರಿ ಮಾಡಬೇಕು. ಪ್ರತಿಬಾರಿ ಶ್ವಾಸ ಹೀರಿ ಬಿಡುತ್ತಿದ್ದಾಗಲೆಲ್ಲ ನೀವು ಇನ್ನೂ ಪ್ರಶಾಂತವಾದ ಸ್ಥಿತಿಗೆ ಹೋಗುತ್ತಿರುವಂತೆ ಭಾವಿಸಬೇಕು. ಆ ಬಳಿಕ ಈಗೆ ಸಜೆಷನ್ಸ್ ಕೊಡಿ–

"ನನ್ನ ಮನಸ್ಸು ತುಂಬಾ ಪ್ರಶಾಂತವಾಗಿ... ಹಾಯಾಗಿದೆ. ನಾನು ಇನ್ನೂ... ಇನ್ನೂ... ಪ್ರಶಾಂತವಾದ ಸ್ತಿತಿಗೆ ಹೋಗುತ್ತಿದ್ದೆನೆ ತುಂಬಾ ಹಿತವಾಗಿ... ಪ್ರಶಾಂತವಾಗಿದೆ.

ನನ್ನ ಮೈ ಎಲ್ಲ ತುಂಬ ಭಾರವಾಗಿದೆ.

ಮನಸ್ಸು ಯಾವುದೋಸುಖವಾದ ಸ್ಥಿತಿಗೆ ಹೋಗುತ್ತಿರುವಂತಿದೆ. (ಈಗ 1 ರಿಂದ 20 ಅಂಕಗಳನ್ನು ಮನಸ್ಸಿನಲ್ಲೇ ಲೆಕ್ಕ ಹಕಿ... ಒಂದೊಂದು ಅಂಕೆಗೂ ನೀವು ಇನ್ನೂ ಗಾಢವಾದ ಸ್ಥಿತಿಗೆ ಹೋಗುತ್ತಿರುವಂತೆ ಫೀಲ್ ಆಗುತ್ತಲಿರಿ).

ನಾನು ಯವಾಗ ಮಾಮೂಲು ಸ್ಥಿತಿಗೆ ಬರಬೇಕು ಅಂದುಕೊಳ್ಳುತ್ತೇನೋ... ಆಗ ಕೂಡಲೆ ಮತ್ತೆ, ಮಾಮೂಲು ಸ್ಥಿತಿಗೆ ಬರಬಲ್ಲೇ. ಈಗ ನನ್ನ ಮನಸ್ಸು ತುಂಬಾ ಹಾಯಾಗಿ ಪ್ರಶಾಂತವಾಗಿದೆ.

ಇನ್ನೂ... ಇನ್ನೂ... ಗಾಢವಾದ ಸ್ಥಿತಿಗೆ ಹೋಗುತ್ತಿರುವಂತಿದೆ. ಚೆನ್ನಾಗಿ ರಿಲಾಕ್ಸ್ ಆಗಿದ್ದೇನೆ... ತುಂಬ ಹಾಯಾಗಿದೆ... ಇನ್ನೂ ಹಾಯಾಗಿ.. ಪ್ರಶಾಂತವಾಗಿದೆ.

ಮಿಲ್ಟನ್ ಹೆಚ್ ಎರಿಕ್‌ಸನ್ ಈ ವಿಧಾನವನ್ನು 1923 ರಲ್ಲಿ ಬೆಳಕಿಗೆ ತರುವ ಕೆಲಸ ನಡೆಯಿತು. ಸೆಲ್ಫ್ ಹಿಪ್ನಾಸಿಸ್‌ನೊಳಗೆ ಹೋಗುವುದಕ್ಕೆ ಈ ವಿಧಾನ ತುಂಬಾ ಉಪಯುಕ್ತಕರವಾಗಿರುತ್ತದೆ.

ನೀವು ಪ್ರಶಾಂತವಾದ ಕೋಣೆಯಲ್ಲಿ ಇರಬೇಕು. ಯಾವುದೇ ಶಬ್ದಗಳೂ ಇಲ್ಲದಂತೆ ನೋಡಿಕೊಳ್ಳಬೇಕು. ಕೋಣೆಯಲ್ಲಿನ ವಾತಾವರಣ ತೀರಾ ಸಾಖದಿಂದಗಲೀ ತಣ್ಣಗಾಗಲೀ ಇಲ್ಲದಂತೆ ನೋಡಿಕೊಳ್ಳಬೇಕು. ನೀವು ಸೋಫದಲ್ಲಾಗಲೀ, ಕುರ್ಚಿಯಲ್ಲಾಗಲೀ ನೆಲದ ಮೇಲಾಗಲಿ ಕೂರಬಹುದು. ನಿಮ್ಮ ಬಲಗೈಯನ್ನು ನಿಮ್ಮ ತೊಡೆಭಾಗದ ಮೇಲಿರಿಸಿರಿ. ಅಂಗೈ ಕೆಳಗಡೆಗೆ ಇರುವಂತೆ ಇರಿಸಬೇಕು. ನೀವು ಬೇರೆ ಯಾವುದೇ ವಿಷಯಗಳ ಕುರಿತಾಗಿ ಆಲೋಚಿಸದೆ ನಿಮ್ಮ ಮನಸ್ಸನ್ನು ನಿಮ್ಮ ಕೈಮೇಲೇ ಒಂದೇ ಪಾಯಿಂಟ್–ಅಂಶದ ಮೇಲೇ ನೆಡಬೇಕು.

ಹಾಗೆ ಮಾಡುತ್ತಾ ನೀವಾಗೆ ನೀವೇ ಮನಸ್ಸಿನಲ್ಲಿ ಸಜೆಷನ್ಸ್ ಕೊಡಬೇಕು. ಇದೋ... ಹೀಗೇ ಸಜೆಷನ್ಸ್ ಮನಸ್ಸಿನಲ್ಲಿ ಅಂದುಕೊಳ್ಳಬೇಕು. "ಈಗ ನನ್ನ ಮನಸ್ಸು ತುಂಬಾ ಪ್ರಶಾಂತವಾಗಿದೆ... ಹಾಯಾಗಿದೆ... ನಾನು ನನ್ನ ಕೈಯತ್ತ ಕೇಂದ್ರಿಕರಿಸುತ್ತಿದ್ದೆನೆ. (ಎರಡು ಬಾರಿ ಸಜೆಷನ್ಸ್ ರಿಪೀಟ್ ಮಾಡಿ)

ಈಗ ನನ್ನ ಕೈ ಕ್ರಮಕ್ರಮೇಣ ಹಗುರಾಗಿ ಹೋಗುತ್ತಿದೆ. ಈಗ ತಾನೇ ಕೈ ಹಗುರಾಗಿ ಹೋಗುತ್ತಿರುವಂತಿದೆ. ಹಗುರಾಗಿ ಹೋಗುತ್ತಿದೆ... ಇನ್ನೂ... ಹಗುರಾಗಿ ಹೋಗುತ್ತಿದೆ... ಗಾಳಿಯಲ್ಲಿ ಮೇಲಕ್ಕೆ ಎದ್ದು ಹೊಗುತ್ತಿರುವಂತಿದೆ.

ಕೈ ಹಗುರಾಗಿ... ಮೇಲಕ್ಕೆ... ಮೇಲಕ್ಕೆ... ಮೇಲ್ಮೇಲಕ್ಕೆ ಎದ್ದು ಹೋಗುತ್ತಿದೆ. ಇನ್ನೂ ಮೇಲಕ್ಕೆ... ತೀರಾ ಮೇಲಕ್ಕೆ ಎದ್ದು ಹೋಗುತ್ತಿದೆ.

(ಕೈಯಲ್ಲಿ ಮೆಲ್ಲನೆ ಕದಲಿಕೆ ಶುರುವಾದೊಡನೇ ಕೈ ಏಳುವ ವಿಧಾನವನ್ನು ಹಿಡಿದು ನೀವು ಸಜೆಷನ್ಸ್ ಇನ್ನೂ ರಿಪೀಟ್ ಮಡುವುದಾಗಲಿ, ಹೆಚ್ಚಿಸುವುದು, ಕಡಿಮೆ ಮಾಡುವುದು ಆಗಿಂದಾಗಲೇ ಮಾಡಿಕೊಳ್ಳಬಹುದು.)

ನನ್ನ ಕೈ ಮೇಲಕ್ಕೆ ಏಳುತ್ತಿದ್ದಂತೆಲ್ಲ ಕಣ್ಣು ಕೈಗಳು ಭಾರವಾಗಿ ವಾಲಿ ಹೋಗುತ್ತಿವೆ. ಇನ್ನೂ ಇನ್ನೂ ವಾಲಿ ಹೋಗುತ್ತಿವೆ.

' ನನ್ನ ಕಣ್ಣ ರೆಪ್ಪೆಗಳು ಭಾರವಾಗುತ್ತಿವೆ. ಕಣ್ಣು ರೆಪ್ಪೆಗಳು ವಾಲಿ ಹೋಗುತ್ತಿವೆ."

' ನನ್ನ ಕೈ ಮೇಲಕ್ಕೆದ್ದಂತೆಲ್ಲ ನನ್ನ ಮನಸ್ಸು ಪ್ರಶಾಂತವಾಗಿ ಹಾಯಾಗಿದೆ"

' ಇಡೀ ದೇಹವೆಲ್ಲ ತುಂಬಾ ಭಾರವಾಗುತ್ತಿರುವಂತಿದೆ."



ಕ್ರಿ.ಪೂ.540–468 ಮಹಾವೀರನ ಕಾಲ

(ಕೈ ಮೇಲಕ್ಕೆದ್ದ ನಂತರ ಪುನಃ ಮಾಮುಲಿನಂತೆ ಕೆಳಗೆ ಬಿಟ್ಟುಬಿಡಿ)

ನನ್ನ ಕಣ್ಣೆವೆಗಳು ಪೂರ್ತಿಯಾಗಿ ಮುಚ್ಚಿಕೊಂಡು ಹೋಗುತ್ತಿವೆ.

(ಕಣ್ಣ ರೆಪ್ಪೆಗಳನ್ನು ಮುಚ್ಚಿಬಿಡಿ)

ನನ್ನ ಮನಸು ಹಾಯಗಿ... ಪ್ರಶಾಂತವಾಗಿದೆ. ನಾನು ಇನ್ನೂ... ಇನ್ನೂ ಪ್ರಶಾಂತದ ಸ್ಥಿತಿಗೆ ಹೋಗುತ್ತಿದ್ದೇನೆ.

ನನ್ನ ದೇಹ ಎಲ್ಲ ಚೆನ್ನಾಗಿ ಭಾರವಾಗಿ ಹೋಗಿದೆ. ಮನಸ್ಸು ಯಾವುದೋ ಸ್ಥಿತಿಗೆ ಹೋಗುತ್ತಿರುವಂತಿದೆ.

ಇನ್ನೂ... ಇನ್ನೂ... ಪ್ರಶಾಂತವಾದ, ಗಾಢವಾದ ಸ್ಥಿತಿಗೆ ಹೋಗುತ್ತಿದೇನೆ.

(ಸಜೆಷನ್ಸ್ – ಮೆಲ್ಲನೆ, ಆ ಸ್ಥಿತಿಯನ್ನು ಅನುಭೂತಿ ಹೊಂದುವ ರೀತಿಯಾಗಿ ಸಜೆಷನ್‌ಗೆ ಕೆಲವು ಸೆಕೆಂಡಗಳ ವ್ಯವಧಿ ಕೊಡುತ್ತಿರಬೇಕು)

ತುಂಬಾ ಹಾಯಾಗಿ... ಇನ್ನೂ ಪ್ರಶಾಂತವಾಗಿರುವ ಸ್ಥಿತಿಗೆ... ಹೋಗುತ್ತಿದ್ದೇನೆ.

**ಕೆಂಪು ಬಲ್ಬನ್ನು ನೋಡುವ ವಿಧಾನ**

ಕೋಣೆಯಲ್ಲಿ ನಿಮಗೆ ಎದುರಾಗಿ ಸ್ವಲ್ಪ ಮೇಲ್ಭಾಗದಲ್ಲಿ ಕೆಂಪು ಬಲ್ಬನ್ನು ಏಪಾಟು ಮಡಿಕೊಳ್ಳಿ, ಜೀರೋಕೆಂಡಿಲ್ ಬಲ್ಬನ್ನು ವ್ಯವಸ್ಥೆ ಮಾಡಿಕೋಳ್ಳಬೇಕು. ಕೆಲವು ನಿಮಿಷ ಆ ಬಲ್ಬ್ ಕಡೆನೆ ನೋಡುತ್ತಾ ಕಣ್ಣುಗಳನ್ನು ಆಡಿಸದೆ ಇರಿ. ಉಸಿರನ್ನು ಗಾಢವಾಗಿ ಹೀರುತ್ತಾ ಬಿಡುತ್ತಿರಬೇಕು.

ಆನಂತರ ಈ ಕೆಳಗಿನ ರೀತಿಯಾಗಿ ಸಜೆಷನ್ಸ್ ಕೊಡಿ.

"ಆ ಬಲ್ಬ್ ಕಡೆ ನೋಡುತ್ತಿದ್ದರೇ ನನ್ನ ಕಣ್ಣೆವೆಗಳು ಕ್ರಮೇಣ ಭಾರವಾಗುತ್ತಿವೆ."

'ನಾನು ಕಣ್ಣೆವೆಗಳನ್ನು ತಾಡಿಸದೆ ನೋಡುತ್ತಿದ್ದೇನೇ."

'ನನ್ನ ಕಣ್ಣೆವೆಗಳು ಕ್ರಮೇಣ ಭಾರವಾಗುತ್ತಿವೆ. ದೇಹವಿಡೀ ಭಾರವಾಗುತ್ತವೆ."

(ಒಂದೊಂದು ಸಜೆಷನೆರಡು ಮೂರು ಬಾರಿ ರಿಪೇರಿ ಮಡಬೇಕು. ಸಜೆಷನ್ಸ್ ನಿಧಾನವಾಗಿ ಆ ಸ್ಥಿತಿಯನ್ನು ಅನುಭವಿಸುತ್ತಿರುವಂತೆ ಕೊಡಬೇಕು).

' ನನ್ನ ಕಣ್ಣೆವೆಗಳು ಕ್ರಮೇಣ ಭಾರವಾಗುತ್ತಿವೆ. ಇನ್ನೂ... ಭಾರವಾಗುತ್ತಿವೆ."

'ಇನ್ನು ನಾನು ಸ್ವಲ್ಪ ಕೂಡಾ ಬಲ್ಬ ಕಡೆ ನೋಡಲಾರದೆ ಹೋಗುತ್ತಿದ್ದೇನೆ" ಕ್ರಮೇಣ ಕಣ್ಣೆವೆಗಳು ವಾಲಿ ಹೋಗುತ್ತಿವೆ.

(ಕಣ್ಣೆವೆಗಳು ಭಾರವೇರಿದೊಡನೇ ಕಣ್ಣುಗಳನ್ನು ಮುಚ್ಚಿಕೋಳ್ಳಿ)

ನಾನು ಹಾಯಾಗಿ ಪ್ರಶಾಂತವಾಗಿ ಗಾಢವಾದ ಸ್ಥಿತಿಗೆ ಹೊರಟು ಹೋಗುತ್ತಿದ್ದೇನೆ. ನನ್ನ ಮೈ ಇಡೀ ಭಾರವಾಗಿ ಹೋಗುತ್ತಿದೆ. ಮನಸ್ಸು ಪ್ರಶಾಂತವಾಗಿ, ಹಿತವಾಗಿರುವ ಸ್ಥಿತಿಗೆ ಹೋಗಿಬಿಡುತ್ತದೆ.

(ಒಂದರಿಂದ ಹತ್ತು ಅಂಕೆಗಳನ್ನು ಲೆಕ್ಕಿಸಿರಿ. ನಿಧಾನವಾಗಿ ಲೆಕ್ಕ ಹಾಕಿ. ಒಂದೊಂದು ಅಂಕೆಯನ್ನು ನೀವು ಪ್ರಶಾಂತವಾದ ಸ್ಥಿತಿಗೆ ಹೋಗುತ್ತಿರುವಂತೆ ಊಹಿಸಿರಿ).

ಶ್ರೀಧರ ಶ್ಮರಣೆ

# ಶ್ರೀಧರ ಸ್ವಾಮಿಗಳು ಸಾಕ್ಷಾತ್ ಪರಬ್ರಹ್ಮ. ಅವರನ್ನು ವರ್ಣಿಸಲು ಶಬ್ದಗಳೇ ಇಲ್ಲ.

ಲೇ : ಶ್ರೀ ಜಿ. ಟಿ. ಶ್ರೀಧರಶರ್ಮ.
9480473568

ಶ್ರೀಧರ ಸ್ವಾಮಿಗಳು ಬರಿದೆ ಉಪದೇಶ ಕೊಟ್ಟವರೂ ಅಲ್ಲ, ಸೋಮಾರಿತನಕ್ಕೆ ಅವಕಾಶ ಕೊಟ್ಟವರೂ ಅಲ್ಲ. ಭಗವಂತನಲ್ಲಿ ಶರಣಾಗಬೇಕೆಂದು ಹೇಳುತ್ತಲೇ ಪುರುಷಪ್ರಯತ್ನಕ್ಕೂ ಬೆಲೆ ಕೊಡುತ್ತಿದ್ದರು. "ಮಂತ್ರದಿಂದ ಮಾವಿನಕಾಯಿ ಉದುರುವುದಿಲ್ಲ" ಎಂಬುದಕ್ಕೆ ಅವರ ಪರಮಭಕ್ತರ ಸ್ಮರಣೆಯಿದು. ಸಾಗರ ತಾಲೂಕಿನ ಮಡಸೂರು–ಲಿಂಗದಹಳ್ಳಿಯ ತಿಮ್ಮಪ್ಪ ಹೆಗಡೆ ಶ್ರೀಧರರ ಪರಮಭಕ್ತರು. ತಮ್ಮ ಪ್ರಾಯದಕಾಲದಲ್ಲಿ 'ಮದುವೆಯೇ ಬೇಡ' ಎಂದಿದ್ದ ಅವರು ಶ್ರೀಧರರ ಮಾತಿನಿಂದಲೇ ಮದುವೆಗೆ ಒಪ್ಪಿದ್ದು! 'ತಾಯಿ ವಾಕ್ಯದಂತೆ ಮದುವೆಯಾಗು, ಸದಾ ಧರ್ಮದಿಂದಿರು' ಎಂದು ಅಂದೇ ಗುರುಗಳು ತಿಳಿಸಿದ್ದರು. ಗುರುಗಳ ಮಾತಿಗೆ ಮನ್ನಣೆ ನೀಡಿ ಮದುವೆಯಾದ ಈ ತಿಮ್ಮಪ್ಪನವರಿಗೆ ಒಂದು ವಿಶೇಷವಾದ ಆಪತ್ತೆದುರಾಯಿತು. ಆಗಿನ ಕಾಲದ ಅಭೂತಪೂರ್ವ ರೋಗ ಇವರ ಅಡಿಕೆ ತೋಟಕ್ಕೂ ಅಪ್ಪಳಿಸಿತು. ಸ್ವಲ್ಪ ಆಧ್ಯಾತ್ಮಿಕವಾದಿಯಾಗಿದ್ದ ಹೆಗಡೆಯವರು ತಮ್ಮ ಕಾಯಕದಲ್ಲಿ ನಿರತರಾಗಿದ್ದರೇ ಹೊರತು ಇದನ್ನು ಶ್ರೀಧರರಲ್ಲಿ ಪ್ರಸ್ತಾಪಿಸಿಯೇ ಇರಲಿಲ್ಲ! ಶ್ರೀಧರರೇ ಅವರ ಊರುಗಳಲ್ಲಿ ಸಂಚಾರ ಮಾಡುವಾಗ ಒಂದು ದಿನ ನೇರವಾಗಿ ಇವರ ತೋಟಕ್ಕೇ ಬಂದಿಳಿದರು. ಅವರೊಂದಿಗೆ ತುಂಬ ಜನ ಭಕ್ತರೂ ಬಂದು ಸೇರಿದರು. ಒಂದು ಕೊಳದ ಬಳಿ



ಕ್ರಿ.ಪೂ.542–490 ಹರ್ಯಂಕ ಸಂತತಿ

ಕುಳಿತು ಹೆಗಡೆಯವರನ್ನೇ ಪ್ರಶ್ನಿಸಿದರು. “ಮೊದಲೇ ಏಕೆ ನನಗೆ ಹೇಳಲಿಲ್ಲ ಮಗು ! ತುಂಬಾ ಹಾಳಗಿದೆಯಲ್ಲವಾ? ನೀನೂ ನನ್ನ ಭಕ್ತನಲ್ಲವೇ?” ಕ್ರಮದಂತೆ ನೀರನ್ನು ಅಭಿಮಂತ್ರಿಸಿ ಪ್ರೋಕ್ಷಿಸಿದರು. “ಮಗ! ಚಿಂತೆ ಬೇಡ, ಇದು ರೋಗವೇ ಸರಿ. ರೋಗ ಬಂದ ಮರಗಳು ತಮ್ಮಿಂದ ತಾವೇ ಸತ್ತು ಹೊಗುತ್ತವೆ. ನಿನ್ನ ಪ್ರಯತ್ನ ಬಿಡಬೇಡ. ಮರ ಹೋದ ಕಡೆ ಮತ್ತೆ ಹೊಸ ಸಸಿ ಹಾಕು. ಎಲ್ಲವೂ ಒಳ್ಳೆಯದಾಗುತ್ತದೆ. ನಿನ್ನ ಕರ್ತವ್ಯವನ್ನು ಮಾತ್ರ ಬಿಡಬೇಡ. ಸದಾ ದಾನ–ಧರ್ಮ ಮಾಡುತ್ತಿರು, ಶುಭವಾಗಲಿ” ಎಂದು ಅಭಯ ನೀಡಿ ಮುಂದಿನೂರಿಗೆ ಹೊರಟರು.

ಈ ಸನ್ನಿವೇಶವನ್ನು ಈಗಲೂ ಸ್ಮರಿಸುವ ತಿಮ್ಮಪ್ಪ ಹೆಗಡೆಯವರು ಶ್ರೀಧರರ ಬಗ್ಗೆ ಹೀಗೆ ಹೇಳುತ್ತಾರೆ, “ಶ್ರೀಧರಸ್ವಾಮಿಗಳು ಸಾಕ್ಷಾತ್ ಪರಬ್ರಹ್ಮ. ಅವರನ್ನು ವರ್ಣಿಸಲು ಶಬ್ದಗಳೇ ಇಲ್ಲ. ಅವರಿಗೆ ಶ್ರೀಮಂತರೂ ಒಂದೇ, ನಿರ್ಗತಿಕರೂ ಒಂದೇ. ಪ್ರತ್ಯಕ್ಷ ಮಾತನಾಡುವ ದೇವರು, ತ್ರಿಕಾಲ ಜ್ಞಾನಿಗಳು. ಅಂಥ ಗುರುಗಳ ಆಶೀರ್ವಾದ ಪಡೆದ, ಅವರೊಡನೆ ಮಾತನಾಡಿದ ನಾನೇ ಧನ್ಯ. ಅಂಥ ಮಹಾಗುರು, ಭಗವಂತನಿಗೆ ಸಾವಿರ ಸಾವಿರ ಪ್ರಣಾಮಗಳು. ಅವರ ನೆನಪೇ ನನಗೆ ಮಾರ್ಗದರ್ಶನ, ಇದಕ್ಕಿಂತ ಇನ್ನೇನೂ ಬೇಕಿಲ್ಲ.”

ಶ್ರೀರಾಮ ಕಥಾಸಾರ.....

# ರಾಮ ಮುದ್ರೆಯುಂಗುರ ಕೊಟ್ಟಿದ್ದು

ಲೇ:– ಬಸ್ತಿ ಸದಾನಂದ ಪೈ, ಸಾಗರ

ಲಕ್ಷ್ಮಣನನ್ನು ಕಂಡೊಡನೆ ಸುಗ್ರೀವನು ಆಸನದಿಂದೆದ್ದು ಕೈ ಮುಗಿದು ನಿಲ್ಲುತ್ತಾನೆ. ರಾಮನ ಕಾರ್ಯಕ್ಕೆ ಮನಸ್ಸು ಮಾಡದೇ ಪಾನಾಸಕ್ತನಾಗಿ ಉಪಕಾರ ಮಾಡಿದವನನ್ನು ಮರೆತು ಕೃತಘ್ನನಾಗಿರುತ್ತಿ. ಕೃತಘ್ನರನ್ನು ಕೊಲ್ಲಬೇಕೆಂದು ಬ್ರಹ್ಮನೇ ಹೇಳಿದ್ದಾನೆ. ಅಂಥವರಿಗೆ ಪ್ರಾಯಶ್ಚಿತ್ತವಿಲ್ಲ ಎನ್ನುತ್ತಾನೆ.

ಲಕ್ಷ್ಮಣನ ಮಾತುಗಳನ್ನು ಕೇಳಿ ತಾರೆಯು ಸುಗ್ರೀವನು ಕೃತಘ್ನನಲ್ಲ. ಸುಳ್ಳು ಮಾತಾಡುವವನೂ ಅಲ್ಲ. ಧೂರ್ತನೂ ಅಲ್ಲ. ವಿಶ್ವಾಮಿತ್ರನೇ ಘೃತಾಚಿಯಲ್ಲಿ ಹತ್ತುವರ್ಷ ಅನುರಕ್ತನಾಗಿದ್ದು ಅದನ್ನು ಒಂದು ಹಗಲು ಎಂದು ಭಾವಿಸಿದನಂತೆ. ಅಂತಹ ಋಷಿಗಳೇ ಕಾಲ ಕಳೆದುದನ್ನು ತಿಳಿಯಲಿಲ್ಲವೆಂದಮೇಲೆ ಇತರ ಜನರ ಮಾತೇನು? ಲಕ್ಷ್ಮಣ ಸ್ಪಷ್ಟವಾದ ವಿಷಯ ತಿಳಿಯದೇ ಕೋಪಾವಿಷ್ಟನಾಗಬೇಡ. ಸುಗ್ರೀವನು ರಾಜ್ಯವನ್ನು ರುಮೆಯನ್ನೂ ನನ್ನನ್ನೂ ಬಿಟ್ಟಾನೆಯೇ ಹೊರತು, ಕೊಟ್ಟ ಮಾತನ್ನು ನೆರವೇರಿಸದೇ ಬಿಡುವುದಿಲ್ಲ. ಲಂಕೆಯಲ್ಲಿ ನೂರು ಸಾವಿರ ಕೋಟಿ ರಾಕ್ಷಸರು ಇರುವರಂತೆ. ಅವರನ್ನು ಕೊಲ್ಲಲು ಸೈನ್ಯದ ಸಹಾಯವಿಲ್ಲದೇ ಸಾಧ್ಯವಿಲ್ಲ. ಅದಕ್ಕಾಗಿ ಪ್ರಪಂಚದಾದ್ಯಂತ ಇರುವ ಕಪಿಶ್ರೇಷ್ಠರನ್ನು ಸೈನ್ಯ ಸಮೇತರಾಗಿ ಕರೆತರಲು ಏರ್ಪಾಟು ಮಾಡಿರುವನು. ಇಷ್ಟರಲ್ಲಿಯೇ ಅವರೆಲ್ಲರೂ ಇಲ್ಲಿಗೆ ಬರುವವರಿದ್ದಾರೆ. ಎಂದು ಸಮಾಧಾನ ಪಡಿಸುತ್ತಾಳೆ.

ಧರ್ಮಾತ್ಮನಾದ ರಾಮನು ನೆಪಮಾತ್ರಕ್ಕೆ ಸಹಾಯಕ್ಕೆಂದು ನನ್ನನ್ನಿಟ್ಟುಕೊಂಡು ತನ್ನ ಪರಾಕ್ರಮದಿಂದಲೇ ರಾವಣನನ್ನು ಕೊಲ್ಲುತ್ತಾನೆ ರಾವಣನನ್ನು ಪರಿವಾರ ಸಹಿತ ಕೊಲ್ಲಲು ಹೋಗುವ ರಾಮನ ಹಿಂದೆ ನಾನು ನಡೆದುಬರುತ್ತೇನೆ. ನನ್ನಿಂದೇನಾದರೂ ತಪ್ಪಾಗಿದ್ದರೆ ಕ್ಷಮಿಸು ಎಂದು ಸುಗ್ರೀವನು ಲಕ್ಷ್ಮಣನಲ್ಲಿ ಭಿನ್ನವಿಸುತ್ತಾನೆ.

ಸುಗ್ರೀವನ ಮಾತುಗಳನ್ನು ಕೇಳಿ ಲಕ್ಷ್ಮಣನು ಸುಪ್ರೀತನಾಗುತ್ತಾನೆ. ಧರ್ಮವನ್ನು ತಿಳಿದು ತನ್ನ ಲೋಪವನ್ನು ತಿಳಿದು ಮಾತಾಡುವವನು ಯೋಗ್ಯವಾದುದನ್ನೇ ಮಾಡುತ್ತಾನೆ. ನಿನ್ನ ಸಹಾಯವು ದೇವತೆಗಳ ಅನುಗ್ರಹದಿಂದ ಲಭ್ಯವಾಗಿದೆ. ನನ್ನೊಡನೆ ಬಂದು ರಾಮನನ್ನು ನೋಡು. ನಾನು ಏತಕ್ಕೆ ಕಠಿಣೋಕ್ತಿಗಳನ್ನಾಡಿದೆ ಎಂಬುದು ನಿನಗೆ ತಿಳಿಯುತ್ತದೆ ಎನ್ನುತ್ತಾನೆ.

ಆ ಕೂಡಲೇ ಸುಗ್ರೀವನು ಎಲ್ಲಾ ದಿಕ್ಕುಗಳಿಗೆ ದೂತರನ್ನು ಕಳಿಸಿ ಎಲ್ಲಾ ಕಪಿವೀರರು ಹತ್ತು ದಿನಗಳೊಳಗೆ ಬರುವಂತೆ ತಪ್ಪಿದಲ್ಲಿ ಮರಣ ದಂಡನೆಗೆ ಗುರಿಯಾಗುವರೆಂದು ಹೇಳಿ ಕಳಿಸುತ್ತಾನೆ. ಪೃಥ್ವಿಯಲ್ಲಿರುವ ಸಮಸ್ತ ವಾನರರೂ ತ್ವರಿತವಾಗಿ ಬರುವಂತೆ ಏರ್ಪಾಡು ಮಾಡುವಂತೆ ಹನುಮಂತನಿಗೆ ಹೇಳುತ್ತಾನೆ.

ಅಂತರಿಕ್ಷ ಮಾರ್ಗವಾಗಿ ದೂತರು ತಮಗೆ ತಿಳಿಸಿದ ಎಲ್ಲಾ ದಿಕ್ಕುಗಳಿಗೆ ಪ್ರಯಾಣಿಸಿ ಸುಗ್ರೀವನ ಆಜ್ಞೆಯನ್ನು ತಿಳಿಸುತ್ತಾರೆ. ಕೂಡಲೇ ಕೋಟಿ ಕೋಟಿ ಸಂಖ್ಯೆಯಲ್ಲಿ ಬಂಗಾರದ ವರ್ಣದಿಂದ ಕೂಡಿದವರು ಅಂಗಾರಕ ಗ್ರಹದಂತೆ ಕೆಂಪಗಿದ್ದವರು ಎಲ್ಲರೂ ಹೊರಟುಬರುತ್ತಾರೆ.

ದಾರಿಯಲ್ಲಿ ವಾನರ ವೀರರು ಹಿಮವತ್ ಪರ್ವತದಲ್ಲಿ ಒಂದು ಮಹಾವೃಕ್ಷವನ್ನು ಕಾಣುತ್ತಾರೆ. ಹಿಂದೆ ಸಕಲ ದೇವತೆಗಳು ಮಹೇಶ್ವರ ಯಜ್ಞ ಮಾಡಿದ ಸ್ಥಳವದು. ಅಲ್ಲಿ ಚೆಲ್ಲಿದ ಆಜ್ಯಾದಿ ಹವಿಸ್ಸುಗಳ ಸಂಪರ್ಕದಿಂದ ಉದ್ಭವಿಸಿದ ಅಮೃತದ ಸಮಾನವಾದ ರುಚಿಯುಳ್ಳ ಫಲಮೂಲಗಳನ್ನು ಒಮ್ಮೆ ತಿಂದರೆ ಒಂದು ತಿಂಗಳಕಾಲ ಅವರು ತೃಪ್ತರಾಗುತ್ತಾರೆ. ಫಲವನ್ನೇ ಆಹಾರವಾಗುಳ್ಳ ವಾನರ ಸೇನಾಧಿಪತಿಗಳು ದಿವ್ಯವಾದ ಆ ಫಲಮೂಲಾದಿಗಳನ್ನೂ ದಿವ್ಯೌಷಧಿಗಳನ್ನೂ ಸಂಗ್ರಹಿಸಿ ತ್ವರೆಯಿಂದ ಸುಗ್ರೀವನಿದ್ದೆಡೆಗೆ ಬರುತ್ತಾರೆ.



ಕ್ರಿ.ಪೂ.413–362 ಶಿಶುನಾಗ ಸಂತತಿ.

ಕಪಿಗಳು ತಂದುಕೊಟ್ಟ ಕಾಣಿಕೆಗಳನ್ನು ಸುಗ್ರೀವನು ಸ್ವೀಕರಿಸುತ್ತಾನೆ. ಲಕ್ಷ್ಮಣನೊಡನೆ ಕಿಷ್ಕಿಂಧೆಯಿಂದ ಸುಂದರವಾದ ಬಂಗಾರದ ಪಲ್ಲಕ್ಕಿಯಲ್ಲಿ ಕುಳಿತು ಶ್ವೇತಛತ್ರವನ್ನು ಹಿಡಿಸಿ ಬಿಳಿಯ ಚಾಮರಗಳಿಂದ ಸುತ್ತಲೂ ಬೀಸುತ್ತಿರಲು ಶಂಖ ಭೇರಿಧ್ವನಿಗಳಿಂದಲೂ ಕಪಿಗಳಿಂದಲೂ ಜಯಕಾರ ಮಾಡಿಸಿಕೊಂಡು ಹೊರಟು ರಾಮನಿರುವ ವನಪ್ರದೇಶಕ್ಕೆ ಬರುತ್ತಾರೆ.

ಲಕ್ಷ್ಮಣನೊಡನೆ ಸುಗ್ರೀವನು ರಾಮನನ್ನು ಕಾಣುತ್ತಾನೆ. ಸುಗ್ರೀವನು ಪ್ರಮುಖ ಕಪಿವೀರರನ್ನು ರಾಮನಿಗೆ ಪರಿಚಯಿಸಿ ಸೈನ್ಯವನ್ನು ಕಾಡುಗಳಲ್ಲಿ ಬೀಡುಬಿಡುವಂತೆ ಹೇಳಿಕಳಿಸುತ್ತಾನೆ.

ರಾಮಾ, ನನ್ನ ಸೈನ್ಯವೆಲ್ಲವೂ ನಿನ್ನ ಆಜ್ಞೆಗಾಗಿ ಕಾಯುತ್ತಿದೆ. ನಾವು ಏನು ಮಾಡಬೇಕೆಂಬುದನ್ನು ತಿಳಿಸು. ಕೆಲಸವನ್ನು ಹೇಗೆ ನಿರ್ವಹಿಸಬೇಕೆಂಬುದು ನನಗೆ ತಿಳಿದಿದೆಯಾದರೂ ನೀನು ಆಜ್ಞೆಮಾಡಿದಂತೆ ನಡೆಯುತ್ತೇವೆ ಎಂದು ಸುಗ್ರೀವನು ಭಿನ್ನವಿಸುತ್ತಾನೆ.

ಸುಗ್ರೀವನನ್ನು ತೋಳುಗಳಿಂದ ಬಿಗಿದಪ್ಪಿ , ಪ್ರಾಜ್ಞನೇ, ರಾವಣನು ವಾಸಿಸುವ ಸ್ಥಳ ಯಾವುದು? ಸೀತೆ ಬದುಕಿರುವಳೇ ಇಲ್ಲವೋ ಎಂಬುದನ್ನು ಮೊದಲು ತಿಳಿಯಬೇಕು. ಸೀತೆಯಿರುವ ಸ್ಥಳವನ್ನು ರಾವಣನಿರುವ ಸ್ಥಳವನ್ನೂ ತಿಳಿದ ಮೇಲೆ ಮುಂದೇನು ಮಾಡಬೇಕೆಂದು ಸಮಾಲೋಚಿಸುತ್ತೇನೆ ಎನ್ನುತ್ತಾನೆ.

ಸುಗ್ರೀವನು 'ವಿನುತ'ನೆಂಬ ಕಪಿಗಳ ನಾಯಕನನ್ನು ಲಕ್ಷ ಕಪಿಗಳಿಂದ ಕೂಡಿ ಪೂರ್ವದಿಕ್ಕಿಗೂ, ನೀಲ ಹನುಮಂತ ಮೊದಲಾದವರನ್ನು ಅಂಗದನ್ನು ದಕ್ಷಿಣದಿಕ್ಕಿನಲ್ಲಿ, ಸೀತೆಯನ್ನು ಹುಡುಕಲು ಕಳಿಸುತ್ತಾನೆ. ಸಮಸ್ತ ಗಿರಿ, ಕಾನನ ಸರೋವರಗಳಲ್ಲಿ ಮಂದರ ಪರ್ವತದ ಶಿಖರಗಳಲ್ಲಿ ಒಂದಿಷ್ಟೂ ಸ್ಥಳವನ್ನು ಬಿಡದೆ ಹುಡುಕಿ ಒಂದು ತಿಂಗಳೊಳಗೆ ಮರಳಿ ಬರುವಂತೆ ತಿಳಿಸುತ್ತಾನೆ.

ಪಶ್ಚಿಮ ದಿಕ್ಕಿಗೆ ತಾರೆಯ ತಂದೆಯಾದ ಸುಷೇಣನನ್ನೂ, ಶತವಲಿ ಎಂಬ ವಾನರ ಶ್ರೇಷ್ಠನನ್ನು ಉತ್ತರ ದಿಕ್ಕಿಗೂ ಲಕ್ಷ ಲಕ್ಷ ಮಂದಿಯೊಡನೆ ಸೀತೆಯನ್ನು ಹುಡುಕುವುದಕ್ಕಾಗಿ ಕಳಿಸುತ್ತಾನೆ.

ಅವರು ಹುಡುಕುವ ಸ್ಥಳಗಳಲ್ಲಿರುವ ಎಲ್ಲಾ ನದಿ, ಊರು, ಸಮುದ್ರಗಳ ವಿವರವನ್ನು ಅವರಿಗೆ ತಿಳಿಸಿ ರಾಕ್ಷಸರು ಕಿರಾತರು, ಮೊದಲಾದವರ ವಿವರಗಳನ್ನು ಹಾರುವ ಸಿಂಹಗಳು, ಮದಿಸಿದ ಆನೆಗಳು, ವಜ್ರದನಿಗಳು ಹಲವು ದೇಶಗಳ ವಿವರಗಳನ್ನೂ ತಿಳಿಸಿ ಎಲ್ಲರೂ ಎಲ್ಲಾ ದಿಕ್ಕುಗಳಲ್ಲಿ ಹುಡುಕಿ ಒಂದು ತಿಂಗಳೊಳಗೆ ಮರಳಿ ಬರತಕ್ಕದ್ದೆಂದು ಆಜ್ಞಾಪಿಸುತ್ತಾನೆ.

ಸುಗ್ರೀವನು ವಾನರ ವೀರರಿಗೆ ಹೇಳಿದ ಪ್ರತಿಯೊಂದು ವಿಚಾರವನ್ನು ತಿಳಿದುಕೊಂಡು ರಾಮನು ಹನುಮಂತನೇ ಕಾರ್ಯಸಾಧನೆ ಮಾಡತಕ್ಕವನು ಎಂದು ನಿಶ್ಚಯಿಸುತ್ತಾನೆ. ರಾವಣನು ದಕ್ಷಿಣ ದಿಕ್ಕಿಗೆ ಹೋದನೆಂದು ಜಟಾಯು ತಿಳಿಸಿದ್ದನ್ನು ನೆನಪು ಮಾಡಿಕೊಳ್ಳುತ್ತಾನೆ. ಸುಗ್ರೀವನು ಕೂಡಾ ಹನುಮಂತನೇ ಕಾರ್ಯ ಸಾಧಿಸಬಲ್ಲವನೆಂದು ತನ್ನ ಅಭಿಪ್ರಾಯ ತಿಳಿಸುತ್ತಾನೆ. ಭೂಮಿಯಲ್ಲಾಗಲೀ, ಆಕಾಶ ಮಾರ್ಗದಲ್ಲಾಗಲೀ, ವಾಯುಮಂಡಲದಲ್ಲೇ ಆಗಲಿ, ದೇವ ಲೋಕದಲ್ಲಾಗಲೀ, ನೀರಿನಲ್ಲಾಗಲೀ ನಿನಗೆ ಸಂಚರಿಸಲು ಅಡ್ಡಿಮಾಡುವವರಿಲ್ಲ. ಗಂಧರ್ವಾಸುರರೂ, ನಾಗರೂ, ನರ ದೇವತೆಗಳೂ ಸಾಗರ ಪರ್ವತಗಳೂ ನಿನಗೆ ತಿಳಿದಿದೆ. ವಾಯುವಿನಷ್ಟೇ ವೇಗವೂ, ತೇಜಸ್ಸು ಉಳ್ಳವನು ನೀನು. ಸೀತೆಯನ್ನು ನೀನೇ ಹುಡುಕಬೇಕು ಎಂದು ಹೇಳುತ್ತಾನೆ.

ರಾಮನು ಹನುಮಂತನಿಗೆ ತನ್ನ ಹೆಸರಿನಿಂದ ಶೋಭಿತವಾದ ಉಂಗುರವನ್ನು ಕೊಟ್ಟು ಸೀತೆಗೆ ಇದನ್ನು ನೀನು ತೋರಿಸಿದರೆ, ನನ್ನ ಕಡೆಯಿಂದ ಬಂದವನು ನೀನು ಎಂದು ತಿಳಿದುಕೊಳ್ಳುತ್ತಾಳೆ. ನೀನು ಕಾರ್ಯಸಾಧಿಸುತ್ತೀ ಎಂದು ನನ್ನ ಮನಸ್ಸು ಹೇಳುತ್ತದೆ ಎನ್ನುತ್ತಾನೆ. ಹನುಮಂತನು ಉಂಗುರವನ್ನು ತಲೆಯಲ್ಲಿ ಭದ್ರವಾಗಿಟ್ಟುಕೊಳ್ಳುತ್ತಾನೆ. ರಾಮನಿಗೆ ನಮಿಸಿ ಸೀತಾನ್ವೇಷಣೆಗಾಗಿ ಎಲ್ಲ ಕಪಿವೀರರು ತಮಗೆ ನಿಗದಿಪಡಿಸಿದ ದಿಕ್ಕಿಗೆ ಪ್ರಯಾಣ ಪ್ರಾರಂಭಿಸುತ್ತಾರೆ.

ನಮ್ಮ ಮುಂದೆ ಯಾವುದೇ ಕ್ಲಿಷ್ಟಕರವಾದ ಕಾರ್ಯವಿದ್ದರೂ ಅದನ್ನು ಮೊದಲೇ ಯೋಚಿಸಿ ಯೋಜನಾಬದ್ಧವಾಗಿ ಮಾಡಬೇಕು. ಎಷ್ಟೇ ಶಕ್ತಿ, ಐಶ್ವರ್ಯ ಜನಬಲ ಇದ್ದರೂ ಸರಿಯಾದ ದಿಕ್ಕಿನಲ್ಲಿ ಕೆಲಸಕ್ಕೆ ಪ್ರಾರಂಭಿಸದಿದ್ದರೆ ಎಲ್ಲವೂ ಅನುಪಯುಕ್ತವಾಗುವುದಲ್ಲದೇ ನಾಶವಾಗಿ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಏನೇ ಮಾಡಬೇಕಾದರೂ ಸರಿಯಾದ ಪೂರ್ವಸಿದ್ಧತೆ ಅಗತ್ಯ. ಮಕ್ಕಳು ಪರೀಕ್ಷೆಗೆ ತಯಾರಾಗುವಂತೆ ನಾವು ತಯಾರಿ ಮಾಡಬೇಕು.

ರಾಮನಿಗೆ ಹನುಮಂತನ ವಿದ್ವತ್ತು, ಶಕ್ತಿ, ಕಾರ್ಯಸಾಧನೆಯ ಬಗ್ಗೆ ಇರುವ ಬಲ, ಜೊತೆಗೆ ರಾಮನ ಮೇಲಿರುವ ಭಕ್ತಿ ತಿಳಿದಿತ್ತು. ಜಟಾಯು ರಾವಣನ ಬಗ್ಗೆ ತಿಳಿಸಿದ್ದ, ಹನುಮಂತ ಅದೇ ದಿಕ್ಕಿಗೆ ಪ್ರಯಾಣ ಮಾಡುವುದರಿಂದ ಸೀತಾನ್ವೇಷಣೆ ಅವನಿಂದ ಸಾಧ್ಯವೆಂಬುದು ಅರಿತು ಉಂಗುರವನ್ನು ಕೊಡುತ್ತಾನೆ. ಗುರುತು ತೋರಿಸದಿದ್ದರೆ ಸೀತೆ ಯಾರನ್ನೂ ನಂಬುವುದಿಲ್ಲವೆಂಬುದು ರಾಮನಿಗೆ ತಿಳಿದಿತ್ತು.

ಈಗಿನ ಕಾಲದಲ್ಲಿಯೂ ಇದೇ ಪರಿಸ್ಥಿತಿ. ಪರ ಊರುಗಳಿಗೆ ಹೋದಾಗ ಲಾಡ್ಜಗಳಲ್ಲಿ ರೂಮ್ ಬೇಕಾದರೆ ಪಾನ್‌ಕಾರ್ಡ್, ಆಧಾರ ಕಾರ್ಡ್‌ಗಳಂತಹ ಗುರುತು ತೋರಿಸಬೇಕಾಗುತ್ತದೆ. ಸರಿಯಾದ ಗುರುತು ತೋರಿಸದಿದ್ದರೆ ಸೆರೆಮನೆಗೂ ಹೋಗಬೇಕಾಗಬಹುದಾದ ಸ್ಥಿತಿ. ಉಂಗುರದ ಪ್ರಸಂಗ ನಮಗೊಂದು ಎಚ್ಚರಿಕೆ.



ಕ್ರಿ.ಪೂ.362–324 ನಂದ ಸಂತತಿ.

ಸಂಪ್ರದಾಯ

# ರಾಧಾಕೃಷ್ಣರು ಸತಿಪತಿಯರಾಗಿಲ್ಲ ಯಾಕೆ ?

ಲೇ : ಜಿ. ವಿ. ಶರ್ಮಾಪಂಡಿತ್.

**ರಾಧಾಕೃಷ್ಣರು ಬಾಲ್ಯಸ್ನೇಹಿತರು**

ರಾಧೆ ವೃಷಭಾನು ಎಂಬವನ ಮಗಳು. ಶ್ರೀಕೃಷ್ಣನ ತಂದೆ(ಸಾಕುತಂದೆ)ಯಾದ ನಂದಗೋಪನಿಗೆ ವೃಷಭಾನು ಬಂಧುತ್ವದಿಂದ ಚಿಕ್ಕಪ್ಪನಾಗುತ್ತಾನೆ. ರಾಧಾದೇವಿ ಕೃಷ್ಣನಿಗೆ ಅತ್ತೆ(ಸೋದರತ್ತೆ)ಯಾಗುತ್ತಾಳೆ. ಮುಖ್ಯವಾಗಿ ರಾಧಾದೇವಿ ಕೃಷ್ಣನಿಗಿಂತಲೂ ಎರಡು ಮೂರು ವರ್ಷಗಳು ದೊಡ್ಡವಳು.

**ಪ್ರೀತಿ ಎಂದರೇ ಕೇವಲ ದೈಹಿಕ ಸಂಬಂಧವಲ್ಲ?**
**ಪ್ರೇಮ ಮಾನಸಿಕವಾದದ್ದು! ಕಾಮ ದೈಹಿಕ ವಾದದ್ದು.**

ರಾಧಾಕೃಷ್ಣರು ಬಾಲ್ಯ ಮಿತ್ರರು! ಆಪ್ತರು! ಆತ್ಮೀಯರು! ಅವರಿಬ್ಬರಲ್ಲಿ ಗಂಡು ಹೆಣ್ಣಿನ ವಿಬೇಧವಿಲ್ಲ. ಅವರದ್ದು ಅಲೌಕಿಕ ಸಂಬಂದ ಅವರನ್ನು ನಾವು ಬಾಹ್ಯ ನೇತ್ರಗಳಿಂದ ನೋಡಬಾರದು. ಮನೋನೇತ್ರಗಳಿಂದ ನೋಡಬೇಕು. ಕೃಷ್ಣತತ್ವವನ್ನು ಅರ್ಥಮಾಡಿಕೊಳ್ಳಲು ಎಲ್ಲರಿಗೂ ಆಗೋಲ್ಲ.

**ಶ್ಲೋ ॥ ನಮೇ ವಿದುಃ ಸುರಗಣಾಃ**
**ಪ್ರಭವಂ ನ ಮಹರ್ಷಯಃ**
**ಅಹಮಾದಿರ್ಹೆ ದೇವಾನಾಂ**
**ಮಹರ್ಷೀಣಾಂ ಚ ಸರ್ವಶಃ ॥॥**

**–ಗೀತಾ 10–2**

"ದೇವ ದಾನವ ಯಕ್ಷ ಗಂಧರ್ವರಾಗಲೀ, ಮಹರ್ಷಿ ಗಳಾಗಲೀ, ದಿಕ್ಪಾಲಕರಾಗಲೀ, ಇನ್ನಿತರ ದೇವಗಣಗಳಾಗಲೀ ನನ್ನನ್ನು ಅರ್ಥಮಾಡಿ ಕೊಳ್ಳಲಾರರು" ಎಂದು ಗೀತಾಸ್ಮೃತಿಯಲ್ಲಿ ಸ್ವಯಂ ಶ್ರೀಕೃಷ್ಣನೇ ಹೇಳಿದ್ದಾನೆ. ನಮ್ಮಂಥಾ ಅತಿ ಸಾಮಾನ್ಯರು ಶ್ರೀಕೃಷ್ಣನನ್ನು ಅರ್ಥಮಾಡಿಕೊಳ್ಳಲು ಆಗುವುದೇನು? ಸಾಧ್ಯವೇ ಇಲ್ಲ.

ನಾರಾಯಣನ ಅನೇಕ ಅವತಾರಗಳಲ್ಲಿ (ನಾರಾಯಣನ ಅವತಾರಗಳು ಇಪ್ಪತ್ತೊಂದಿವೆ) ಶ್ರೀ ಕೃಷ್ಣನ ಅವತಾರವೇ ಸಂಪೂರ್ಣವಾದ ದಿವ್ಯಾತಾರ. ಮತ್ತು ಮುಖ್ಯಾವತಾರವಾಗಿದೆ. "ನಾನು ದೇವರು! ನಾನೇ ನಾರಾಯಣನು" ಎಂದು ಹೇಳಿರುವ ಮಹದವತಾರವಿದು.

**ಕೃಷ್ಣನೆಂದರೇ ರಾಧೆಗೆ ಪ್ರಾಣ! ಪಂಚಪ್ರಾಣ!**
**ರಾಧೆ ಎಂದರೇ ಕೃಷ್ಣನಿಗೆ ಜೀವ!**
**ಮಧುರ ಮೈತ್ರಿಗೆ ಇವರಿಬ್ಬರೂ ಮಹಾಸಂಕೇತ**

ಸ್ತ್ರೀ ಪುರುಷರ ಸ್ನೇಹಕ್ಕೆ ಮದುವೆಯೇ ಮುಖ್ಯ ಪರಮಾರ್ಥವಲ್ಲ. ನಿಷ್ಕಲಂಕ ಗೆಳೆಯತನಕ್ಕೂ, ದೇಹಸುಖ ಬಯಸುವುದಕ್ಕೂ, ಅನಂತ ವ್ಯತ್ಯಾಸವಿದೆ. ಹೃದಯ ವಂತರಿಗೆ ಮಾತ್ರ ಕೆಲವು ವಿಷಯಗಳು ಅರ್ಥವಾಗುತ್ತವೆ.

**ಪ್ರಿಯ ಪಾಠಕರೇ! ಒಂದು ಮಾತು!**

ದೇವೋತ್ತಮನಾದ ಶ್ರೀಕೃಷ್ಣನನ್ನು ನಮ್ಮ ಭಾವನೆಗಳಿಗೆ ಹೋಲಿಸಿಕೊಂಡು ನೋಡುವುದು ತಪ್ಪಲ್ಲವೇ! ತಾನು ಕಾಮುಕನಲ್ಲ ಎಂದು ತಿಳಿಸುವುದಕ್ಕಾಗಿಯೇ ಕೃಷ್ಣನನು ಪಿಂಚವನ್ನು ಧರಿಸಿದ್ದಾನೆ. ನವಿಲುಗಳು ಸಂಯೋಗ ಮಾಡುವುದಿಲ್ಲ. ಗೊತ್ತಾ!

## " ಮಾನವತೆ "

ವಿಶ್ವವೆಂಬುದೆ ಮಾಯೆ
ದೇವನಿತ್ತಿಹ ಛಾಯೆ
ನೇಹ ನೆನಪಿನಲಿ ವಿಶ್ವದೊಳಿತಿಹುದು
ಎಷ್ಟಿದ್ದರೇನಿಹುದು
ನಮ್ಮೊಂದಿಗದುಬರದು
ಧರ್ಮವೆಂಬುದೆ ನಮ್ಮ ರಕ್ಷಿಸುತಲಿಹುದು

ದೂಪದೀಪಗಳೆಲ್ಲ
ದೇವರಿಗೆ ಬೇಕಿಲ್ಲ
ಸತ್ಕಾರ್ಯವೆಲ್ಲಿಹುದೊ ಜಯವೇ ಅಲ್ಲಿ
ಕಾಯಕದ ಧರ್ಮದಲಿ
ಕರುಣೆಯ ಬೆಳಕಿನಲಿ
ಮಾನವತೆ ಜಗತುಂಬಿ ಅರಳುತಿರಲಿ.

ಮನದಲ್ಲಿ ನಗುವಿರಲಿ
ತನುವಿನಲಿ ಬಿಗುವಿರಲಿ
ಕಷ್ಟಕಾರ್ಪಣ್ಯಕ್ಕೆ ಕರಗುತಿರಲಿ
ಕಲ್ಪನೆಯ ಹರವಿನಲಿ
ತಾಳ್ಮೆಯ ಪರಿಧಿಯಲಿ
ಬೆಳೆಯೋಣ ಧರೆಯ ಗೂಡಿನಲಿ

**ಲೇ॥ ಜಿ. ಜಿ. ಬಾಳಗೋಡ**
ರಾಷ್ಟ್ರ ಪ್ರಶಸ್ತಿ ಪುರಸ್ಕೃತರು



ಕ್ರಿ.ಪೂ.327–325 ಭಾರತದ ಮೇಲೆ ಅಲೆಗ್ಸಾನಂಡರನ ಧಾಳಿ

# ಪರಮೇಶ್ವರನ ಇಪ್ಪತ್ತೈದು ಲೀಲೆಗಳು

**13ನೇ ಲೀಲೆ – ಜಲಂಧರ ಸಂಹಾರ ಲೀಲೇಯು ಅಥವಾ ಜಂಘು ಧಾರಣ ಲೀಲೆಯು**

ಒಂದು ಸರೋವರದಲ್ಲಿ ಗುಂಡ ಮುಳುಗ ಎಂಬ ಪಕ್ಷಿಯು ಮುಳುಗಿ ಮೀನಗಳನ್ನು ಹಿದಿದು ತಂದು ಸರೋವರದ ದಂಡೆಯಲ್ಲಿರುವ ಶಿವಲಿಂದ ಮೇಲೆ ಇಟ್ಟು ಕುಕ್ಕಿ ಕುಕ್ಕಿ ತಿನ್ನುತ್ತಿತ್ತು. ಅದು ತನ್ನ ಪೂರ್ವ ಜನ್ಮದ ಸಂಸ್ಕೃತಿಯೇ ಏನೋ ಎಂಬಂತೆ ತಂದಮೀನವನ್ನು ಲಿಂಗಕ್ಕೆ ಅರ್ಪಸದೆ ಮುತ್ತುತ್ತಿರಲಿಲ್ಲ.

ಇದರಿಂದ ಶಿವನು ಸುಪ್ರಿತನಾಗಿ, ಸಂತುಷ್ಟನಾಗಿ ಪಕ್ಷಿಯು ಮುಂದಿನ ಜನ್ಮದಲ್ಲಿ ಅಸುರು ಕುಲಕ್ಕೆ ಅಸುರನಾಗಲೆಂದು ವರನ್ನಿತ್ತನು. ಮುಂದೆ ಕೆಲಕಾಲದ ಮೇಲೆ ಆ ಪಕ್ಷಿಯು ಮರಣವನ್ನಪ್ಪಿತು. ಶಿವನ ವರದಂತೆ ಅದು ವೃತ್ತಾಸುರನಿಗೆ ಮಗನಾಗಿ ದೊರೆಯೆತು. ಅದಕ್ಕಿ ಜಲಂಧರನೆಂಬ ನಾಮಕರಣವಾಯಿತು.

ಯಾಕಂದರೆ ಆ ಶಿಶುವು ಸಾಗರದ ಮೇಲೆ ತೇಲುತ್ತ ಬಂದು ವೃತ್ತಾಸುರನಿಗೆ ಲಭಿಸಿತು. ಅದಕ್ಕಾಗಿ ಅದು ಜಲಂಧರನ ನಾಮದಿಂದ ಪ್ರಸಿದ್ದಿಯನ್ನು ಹೊಂದಿತು. ಜಲಂಧರನು ವಯಸ್ಸಿಗೆ ಬಂದುದೊಂದೆತಡ ಬಹು ಪರಾಕ್ರಯಾದ ಅವನು ದೇವತೆಗಳ ಮೇಲೆ ಯುದ್ದ ಮಾಡಿ ದೇವತೆಗಳನ್ನು ಜಯಿಸಿದನು. ಹರಿ ಬ್ರಹ್ಮರನ್ನು ಕಾಳಗದಲ್ಲಿ ಜಯಿಸಿದನು. ಇನ್ನೇನು ಶಿವನೊಡನೆ ಯುದ್ದ ಮಾಡಿ ಗೆದ್ದರೆ ತಾನೇ ಶಿವನಾಗುವೆನೆಂದನು. ಹಾಗೆ ಶಿವನೊಡನೆ ಯುದ್ದ ಸಾರಿದನು. ಆಗ ಶಿವನು  ಅಸುರಾಧಮಾ ನನ್ನೊಡನೆ ಯುದ್ಧವನ್ನೆನು ಮಾದುವಿ? ಅದು ನಿನ್ನಿಂದಾಗದು ಎದು ಹೇಳಲು ಜಲಂಧರನು–ನಾರದನು ನಿನ್ನ ಶೌರ್ಯವನ್ನು ಕೊಂಡಾಡಿದನು ಅದಕ್ಕಾಗಿ ನಿನ್ನೊಡನೆ ಯುದ್ಧ ವಾಡಲೇಬೇಕೆಂದನು.

ಆಗ ಶಿವನು ತನ್ನ ಬಲಗಾಲ ಹೆಬ್ಬೆರಳಿನಿಂದ ಭುಮಿಯ ಮೇಲೆ ಒಂದು ಚಕ್ರವನ್ನು ಬರೆದನು. ಆಲಂಧರಾ ! ಈ ಚಕ್ರವನ್ನು ನೀನು ಅಳಿಸಿಬಿಡು ಅಂದರಿ. ನೀನು ನನ್ನನ್ನು ಜಯಿಸಿದಂತೆ ಎಂದು ಹೇಳಿದನು. ಆಗ ಜಲಂಧರನು ಇದ್ಯಾವ ದೊಡ್ಡ ವಿಷಯವು. ಈಗಲೆ ಇದನ್ನು ಅಳುಕಿಸುವೆನು ಎಂದು ಅದನ್ನು ಅಳುಕಿಸಹತ್ತಿದನು. ಆದರೆ ಅದು ಅಳುಕದೆ ಮತ್ತಿಷ್ಟು ಸ್ಪಷ್ಟವಾಗಿ ಮೂಡಿತು.

ಜಲಂಧರನು ಸಿಟ್ಟಿಗೆದ್ದು ಈ ಪೃಥ್ವಿಯನ್ನೆ ಮುರಿದಿಕ್ಕುವೆನೆಂದು, ಪೃಥ್ವಿಗೆ ತೆಕ್ಕೆಹಾಕಿದನು. ಆಭೂಮಿಯ ಮೇಲೆ ಬರೆದ ಚಕ್ರವು ನಿಜವಾಗಿ ಜಲಂಧರನ ಕೊರಳಿಗೆ ಸುತ್ತಿಕೊಂಡು ಅವನ ಶಿರವನ್ನೆ ಕತ್ತರಿಸಿತು. ಹೀಗೆ ಪರಮೇಶ್ವರನಿಂದ ಜಲಂಧರನ ಸಂಹಾರವಾಯಿತು. ದೇವತೆಗಳು ಅಜಹರಿ ಮೊದಲಾದವರು ಸಹಿತವಾಗಿ ಪರಮೇಶ್ವರನನ್ನು ಸ್ತುತಿಸಿದರು. ಅಲ್ಲದೆ ಪರಮೇಶ್ವರನನ್ನು ಸ್ತುತಿಸಿದರು. ಅಲ್ಲದೆ ಪರಮೇಶ್ವರನ ಮೇಲೆ ಸಂತೋಷದಿಂದ ಪುಷ್ಪವೃಷ್ಟಿಗರೆದರು ಎಂಬಲ್ಲಿಗೆ ಪರಮೇಶ್ವರನ 13ನೇದಾದ ಜಲಂಧರ ಲೀಲೆಯಾಯಿತು.

ಪರಮೇಶ್ವರನ ಜಲಂಧರನ ಶಿರವನ್ನು ತನ್ನ ಕಾಲುಜಂಘೆಗೆ ಕಟ್ಟಿಕೊಂಡನು. ಗಣಗಳು ಅದನ್ನು ಕಂಡು ಪರಮೇಶ್ವರನಿಗೆ ಜಂಘೆಂಬ ಬಿರುದಾಯಿತೆಂದರು. ಅದನ್ನೇ ಈಗಲೂ ವೀರಶೈವರಲ್ಲಿಯ ಮಹೇಶ್ವರರು ಜಂಘನ್ನು ಕಾಲಿಗೆ ಕಟ್ಟಿಕೊಂಡು ಭಿಕ್ಷಾಟನೆಮಾಡುವರು. ಶಿವನು ಜಲಂಧರನ ರುಂಡವನ್ನು ಜಂಘೆಂದು ಧರಿಸಿದ ದ್ಯೋತಕವೇ ಮಹೇಶ್ವರರು ಕಾಲಿಗೆ ಜಂಘನ್ನು ಕಟ್ಟಿಕೊಂಡೇ ಭಿಕ್ಷಾಟನ ಮಾಡುವದಾಗಿದೆ.

---

ಮಹಾಕ್ಷತ್ರಿಯ

# ವಿಕ್ರಯದ ವೈಖರಿ

ಲೇ: ಶ್ರೀ ದೇವುಡು.

ಗಂಗಾ–ಯಮುನಾ ಸಂಗಮದ ಪುಣ್ಯಕ್ಷೇತ್ರ. ಪ್ರತಿಷ್ಠಾನ ನಗರ ಲಕ್ಷ್ಮಿಯು ನೋಡಿಕೊಳ್ಳುವ ರನ್ನಗನ್ನಡಿಯೋ ಎಂಬಂತೆ, ಆ ಜಲರಾಶಿಯು ವಿಸ್ತಾರವಾಗಿ ನಿರ್ಮಲವಾಗಿ ಇದ್ದು ಆ ನಗರದ ಪ್ರತಿಬಿಂಬವನ್ನು ಧರಿಸಿದೆ. ಅತ್ತಲಿಂದ ಬಂದ ಶುದ್ಧ ನೀಲದಂತಿರುವ ಯಮುನಾಜಲವು ವಜ್ರದಂತೆ ಥಳಥಳಿಸುವ ಗಂಗಾಜಲದೊಡನೆ ಸೇರಿ, ರತ್ನಖಚಿತವಾದಂತೆ ಇರುವ ಆ ಜಲರಾಶಿಯ ಗರ್ಭವನ್ನು ಭೇದಿಸಿ ಮುಂದೆ ಹೋಗುತ್ತಿರುವುದನ್ನು ನೋಡುತ್ತಾ ಬೆಸ್ತರ ಗುಂಪು ದಡದಲ್ಲಿ ನಿಂತಿದೆ. ಯಜಮಾನನು ಮುಂದೆ ನಿಂತು ನೋಡುತ್ತಿದ್ದಾನೆ. ದೇಹವು ಭೂಮಿಯ ಮೇಲೆ ನಿಂತಿದ್ದರೂ ಮನಸ್ಸು ಆ ನೀರಿನೊಳಗೆ ವಿಹರಿಸಲು ಹೊರಟುಹೋಗಿರುವುದರ ಗುರುತೋ ಎಂಬಂತೆ ಕೈಗಳು ಬೆನ್ನಹಿಂದೆ ಒಂದನ್ನೊಂದು ಹಿಡಿದುಕೊಂಡು ನಿಶ್ಚಲವಾಗಿವೆ. ಕಣ್ಣು ನೊರೆತೆರೆಗಳನ್ನು ಭೇದಿಸಿಕೊಂಡು ಒಳನುಗ್ಗಿ ಅಲ್ಲೆಲ್ಲಾ ಅಲೆದಾಡಿಕೊಂಡು ಬರುತ್ತಿದೆ.

ಒಂದು ಗಳಿಗೆಯಾಯಿತು. ಯಜಮಾನನು ಮಾತನಾಡಿದರು; "ದಿಟ, ಮೀನುಗಳೆಲ್ಲ ಒಂದು ಸೇರಿವೆ. ನಾಳಿದ್ದು ಉಣ್ಣಿಮೆ. ತಾನಕ್ಕೆ ಬರುವವರ ಗದ್ದಲವೆಲ್ಲಾ ಮದ್ದಿನಕ್ಕೆ ಮುಗಿದು ಓಯ್ತದೆ. ನಾವು ಒತ್ತಾರೆ ಊಟ ಮಾಡ್ಕೊಂಡು ಒತ್ತು ನೆತ್ತಿಮೇಲೆ ಬರೋಕೆ



ಕ್ರಿ.ಪೂ.324–183 ಮೌರ್ಯ ಸಂತತಿ.

ಮುನ್ನ ಇಲ್ಲಿ ಬಂದುಬಿಡೋವಾ. ಬಲೆಗಳು ಮಾತ್ರ ಬಲವಾಗಿರಬೇಕು. ಈ ತುಯ್ತಾ ಬಂದಾಗ ಕಡೀಬಾರದು. ಅದೆಲ್ಲಾ ನೋಡಿಕೊಳ್ಳಿ. ಜೊತೆಗೆ ಅಂಬಿಗರಿಗೂ ಏಳಿಬುಡಿ. ಎರಡು ದೋಣಿ ಸಾಲದಾ?"

"ಇಲ್ಲ, ಮಾವಾ, ನಾಕು ದೋಣಿಯಿದ್ದರೆ ಚೆನ್ನಾ!"

"ಅಂಗೇ ಮಾಡಿ, ನಾನೂ ಬರಬೇಕಾ?"

"ಇದೀಗ ಚೆನ್ನಾಯ್ತು. ನೀನಿಲ್ಲದಿದ್ದರೆ ನಾವು ನೀರಿಗಾದರೂ ಇಳಿದೇವಾ?

ನೀನು ಬರಲೇಬೇಕು. ನಿಂಗೆ ಸರಣು ಮಾಡಲ್ಲವಾ ನಾವು ನೀರಿಗಿಳಿಯೋದು?"

"ಆಗಲಿ ಕಣಪ್ಪ! ಗಂಗಮ್ಮನ ಬಲಿ ತಪ್ಪಿಸಬೇಡಿ ಕಣ್ರೋ! ಒಂದು ಒಳ್ಳೇ ಕುರಿ ನಾಕು ಬುದ್ದಲಿ ಎಂಡ. ಅರಿಸಿನ, ಕುಂಕುಮ, ಬಳೆ, ಬಿಚ್ಚೋಲೆ, ಕಾಯಿ, ಅಣ್ಣು ಊವು, ದೂಪ, ದೀಪ, ಅಡಿಕೆಲೆ, ಕಾಣಿಕೆ ಎಲ್ಲಾ ತರಿಸಿ, ಅಂಗೇ ಒಂದೆರಡು ಮೂಟೆ ಪುರಿ, ಒಂದು ಮೂಟೆ ನೆನೆದವರಕಾಳು ಎಲ್ಲಾ ತಂದಿರಿ."

"ಸರಿ ಕಣಪ್ಪಾ!"

"ಪೂಜೆ ಯಾರು ಮಾಡೋರು?"

"ಯಜಮಾನ!"

"ಅದಕ್ಕಲ್ಲಾ! ಪೂಜೆ ಮಾಡೋರು ಮಡಿಯಾಗಿ ಏನೂ ತಿನ್ನದೆ ಬರಬೇಕಲ್ಲಾ ಅದಕ್ಕೆ ಅಂಗಂದೆ!"

"ನೀನೂ ಅತ್ತೇ ಇಬ್ಬರೂ ಬನ್ನಿ. ಇಲ್ಲೇ ತಾನಾಗೀನಾ ಮಾಡ್ಕೊಂಡು ಗಂಗಮ್ಮನ ಪೂಜೆ ಮಾಡಿ, ನಮ್ಮನ್ನೆಲ್ಲಾ ಅರಸಿ ಕಳಿಸಿಕೊಡಿ."

"ಸರಿ, ದೋಣಿ, ಬಲೆ, ಪೂಜೆಗೆ ಬೇಕಾದ್ದು ಎಲ್ಲಾ ನೋಡ್ಕೊಂಡು ನಾಳೆಯೇ ಅಣಿ ಮಾಡ್ಕೊಳ್ಳಿ. ಅಣಗಿನ ಬೇಕೋ? ಅದೆಯೋ?"

"ನಾವೇ ನೋಡಿಕೋತೀವಿ. ಬುಡು ಮಾವಾ!"

" ನೋಡ್ದೆಯಾ ನಿಮ್ಮ ಬುದ್ಧಿಯಾ? ಮುದುಕ ಅವ್ನಲ್ಲಾ ಅನ್ನೋ ಮಾತೇ ಇಲ್ವಲ್ಲಾ? ನೀವು ನೀವೇ ನೋಡ್ಕೋಂಡ್ರೆ ನಾಳೆ ಲೆಕ್ಕಾಚಾರದಲ್ಲಿ ಎಚ್ಚು ಕಡಮೆ ಆದ್ರೆ? ಅದೆಲ್ಲಾ ಬೇಡ. ಮನೇಲಿ ಏಳಿಟ್ಟಿರ್ತೀನಿ. ಏಟು ಬೇಕಾಯ್ತದೋ ಓಟು ತಕೊಂಡೋಗಿ ಆಮೇಲೆ ಕೊಟ್ಟುಬಿಡಿ."

"ಅಂಗೂ ಆಗಲಿ ಕಣಪ್ಪ"

ಬೆಸ್ತ ಪಡೆಯು ಯಜಮಾನನೊಡನೆ ಅಲ್ಲಿಂದ ಜಾರಿತು.

ಹುಣ್ಣಿಮೆಯ ದಿನ. ಇನ್ನೇನು ಮಧ್ಯಾಹ್ನಕ್ಕೆ ಬಂದಿದೆ. ಬ್ರಾಹ್ಮಣರು ಆಗಲೇ ಮಾಧ್ಯಾಹ್ನಿಕವನ್ನು ಮಾಡುತ್ತಿದ್ದಾರೆ. ಎಷ್ಟೋ ಜನ ಕತ್ತೆತ್ತಿಕೊಂಡು ಸೂರ್ಯ ತೇಜಸ್ಸಿನಿಂದ ಲೋಕಾನುಗ್ರಹಾರ್ಥವಾಗಿ ಪ್ರಾಣಾಕ್ತಿಯನ್ನು ಸಂಗ್ರಹಿಸುತ್ತಿದ್ದಾರೆ. ಇನ್ನೆಷ್ಟೋ ಜನ ದೇವರ್ಷಿ ಪಿತೃತೃಪ್ತ್ಯರ್ಥವಾಗಿ ತರ್ಪಣಗಳನ್ನು ಬಿಡುತ್ತಿದ್ದಾರೆ. ಅಲ್ಲಲ್ಲಿ ಹೊತ್ತಾಗಿ ಬಂದ ಹೆಂಗಸರು ಗಂಗಾಪೂಜೆಯನ್ನು ಮಾಡಿ ಬಾಗಿನ ಕೊಟ್ಟು ಅವಸರವಸರವಾಗಿ ಹೊರಡುತ್ತಿದ್ದಾರೆ. ಬಿಸಿಲು ಬಲವಾಗಿದೆ. ಬೆಸ್ತರ ಗುಂಪು ಯಜಮಾನನನ್ನು ಮುಂದುಮಾಡಿಕೊಂಡು ತಲೆಯ ಮೇಲೆ ಬುಟ್ಟಿಗಳನ್ನು ಹೊತ್ತು ಅಲ್ಲಿಗೆ ಬಂತು. ಯಜಮಾನನೂ ಹೆಂಡತಿಯೂ ಸ್ನಾನ ಮಾಡಿದರು, ಮಿಕ್ಕವರೂ ಮಾಡಿದರು. ಆ ದಂಪತಿಗಳು ಪೂಜೆಯನ್ನು ಸಾಂಗವಾಗಿ ಮಾಡಿ ಕುಲದವರು ತಂದಿದ್ದ ಬಲಿಗಳನ್ನೆಲ್ಲಾ ಗಂಗಾದೇವಿಗೆ ಸಮರ್ಪಣ ಮಾಡಿದರು. ಕುಲದವರೂ ತಾವು ತಾವು ತಂದಿದ್ದ ಬುತ್ತಿಗಳನ್ನು ಗಂಗಮ್ಮನಿಗೆಂದು ನೀರಿಗೆಸೆದು, ಎರಡನೆಯ ತುತ್ತು ಯಜಮಾನನಿಗೆ ಒಪ್ಪಿಸಿ, ಅವನ ಅಪ್ಪಣೆ ಪಡೆದು ತಾವೂ ತಿಂದರು. ಯಜಮಾನನು ಸೂರ್ಯನಿಗೆ ನಮಸ್ಕಾರ ಮಾಡಿ, ಗಂಗಮ್ಮನ ಅಪ್ಪಣೆ ಕೇಳಿ, ದೋಣಿಯನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು ದೋಣಿಯನ್ನು ಹತ್ತಿದನು.

ದೋಣಿಯು ಅಷ್ಟು ದೂರ ಹೋಯಿತು. ಅದರ ಹಿಂದೆ ಮಿಕ್ಕ ಮೂರು ದೋಣಿಗಳು ಬಲೆಗಳನ್ನೂ, ಕಾಳು ಪುರಿಮೂಟೆಗಳನ್ನು ಹೊತ್ತುಕೊಂಡು ಹೋದವು. ಕಾಳುಪುರಿಗಳನ್ನು ಚೆಲ್ಲಿ, ಮೀನುಗಳೆಲ್ಲಾ ಒಂದೆಡೆ ಸೇರುತ್ತಲೂ ಬಲೆಯನ್ನು ಹಾಕುವ ಕೆಲಸವು ಮೊದಲಾಯಿತು. ಯಜಮಾನನು ಬಂದು ದಡವನ್ನು ಸೇರುವುದರೊಳಗಾಗಿ ಬಲೆ ಹಾಕಿದುದು ಮುಗಿಯಿತು. ದೋಣಿಗಳೆರಡು ಅತ್ತಕಡೆ ಇತ್ತಕಡೆ ನಿಂತು ಹಗ್ಗಗಳನ್ನು ಎಳೆದವು. ಭಾರಿ ಹಗ್ಗಗಳು; ಬೇಕೆಂದರೆ ಒಂದೊಂದರಲ್ಲಿ ನಾಲ್ಕು ಕೋಣಗಳನ್ನು ಕಟ್ಟಬಹುದು. ಅಂಥಾ ಹುರಿಯ ನೂಲು ಹಗ್ಗಗಳು.

ಅಷ್ಟು ಹೊತ್ತಾದ ಮೇಲೆ ಬಲೆಗಳನ್ನು ಎಳೆಯುವ ಕೆಲಸವು ಮೊದಲಾಯಿತು. ತುಯ್ಯುವುದರಲ್ಲಿಯೇ ಬೆಸ್ತರಿಗೆ ಗೊತ್ತು ಬೇಟೆ ಬೇಕಾದ ಹಾಗೆ ಸಿಕ್ಕಿದೆಯೆಂದು. ಹಗ್ಗಗಳನ್ನು ಎಳೆದು ತಂದು ಎಡದಲ್ಲಿ ಭಾರಿಯ ಮರಕ್ಕೆ ಕಟ್ಟಿದರು. ಸುಮಾರು ಮಧ್ಯಾಹ್ನ ಒಂದು ಝಾವವಾಗಿರಬಹುದು, ಬಲೆಗಳು ದಡಕ್ಕೆ ಬಂದವು. ಆಳಾಳು ಉದ್ದದ ಮೀನುಗಳು, ಸಣ್ಣಪುಟ್ಟವೆಲ್ಲಾ ದೊಡ್ಡ ಕಣ್ಣಿನ ಬಲೆಯಲ್ಲಿ ತಪ್ಪಿಸಿಕೊಂಡು ಹೋಗಿವೆ. ಮೊಳದುದ್ದಕ್ಕೆ ಕಡಿಮೆಯಾದ ಮೀನೇ ಇಲ್ಲ. ಪುಳಪುಳನೆ ಒದ್ದಾಡುತ್ತವೆ. ಅವರಿಗಂತೂ ಅದನ್ನು ನೋಡುವುದಕ್ಕೇ ಒಂದು ಸಂತೋಷ.

ಬಲೆಗಳನ್ನು ದಡದ ಮೇಲಕ್ಕೆ ಎಳೆದು ತಂದುದೂ ಆಯಿತು. ಕೊಂಚ ಹೊತ್ತಿನಲ್ಲಿ ಮೀನುಗಳೆಲ್ಲಾ ಮಂಕಾಗುತ್ತಾ ಬಂದುವು. ಇನ್ನೂ ಅಷ್ಟು ಹೊತ್ತು ವಿಲವಿಲನೆ ಒದ್ದಾಡಿದವು. ಮಾರಣಹೋಮವು ಆರಂಭವಾಯಿತು. ಒಂದೊಂದನ್ನು ಹಿಡಿದು ಹಿಡಿದು ಗೋಣು ಮುರಿದು ರಾಶಿ ಹಾಕಿದರು.

ಕೊನೆಯಲ್ಲಿ ಒಂದು ವಿಚಿತ್ರದ ಮೀನು. ಅದಕ್ಕೆ ಮನುಷ್ಯರಿಗಿರುವಂತೆ ಕೈಕಾಲು ತಲೆಯಿರುವಂತಿದೆ. ಮೈಮೇಲೆ ಪಾಚಿಯು ಬೆಳೆದು ಹೋಗಿದೆ. ಹಿಡಿತ ಹಿಡಿಯುವುದೇ ಕಷ್ಟ ಕೊನೆಗೆ ಕಷ್ಟಪಟ್ಟು ನೀರಿನ ಹತ್ತಿರ ತೆಗೆದುಕೊಂಡು ಹೋಗಿ ತೊಳೆದರು. ಕೂದಲು ಬೆಳದು ಜಡೆಕಟ್ಟಿಹೋಗಿವೆ ಆ ಜಡೆಗಳಲ್ಲೆಲ್ಲಾ ಶಂಕದ ಹುಳುಗಳು ಅಂಟಿಕೊಡಿವೆ. ಗೂಡುಮಾಡಿಕೊಂಡಿವೆ. ಮನುಷ್ಯ, ಸಂದೇಹವಿಲ್ಲ. ಅಂತೂ ತೊಳೆದರು. ದಡದ ಮೇಲಕ್ಕೆ ತಂದರು. ಬದುಕಿದ್ದಾನೆ. ಉಸಿರಿಲ್ಲದಿದ್ದರೂ ಬಿಸಿಯಿದೆ.

ಯಜಮಾನನಿಗೆ ವರದಿ ಹೋಯಿತು. ಅವನೂ ಓಡೋಡುತ್ತಾ ಬಂದನು. ಮರಳಿನ ಮೇಲೆ ಮಲಗಿಸಿದ್ದ ದೇಹಕ್ಕೆ ಮರಳಿನ ಬಿಸಿ ತಗುಲಿತೋ? ಅಥವಾ ಸಂಜೆಯ ಬಿಸಿಲೇ ಆ ದೇಹದೊಳಕ್ಕೆ ಪ್ರಾಣಕ್ತಿಯನ್ನು ತುಂಬಿತೋ? ಅಂತೂ ಉಸಿರಾಡಿತು. ಚೈತನ್ಯವು ಕೂಡಿಕೊಂಡಿತು. ಕಣ್ಣು ತೆರೆಯಿತು. ಇನ್ನೊಂದು ಗಳಿಗೆಯೊಳಗಾಗಿ ದೇಹವು ಎದ್ದು ಕುಳಿತುಕೊಂಡಿತು. ನಿದ್ದೆಯಿಂದ ಎದ್ದವನಂತೆ ಸಮಾಧಾನದಿಂದ ಸುತ್ತಲೂ ನೋಡಿ, ಎದಿರು ಬಿದ್ದಿದ್ದ ಗುಡ್ಡದಂತಹ ಮೀನಿನ ರಾಶಿಯನ್ನು ನೋಡಿ ತಲೆಯಲ್ಲಾಡಿಸಿ, ಎರಡು ಕಡೆಯೂ ಹರಿಯುತ್ತಿರುವ ಗಂಭೀರಪ್ರವಾಹಗಳಿಗೆ ಕೈ ಮುಗಿದು, ಎದ್ದುಹೋಗಿ ಆಚಮನ ಮಾಡಿ ಬಂದು ಪದ್ಮಾಸನದಲ್ಲಿ ಕುಳಿತನು. ಕುಳಿತುಕೊಳ್ಳುವ ರೀತಿಯಿಂದಲೇ ಯಜಮಾನನಿಗೆ ಈತನು ತಪಸ್ವಿ ಇರಬೇಕು ಎನ್ನಿಸಿತು. ತಾನು ಹೊದೆದಿದ್ದ ಕಂಬಳಿಯನ್ನು ಹಾಸಿ ಸಾಷ್ಟಾಂಗವಾಗಿ ಭೂಮಿಯಲ್ಲಿ ಮಲಗಿ ನಮಸ್ಕಾರ ಮಾಡಿ "ದಯಮಾಡಬೇಕು, ಈ ಕಂಬಳಿಯ ಮೇಲೆ ಮೂರ್ತಿಮಾಡಬೇಕು" ಎಂದನು. ಆಲವಾಸಿಯು ದರ್ಭೆಯನ್ನು ತೋರಿಸಲು ಎಲ್ಲರೂ ಓಡಿ ಹೋಗಿ ಒಂದು ಹೊರೆ ದರ್ಭೆಯನ್ನು ಕೊಯ್ದು ತಂದರು. ಅದರಲ್ಲಿ ಎರಡು ಗರಿಯನ್ನು ತೊಡೆಯ ಕೆಳಗೆ ಹಾಕಿಕೊಂಡು, ಎರಡನ್ನು ಬೆರಲಿಗೆ ಸಿಕ್ಕಿಸಿಕೊಂಡು ಆತನು ಆ ಹೊರೆಯನ್ನು ಒರಗಿಕೊಂಡು ಕುಳಿತನು. ಎಲ್ಲರೂ ಪದೇಪದೇ ನಮಸ್ಕಾರ ಮಾಡಿದರು. ಎಲ್ಲರೂ ಕಣ್ಣು ತುಂಬಾ ನೀರಿಟ್ಟುಕೊಂಡಿದ್ದಾರೆ. ಒಬ್ಬರಿಗಾದರೂ ಮಾತಾಡಲು ಧೈರ್ಯವಿಲ್ಲ. ಎಲ್ಲರೂ ಕೈಮುಗಿದುಕೊಂಡು ಸುತ್ತಲೂ ನಿಂತಿದ್ದಾರೆ.

ವ್ಯಕ್ತಿಯ ತೇಜೋಮಯವಾದ ಕಣ್ಣುಗಳನ್ನು ಅರಳಿಸಿ ಸಣ್ಣ ದನಿಯಲ್ಲಿ "ಈಗ ಇಲ್ಲಿ ಆಳುತ್ತಿರುವ ದೊರೆ ಯಾರು ?" ಎಂದು ಕೇಳಿದನು. ಯಜಮಾನನು ಭಯಭಕ್ತಿಗಳಿಂದ " ನಹುಷಚಕ್ರವರ್ತಿ" ಎಂದು ಅರಿಕೆ ಮಾಡಿದನು. "ಆತನಿಗೆ ಸುದ್ದಿಯನ್ನು ತಿಳಿಸಿ" ಎಂದು ಹೇಳಿ ವ್ಯಕ್ತಿಯು ಮತ್ತೆ ಧ್ಯಾನಾಸಕ್ತವಾಯಿತು.

ಒಂದು ಘಳಿಗೆಯೊಳಗಾಗಿ ಚಕ್ರವರ್ತಿಯು ಸಹಪರಿವಾರನಾಗಿ ಬಂದನು. ಆತನ ಜೊತೆಯಲ್ಲಿಯೇ ಬಂದಿದ್ದ ರಾಜಪುರೋಹಿತನು ವಿಧ್ಯುಕ್ತವಾಗಿ ಪೂಜೆಯನ್ನು ಮಾಡಿ ಮಧುಪರ್ಕವನ್ನು ಒಪ್ಪಿಸಿದನು. ಚತುರ್ದಗಳನ್ನೂ ಸಾಂಗವಾಗಿ ಅಧ್ಯಯನಮಾಡಿದ ಮಹಾಬ್ರಾಹ್ಮಣನಿಗೆ ಮಾತ್ರ ಸಲ್ಲುವ ಆ ಮರ್ಯಾದೆಯನ್ನು ಅದಕ್ಕೆ ಅರ್ಹನಾದವನಂತೆ, ಆ ಅಭ್ಯಾಸವಿರುವವನಂತೆ, ಆ ವ್ಯಕ್ತಿಯು ಅಂಗೀಕರಿಸಿದನು. ಅದೆಲ್ಲ ಆದಮೇಲೆ ನಹುಷನು ಪ್ರವರೋಚ್ಚಾರಣಪೂರ್ವಕವಾಗಿ ನಮಸ್ಕರಿಸಿ, "ದೇವಾ, ತಾವು ಯಾವ ಪಾವನ ವಂಶದವರು ತಮ್ಮ ನಾಮಧೇಯವೇನು?" ಎಂದು ವಿನಯವಾಗಿ ವಿಚಾರಿಸಿದನು. ಆ ತಪಸ್ವಿಯು "ಭಾರ್ಗವನು ನಾನು. ಚ್ಯವನನೆಂದು ಕರೆಯುವರು. ನಾನು ಈ ಗಂಗಾಯಮುನಾ ಸಂಗಮದಲ್ಲಿ ಜಲಸ್ತಂಭನ ಮಾಡಿ ತಪಸ್ಸು ಮಾಡಿಕೊಂಡಿದ್ದೆನು. ದೈವಪ್ರೇರಿತರಾದ ಇವರು ಈ ದಿನ ಮೀನು ಹಿಡಿಯುವಾಗ ನನ್ನನ್ನು ದಡಕ್ಕೆ ಎಳೆದುಹಾಕಿದರು. ಅದರಿಂದ ಮೊದಲು ಇವರ ಋಣವನ್ನು ತೀರಿಸಿ, ಇವರಿಗೆ ಏನು ಸಲ್ಲಬೇಕೋ ಅದನ್ನು ಸಲ್ಲಿಸಿ ನನ್ನನ್ನು ಬಿಡಿಸಿಕೊ. ಬೆಲೆ ಎಷ್ಟು ಎಂಬುದನ್ನು ನಿನ್ನ ಸ್ವಬುದ್ಧಿಯಿಂದಲೇ ನಿಶ್ಚಯಿಸು" ಎಂದನು.

ತಪಸ್ಸು ಮಾಡುತ್ತಿದ್ದವನನ್ನು ತಾವು ಎಳೆದರು, ಎಂದು ಕೇಳಿದ ಕೂಡಲೇ ಅಲ್ಲಿ ನೆರೆದಿದ್ದ ಬೆಸ್ತರೆಲ್ಲಾ ನಡುಗಿ ಹೋದರು. ಚ್ಯವನ–ನಹುಷರಿಬ್ಬರಿಗೂ ನಮಸ್ಕಾರಮಾಡಿ, "ತಿಳಿಯದೆ ಮಾಡಿದ ತಪ್ಪು ಮನ್ನಿಸಬೇಕು" ಎಂದು ಗೋಗರೆದುಕೊಂಡರು. ಚ್ಯವನನು ನಗುನಗುತ್ತಾ ಅಭಯಪ್ರಧಾನ ಮಾಡಿದನು. ನಹುಷನು ತಾನುಳಿದುಕೊಂಡೆನೆಂದು ಸಂತೋಷಪಟ್ಟುಕೊಂಡು 'ದೇವಾ, ತಮ್ಮ ಬೆಲೆಯಾಗಿ ಸಾವಿರ ಚಿನ್ನದ ನಾಣ್ಯಗಳನ್ನು ಕೊಡಲೇ?" ಎಂದು ಕೇಳಿದನು. ಚ್ಯವನನು "ನಿನ್ನ ಮಂತ್ರಿಗಳನ್ನು ಕೇಳು" ಎಂದನು. ಅರಸನು ಮಂತ್ರಿಗಳನ್ನು ವಿಚಾರಿಸಿ "ನೂರು ಸಾವಿರ" ಎಂದನು.

ಚ್ಯವನನಿಗೆ ಅಸಮಾಧಾನವಾಗಿ " ಬ್ರಾಹ್ಮಣರನ್ನು ವಿಚಾರಿಸು" ಎಂದನು. ಅರಸರು ರಾಜಪುರೋಹಿತನ ಮುಖವನ್ನು ನೋಡಲು, ಆತನು "ಪ್ರಭು, ಬ್ರಾಹ್ಮಣನ ಬೆಲೆಯಿಷ್ಟೆಂದು ಎಲ್ಲೂ ಹೇಳಿಲ್ಲ. ಶ್ರೋತ್ರೀಯನಾಗಿ, ಮಧುಪರ್ಕಕ್ಕೆ ಅರ್ಹನಾದ ಭಗವಂತನಿಗೆ ಏನು ಕೊಟ್ಟರೂ ಸಾಲದು" ಎಂದನು. ಅರಸನು "ಅರ್ಧರಾಜ್ಯವನ್ನು ಕೊಡಲೇ?" ಎಂದು ಕೇಳಿದನು. ಚ್ಯವನನು ಅಸಮಾಧಾನಪಡುತ್ತ ಸುತ್ತಲೂ ನೋಡಿ ಸಂಧ್ಯಾರ್ಘ್ಯವನ್ನು ಕೊಡುತ್ತಿರುವ ಋಷಿಯೊಬ್ಬನನ್ನು ದೂರದಲ್ಲಿ ಕಂಡು, "ಆತನನ್ನು ವಿಚಾರಿಸು" ಎಂದನು.

ಚಕ್ರವರ್ತಿಯು ತಾನೇ ಅಲ್ಲಿಗೆ ಹೋಗಿ ಆತನಿಗೆ ನಮಸ್ಕಾರ ಮಾಡಿ "ಭಗವಾನ್ ನನ್ನ ಧರ್ಮಸಂಕಟವನ್ನು ಪರಿಹರಿಸಿ ಕಾಪಾಡಬೇಕು?" ಎಂದನು. ಆತನು ಎಲ್ಲವನ್ನೂ ವಿಚಾರಿಸಿ "ಅರಸ, ಬೆಲೆಯಿಲ್ಲದ ವಸ್ತುವನ್ನು ಬೆಲೆಯಿಲ್ಲದ ವಸ್ತುವಿನಿಂದಲೇ ಕೊಂಡುಕೋ. ಮನುಷ್ಯರಲ್ಲಿ ಬ್ರಾಹ್ಮಣನನ್ನು ತಿಳಿದವರು ಗೋವಿನಿಂದ ವಿಕ್ರಯಿಸುವರು" ಎಂದನು. ಅರಸರು ಅದನ್ನು ಅನುಮೋದಿಸಿ



ಕ್ರಿ.ಪೂ.298–273 ಬಿಂದುಸಾರನ ಕಾಲ.

ಬಂದು "ಎಷ್ಟು ಹಸುಗಳನ್ನು ಕೊಡಲಿ?" ಎಂದನು. ಚ್ಯವನನು ಅದನ್ನು ಅಂಗೀಕರಿಸಿ "ಅವರು ಕೇಳಿದಷ್ಟು" ಎಂದನು.

ಬೆಸ್ತರು ಅರಸನಿಗೆ ಕೈಮುಗಿದು ಹೇಳಿಕೊಂಡರು; "ಬುದ್ಧೀ, ತಪಸ್ಸು ಕೆಡಿಸಿದ್ರೋ ಅಂತ ಇವಪ್ಪ ಸಾಪ ಕೊಡಲಿಲ್ಲವಲ್ಲ. ಅದೇ, ನಮ್ಮ ಅದೃಷ್ಟ ಇನ್ನು ನಮಗೆ ಬೆಲೆ ಕೊಡೋದಾ? ಇವಪ್ಪ ಏನು ಮೀನು ಕೆಟ್ಟೋದನಾ? ನಮಗೇನೂ ಬೇಡ ಬುದ್ಧಿ ನಿಮ್ಮ ಪಾದ."

ಬ್ರಾಹ್ಮಣನು ಕೇಳಲಿಲ್ಲ: "ಬಹು ದಿನಗಳಿಂದ ಈ ಮೀನುಗಳ ಜೊತೆಯಲ್ಲಿದ್ದು ನಾನೂ ಮೀನೇ ಆಗಿಹೋಗಿದ್ದೇನೆ. ಇದೋ ಇಲ್ಲಿ ಬಿದ್ದಿರುವವರೆಲ್ಲಾ ನಮ್ಮ ಬಾಂಧವರೇ! ನಾನೂ ಅವರ ಹಾಗೆಯೇ! ಅವರು ಸತ್ತಿದ್ದಾರೆ. ನಾನು ಬದುಕಿದ್ದೇನೆ. ಅಷ್ಟೇ! ಅವರಿಂದ ನೀನು ಕೊಂಡುಕೊಳ್ಳದಿದ್ದರೆ, ನಾನೂ ಈ ನಮ್ಮ ನೆಂಟರೊಡನೆ ಸಾಯಬೇಕಾಗುವುದು" ಎಂದು ಖಚಿತವಾಗಿ ನುಡಿದನು.

ಅರಸನಿಗೂ ಬೆಸ್ತರ ಯಜಮಾನನಿಗೂ ಎಷ್ಟೋ ಹೊತ್ತು ಮಾತು ನಡೆಯಿತು. ಬೆಲೆಯನ್ನು ತೆಗೆದುಕೊಳ್ಳಬೇಕೆಂದು ಅರಸು, ತೆಗೆದುಕೊಳ್ಳುವುದಿಲ್ಲವೆಂದು ಅವನು. ಕೊನೆಗೆ ಚ್ಯವನನ ಬೆಲೆಯಾಗಿ ಒಂದು ಹಸುವನ್ನು ತೆಗೆದುಕೊಳ್ಳಲು ಬೆಸ್ತರ ಯಜಮಾನನು ಒಪ್ಪಿದನು. ಅದನ್ನು ಅಲ್ಲಿಯೇ ಯಾರಿಗೋ ದಾನ ಮಾಡಿಯೂ ಬಿಟ್ಟನು.

ಅರಸನು ಚ್ಯವನನ್ನು ಅರಮನೆಗೆ ಬರಬೇಕು ಎಂದು ಪ್ರಾರ್ಥಿಸಿದನು. ಆತನು ನಕ್ಕು " ಈಗಲೀಗ ಚೆನ್ನಾಯಿತು. ಈ ಮನುಷ್ಯರ ಕಾಟ ತಪ್ಪಿಸಿಕೊಂಡು ಏಕಾಂತದಲ್ಲಿ ಇರಬೇಕು ಎಂದು ನಾನು ನೀರಿನೊಳಗೆ ಇದ್ದುದು. ಇಂಥ ನನಗೆ ಅರಮನೆಯೇ? ಅರಮನೆಯು ಭೋಗಸ್ಥಾನ. ನಮಗೆ ಅದು ಬೇಕಿಲ್ಲ" ಎಂದನು. ಚಕ್ರವರ್ತಿಯು " ಮಹರ್ಷಿ, ಒಂದೆರಡು ದಿನ ನಮ್ಮಲ್ಲಿದ್ದು ನಮಗೆ ಧರ್ಮ ವಿಚಾರವನ್ನು ತಿಳಿಯಹೇಳಿ ಅನುಗ್ರಹಮಾಡಬೇಕು" ಎಂದು ಬೇಡಿದನು. ಆತನು "ಕಾಮ ಲೋಭಗಳಿಲ್ಲದ ಮನಸ್ಸಿಗೆ ತೋರುವುದೆಲ್ಲವೂ ಧರ್ಮವೇ! ಆದರೂ ನೀನು ಧರ್ಮಶ್ರವಣಾರ್ಥವಾಗಿ ನನ್ನನ್ನು ಕರೆಯುವುದರಿಂದ ಬರುವುದಿಲ್ಲವೆನ್ನುವಂತಿಲ್ಲ. ಬರುತ್ತೇನೆ ನಡೆ" ಎಂದನು.

ಚ್ಯವನನು ಹೊರಡುತ್ತಿದ್ದ ಹಾಗೆಯೇ ಬೆಸ್ತರ ಯಜಮಾನನು ಬಂದು ಮತ್ತೆ ನಮಸ್ಕಾರ ಮಾಡಿದನು. ಆ ಮಹರ್ಷಿಯು ನಗುತ್ತಾ " ಏನು ಮತ್ತೆ ಬಂದೆ?" ಎಂದು ಕೇಳಿದನು. ಅವನು "ಸೋಮಿ, ತಮ್ಮಂಗೆ ತಿಳಿದೋರು ಹೇಳಿರೋದ ಕೇಳಿವ್ನಿ. ಏಳಜ್ಜೆ ಒಟ್ಟಿಗೆ ನಡೆದರೆ, ಏಳು ಮಾತು ಆಡಿದರೆ ನಂಟತನ ಗಂಟು ಬೀಳ್ತದೆ ಅಂತ. ತಾವೂ ನಾವೂ ಎರಡೂ ಮಾಡಿದ್ದೀವಿ. ನಮಗೂ ತಮಗೂ ನಂಟತನ ಗಂಟುಬಿದ್ದದೆ. ಒಂದು ಸಲ ನಮ್ಮ ಅಟ್ಟೀವರೆಗೂ ತಾವು ಒಂದು ಆಲೂ ಅಣ್ಣು ಒಪ್ಪಸ್ಕೋಬೇಕು ನನ್ನೊಡೆಯ!" ಎಂದು ಅಡ್ಡಬಿದ್ದನು.

"ಆಯಿತು, ನಾನು ಯಾವಾಗ ಏಳು ಹೆಜ್ಜೆ ನಿಮ್ಮ ಜೊತೆಯಲ್ಲಿ ನಡೆದುದು?"

"ತಮ್ಮ ನೀರಿಂದ ಎಳೆಯೋವಾಗ."

ಚ್ಯವನನು ನಕ್ಕು 'ಆಗಲಿ ಎಂದು, "ಅರಸ, ಇವರು ಕಾರಣಭಾಂದವರು. ಮೊದಲು ಇವರ ಕೋರಿಕೆಯನ್ನು ನೆರವೇರಿಸಿ ಆನಂತರ ನಾನು ನಿನ್ನ ಅತಿಥಿಯಾಗ ತಕ್ಕವನು" ಎಂದನು.

ಅರಸನು ಮಹರ್ಷಿಯ ಜೊತೆಯಲ್ಲಿ ಬೆಸ್ತರ ಪಾಳ್ಯಕ್ಕೆ ಹೋದನು. ಮಹರ್ಷಿ ರಾಜರ್ಷಿಗಳಿಬ್ಬರೂ ಆ ಬೆಸ್ತರು ಸಲ್ಲಿಸಿದ ಗೌರವನನ್ನು ಸ್ವೀಕರಿಸಿ ಅರಮನೆಗೆ ಬಂದರು.

ಆಪ್ತ ಮಾತುಗಳು.

## ಹೇರಳ ಅವಕಾಶಗಳು ಮತ್ತು ಸದುಪಯೋಗದ ಕೊರತೆ

ಲೇ : ಬಿ. ಎನ್. ರಮೇಶ ಬೊಂಗಾಳೆ.

ಅವಕಾಶದ ನಿಜವಾದ ಉಪಯೋಗವು ಹೊಲದಲ್ಲಿ, ಬೀಜ ಬಿತ್ತುವುದಕ್ಕೆ ಸಮವೆನ್ನಬಹುದು. ಆ ಬೀಜದಿಂದಲೇ ವೃಕ್ಷವಾಗುತ್ತದೆ. ಆ ನಂತರ ಅದರಲ್ಲಿ ಹೂವು ಮತ್ತು ಹಣ್ಣುಗಳು ಬಿಡಲಾರಂಭಿಸುತ್ತವೆ. ಅದರಿಂದ ಇತರರಿಗೆ ಲಾಭವಾಗುತ್ತದೆ. ಹಿಂದಿನ ಕಾಲದಲ್ಲಿ ಅವಕಾಶಗಳನ್ನು ಗುರುತಿಸಿ ಉದ್ಯೋಗ ಮಾಡುತ್ತಿದ್ದ ಜನರು ಜ್ಞಾನ ವಿಕಸನವಾಗುವಂತಹ ಅನೇಕ ಸಿದ್ಧಾಂತಗಳನ್ನು ಕಂಡುಕೊಂಡರಲ್ಲದೆ ಅನೇಕ ತೆರನಾದ ಉಪಯುಕ್ತವಾದ ಹೊಸ ವಸ್ತು ಪದಾರ್ಥಗಳನ್ನು ಸೃಷ್ಟಿಸಿದರು. ಇಂದು ಆ ಅಪರೂಪದ ವಸ್ತುಗಳೇ ಬೀದಿ-ಬೀದಿಗಳಲ್ಲಿ ಪ್ರಾಪ್ತವಿದೆಯಲ್ಲದೆ ಸರ್ವಸಾಧಾರಣರಿಗೂ ಎಣಕುತ್ತಿವೆ. ಅದಕ್ಕೆ ಉದಾಹರಣೆ ಅನಗತ್ಯವೆನ್ನಿಸಿದರೂ ಕೇವಲ ಒಂದು ವಸ್ತುವನ್ನಾದರೂ ತೆಗೆದುಕೊಂಡು ನೋಡೋಣ. ಅಲೆಕ್ಸಾಂಡರ್ ಗ್ರಹಾಂಬೆಲ್ ತನ್ನ ಸಿದ್ಧಾಂತಗಳ ಆದಾರದ ಮೇಲೆ ಟೆಲಿಫೋನ್ ಕಂಡು ಹಿಡಿದ ಪ್ರಾರಂಭದ ದಿನಗಳಲ್ಲಿ ಅದೊಂದು ಅದ್ಬುತವಾದ,ದುಬಾರಿಯಾದ, ಕೆಲವೇ ದೊಡ್ಡ ಮನುಷ್ಯರಿಗೆ ಎಟಕಬಹುದಾಗಿದ್ದ ವಸ್ತುವಾಗಿತ್ತು. ಅದೇ ಇಂದು ಇನ್ನಷ್ಟು ಆಧುನಿಕಗೊಂಡ ಮೊಬೈಲ್ ರೂಪದಲ್ಲಿ ಎಲ್ಲೆಂದರಲ್ಲಿ, ಎಲ್ಲರಲ್ಲಿಯೂ ರಾರಾಜಿಸುತ್ತಲ್ಲವೇ?



ಕ್ರಿ.ಪೂ.273-232 ಅಶೋಕ ಸಾಮ್ರಾಟನ ಕಾಲ.

'ಪ್ರಸ್ತುತ ಯುಗಕ್ಕೆ ಅವಕಾಶಗಳಿಂದ ತುಂಬಿದ ಗಣಿ' ಎಂದು ಕರೆಯಬಹುದು. ಎಲ್ಲ ವರ್ಗದ, ಎಲ್ಲ ತೆರನಾದ ಜನರಿಗೂ ವಯೋಮಾನದ ತಾರತಮ್ಯವಿರದೆ ಹೇರಳವಾದ ಅವಕಾಶಗಳು ಬಾಯ್ದೆರೆದುಕೊಂಡು ಕಾದಿರುವುದನ್ನು ಎಲ್ಲೆಡೆ ಕಾಣಬಹುದು. ಹಿಂದಿನ ಕಾಲದಲ್ಲಿ ಯಾರ ಶಕ್ತಿ ಸಾಮರ್ಥ್ಯಕ್ಕೂ ಎಟುಕದೆ ಗಗನ ಕುಸುಮವಾಗಿದ್ದವೋ ಆ ಅವಕಾಶಗಳು ಇಂದು ಸ್ವತ: ಎಲ್ಲರನ್ನು ಸ್ವಾಗತಿಸಲು ಸನ್ನದ್ಧವಾಗಿವೆ. ಅವಕಾಶಗಳಿಗೆ ಅಂತ್ಯವೆಂಬುದಿಲ್ಲ. ಅದೃಷ್ಟವನ್ನು ಬದಲಿಸುವಂತಹ ಘಟನೆಗಳಿಗೂ ಯಾವ ಕೊರತೆಯಿಲ್ಲ. ಕೊರತೆಯಿದೆಯೆಂದರೆ ಅದು ಕೇವಲ ದೃಢವಾದ ಆಸಕ್ತಿಯಿಂದ ಕೆಲಸದಲ್ಲಿ ತೊಡಗಿಸಿಕೊಳ್ಳುವ ವ್ಯಕ್ತಿಗಳದ್ದು ಮಾತ್ರ.

ಅವಕಾಶದ ಸ್ವರೂಪವನ್ನು ವರ್ಣಿಸುತ್ತ ಓರ್ವ ಲೇಖಕ ಹೀಗೆ ಬರೆದಿದ್ದಾನೆ "ಅವಕಾಶದ ಮುಖದ ಮುಂಭಾಗ ಕೂದಲಿನಿಂದ ತುಂಬಿದ್ದರೆ ಹಿಂಭಾಗ ಬೋಳಾಗಿರುತ್ತದೆ. ಒಂದು ವೇಳೆ ಅದನ್ನು ಮುಂಭಾಗದಿಂದ ಹಿಡಿದುಕೊಂಡರೆ ಹಿಡಿತಕ್ಕೆ ಬರುತ್ತದೆ. ಆದರೆ ಹಿಡಿಯದೆ ಹಾಗೆಯೇ ಬಿಟ್ಟರೆ ಪುನ: ಯಾವತ್ತಿಗೂ ಹಿಡಿಯಲಾಗುವುದಿಲ್ಲ.

ಧರೆಗಿಳಿದ ದಿವ್ಯತೇಜ

# ಋಷ್ಯಶೃಂಗಗಿರಿ

ಲೇ : ಲ. ನ. ಶಾಸ್ತ್ರೀ.

ಹಿಂದೆ ಶ್ರೀ ಶಂಕರರು ಬಂದು ಸ್ವಲ್ಪ ದಿನವಿದ್ದು ಹೊರಟಾಗ, ಅವರನ್ನು ಹಿಂಬಾಲಿಸಿದ ಗೋವತ್ಸವವು ಸಂಚಾರದಲ್ಲಿ ಯಾವಾಗಲೂ ಅವರ ಜೊತೆಯಲ್ಲಿಯೇ ಇರುತ್ತಿತ್ತಷ್ಟೇ. ಅದು ಆಚಾರ್ಯರ ಎಲ್ಲ ಅಮೂಲ್ಯ ಗ್ರಂಥಗಳನ್ನು ತನ್ನ ಬೆನ್ನ ಮೇಲೆ ಧರಿಸಿ, ಸದಾ ಮುಂದಿರತ್ತಿತ್ತು. ವೃಷಭರಾಜ, ಅವರ ಹಿಂದೆ ಸದಾಶಿವ ಪರಮೇಶ್ವರರು, ಆಚಾರ್ಯರು ಅನಂತರ ಪದ್ಮಪಾದರು, ಸುರೇಶ್ವರರು, ಹಸ್ತಾಮಲಕರು ಮತ್ತು ಇತರ ಸಂನ್ಯಾಸಿಗಳು, ಅವರೆಲ್ಲರ ಹಿಂಬದಿಗೆ ಉಳಿದವರು ಗಾಡಿಗಳಲ್ಲಿ, ಪಾಲಕಿಗಳಲ್ಲಿ, ಒಮ್ಮೊಮ್ಮೆ ಗಾಡಿ ಪಾಲಕಿಗಳು ಮೊದಲೇ ಸಾಗಿ ಮುಂದಿನ ಮಜಲುಗಳಲ್ಲಿ ಬೀಡು ಬಿಡುತ್ತಿದ್ದುದೂ ಉಂಟು.

ಶೃಂಗಗಿರಿಯತ್ತ ಬಂದಾಗ ವೃಷಭರಾಜನ ಉತ್ಸಾಹ ಸಂಭ್ರಮ ಉಕ್ಕಿತು. ಅದು ಸರಸರನೆ ಹೆಜ್ಜೆ ಹಾಕಿತು. ಬಿರಬಿರನೆ ನಡೆಯಿತು. ಈ ಯಾತ್ರಿಕರ ತಂಡ ಶೃಂಗಗಿರಿಯತ್ತ ಬರುವಾಗ ಸಂಧ್ಯಾಕಾಲ ಸಮೀಪಿಸುತ್ತಿತ್ತು. ಬ್ರಹ್ಮಚಾರಿ ಗಿರಿಯೂ ಆತನ ಸಹಮಿತ್ರರೂ ಕೆಲವರು ತುಂಗಾ ಸ್ನಾನ ಮಾಡಿ ಶ್ರೀ ವಿಭಾಂಡಕೇಶ್ವರನಿಗೆ ಸಂಧ್ಯಾ ಪೂಜಾಭಿಷೇಕಕ್ಕೆ ಅಗ್ರೋದಕವನ್ನು ತೆಗೆದುಕೊಂಡು, ಗುಡ್ಡವನ್ನು ಸಮೀಪಿಸುತ್ತಿದ್ದರು, ವೃಷಭರಾಜನು ಓಡೋಡಿಬಂದು, ಅವರ ಮುಂದೆ ನಿಂತಿತು. ಅದರ ಬೆನ್ನ ಮೇಲೆ ಗ್ರಂಥದ ಹೊರೆಯಿದೆ. ಹಿಂದೆ ಜನ ಯಾರೂ ಕಾಣುತ್ತಿಲ್ಲ. ವೃಷಭವು ಗುಡ್ಡದ ತುದಿಯಲ್ಲಿರುವ ಈಶ್ವರಲಿಂಗದತ್ತ ಮುಖಮಾಡಿ, ಪದೇ ಪದೇ ತಲೆವಾಗುತ್ತಿದೆ! ಗಿರಿಗೆ ಆಶ್ಚರ್ಯವಾಯಿತು. ಆಲಭಾಂಡವನ್ನು ಇಳಿಸಿ, ಬಂಡೆಯ ಮೇಲಿಟ್ಟು ವೃಷಭದ ಮೈದಡಹಿದನು. ಅದರ ಬೆನ್ನಮೇಲಿದ್ದ ಭಾರವನ್ನು ಇಳುಹಿ, ಬಂಡೆಯ ಮೇಲಿಟ್ಟನು. ಕೂಡಲೇ ವೃಷಭವು ನೆಲದ ಮೇಲೆ ಮೈಚಾಚಿ ಈಶ್ವರನಿಗೆ ನಮಸ್ಕರಿಸಿತು! ಸ್ವಲ್ಪ ಹೊತ್ತಿಗೆಲ್ಲಾ ಆಚಾರ್ಯ ಶಂಕರರೂ ಅವರ ಶಿಷ್ಯರೂ ಅಲ್ಲಿಗೆ ಒಬ್ಬೊಬ್ಬರಾಗಿ ಆಗಮಿಸಿದರು. ಗಿರಿಗೆ ಆಶ್ಚರ್ಯ, ಇಷ್ಟೊಂದು ಯತಿಗಳು ಯಾರಿರಬಹುದು? ಎಷ್ಟೋ ವರ್ಷಗಳ ಹಿಂದೆ ಒಂದೆರಡು ಮುಖಗಳನ್ನು ಕಂಡಂತದೆ; ಶ್ರೀ ಶಂಕರರು ಸಮೀಪಿಸುತ್ತಿದ್ದಂತೆಯೇ, ಗಿರಿಯು ಆಷ್ಟಾಂಗ ಪ್ರಣಾಮವನ್ನು ಮಾಡಿ ಕೈಮುಗಿದು ವಿನಯದಿಂದ ನಿಂತುಕೊಂಡನು. ಆಚಾರ್ಯರು "ಏನಪ್ಪ ವತ್ಸ, ನೀನು ಗಿರಿಯಲ್ಲವೇ? ಚೆನ್ನಾಗಿದ್ದಿಯಾ? ಜಪಾನುಷ್ಠಾನ, ಈಶ್ವರ ಸೇವೆ ಚೆನ್ನಾಗಿ ಬೆಳೆಯುತ್ತಿವೆಯೇ?" ಎಂದು ಕೇಳಿದರು. ಗಿರಿಗೆ ತತ್‌ಕ್ಷಣ ನೆನಪಾಯಿತು, ಸುಮಾರು ಹತ್ತು ಹನ್ನೆರಡು ವರ್ಷದ ಹಿಂದೆ ಬಂದಿದ್ದ ಬಾಲ ಸಂನ್ಯಾಸಿ ಇವರೇ ಎಂದು. ಅವನು ಮತ್ತೊಮ್ಮೆ ನಮಸ್ಕಾರ ಮಾಡಿ "ಯತಿದೇವ, ತಮ್ಮ ಆಶೀರ್ವಾದದಿಂದ ಜಪಾನುಷ್ಠಾನಗಳು ಚೆನ್ನಾಗಿ ಬೆಳೆಯುತ್ತಿವೆ" ಎಂದು ವಿನಂತಿಸಿದನು.

"ಗಿರಿ ನಾವು ಸ್ವಲ್ಪ ಕಾಲ ಇಲ್ಲಿಯೇ ಇರುತ್ತೇವೆ. ಸ್ಥಳದವನಾದ ನೀನೂ ನಿನ್ನ ಸ್ನೇಹಿತರೂ ನಮಗೆ ಸಹಕಾರ ನೀಡಬೇಕು" ಎಂದರು ಆಚಾರ್ಯರು. ಗಿರಿಯು ತಲೆವಾಗಿ ಯತಿವರ್ಯ, ಇದೆಲ್ಲವೂ ತಮ್ಮದೇ ಆಗಿದೆ. ತಾವು ಆತ್ಮಾರಾಮರಾಗಿ ಇಲ್ಲಿ ಎಷ್ಟು ಕಾಲಬೇಕಾದರೂ ಇರಬಹುದು. ನಮ್ಮಿಂದ ಸೇವೆ ಕೈಗೊಳ್ಳಬಹುದು" ಎಂದು ಬಿನ್ನವಿಸಿದನು. ಆ ಸುತ್ತ ಮುತ್ತ ಇದ್ದ ವಿದ್ವಾಂಸರೂ, ಸಾಧಕರೂ ಆಚಾರ್ಯರನ್ನು ಗೌರವದಿಂದ ಸ್ವಾಗತಿಸಿದರು.

ತುಂಗಾತೀರದಲ್ಲಿ ಹಲವಾರು ಪರ್ಣಕುಟಿಗಳು ನಿರ್ಮಿಸಲ್ಪಟ್ಟವು. ಆಚಾರ್ಯರೊಡನೆಯೇ ಬಂದಿದ್ದ ಉಭಯ ಭಾರತಿಗೆ ತುಂಗೆಯ ಉತ್ತರದ ದಡದಲ್ಲಿದ ಗುಹೆಯೊಂದು ತೆರವಾಗಿ ಸಿದ್ದವಾಯಿತು. ಶಂಕರಾಚಾರ್ಯರೂ ಅವರ ಶಿಷ್ಯರೂ ಶೃಂಗೇರಿಯಲ್ಲಿ ಇದ್ದುಕೊಂಡು ಜಪತಪ, ಗ್ರಂಥರಚನೆ, ಅಧ್ಯಯನ, ಅಧ್ಯಾಪನ ಮಾಡಲು ನಿರ್ಧರಿಸಿದರು.

ಶಂಕರರು ತಮ್ಮ ಶಿಷ್ಯರಿಗೆ ಮತ್ತು ಇತರ ಶ್ರೋತೃವರ್ಗಕ್ಕೆ ನಿತ್ಯವೂ ಭಾಷ್ಯಾಪಾಠ ಮಾಡುತ್ತಿದ್ದರು. ಪಾಠವಾದ ನಂತರ ಪ್ರಶ್ನೋತ್ತರದ ಕಾರ್ಯಕ್ರಮವೂ ಇರುತ್ತಿತ್ತು.ವಿಶೇಷವಾಗಿ ಹಸ್ತಾಮಲಕರು ಮೌನವಾಗೇ ಇರುತ್ತಿದ್ದರು. ಯಾವಾಗಲಾದರೊಮ್ಮೆ ಮಾತ್ರ ಮಾತಾಡುತ್ತಿದ್ದರು. ಸುರೇಶ್ವರರೂ ಸನಂದರೂ ತಮ್ಮ ಮತ್ತು ಇತರ ಎಲ್ಲ ಶಿಷ್ಯರ ಪರವಾಗಿಯೇ ಪ್ರಶ್ನೆಗಳನ್ನು ಹಾಕುತಿದ್ದರು.



ಕ್ರಿ.ಪೂ.185–147 ಶುಂಗ ಸಂತತಿ.

ಸದಾಶಿವ, ಪರಮೇಶ್ವರ, ಗಿರಿ ಇವರು ಏನನ್ನೂ ಕೇಳುತ್ತಿರಲಿಲ್ಲ. ಸಮಚಿತ್ತರಾಗಿ ಕುಳಿತು ಆಲಿಸುತ್ತಿದ್ದರು.

ಒಂದೆರಡು ವರ್ಷಗಳು ಕಳೆದಿರಬಹುದು. ಕೆಲವರಿಗೆ ಆಚಾರ್ಯರ ಭಾಷ್ಯಗಳಿಗೆ ಯಾರಾದರೂ ವಾರ್ತಿಕಗಳನ್ನು ಬರೆದರೆ, ಮುಮುಕ್ಷಗಳಿಗೆ ಹೆಚ್ಚು ಉಪಯುಕ್ತವಾಗುತ್ತದೆ ಎನ್ನಿಸಿತು. ಮೂಲಗ್ರಂಥದ ವ್ಯಾಖ್ಯಾನದ ಜತೇಗೆ ಇತರ ಮತದ ವಿಚಾರವಿಮರ್ಶೆಯೂ ಇರುವುದರಿಂದ, ವಾರ್ತಿಕದ ರಚನೆ ತೀರಾ ಅವಶ್ಯಕ ಎಂದು ಅವರು ಬಿನ್ನವಿಸಿದರು.

ಸುರೇಶ್ವರರು ಈ ವೇಳಗಾಗಲೇ ಉತ್ತರ ಮೀಮಾಂಸಾ ಮತ್ತು ವೇದಾಂತಶಾಸ್ತ್ರವನ್ನು ಶ್ರೀ ಶಂಕರರಲ್ಲಿ ಪೂರ್ಣವಾಗಿ ಅಧ್ಯಯನ ಮಾಡಿದ್ದರು. ಸನಂದನವರು ಸಹಾ ವೇದಾಂತ ಶಾಸ್ತ್ರವನ್ನು ಎರಡು ಮೂರು ಸಲ ಶಂಕರರಲ್ಲಿ ಅಧ್ಯಯನ ಮಾಡಿದರು. ವಾರ್ತಿಕಗಳನ್ನು ರಚಿಸಲು ಪೂರ್ವ ಮೀಮಾಂಸಾ ಶಾಸ್ತ್ರ ಪರಿಚಯವು ಇದ್ದಲ್ಲಿ ತುಂಬಾ ಉಪಯುಕ್ತವಾಗುವುದೆಂಬ ಭಾವನೆಯಿಂದ, ಆಚಾರ್ಯರು ವಾರ್ತಿಕ ರಚನೆಯನ್ನು ಸುರೇಶ್ವರರಿಗೇ ವಹಿಸಬೇಕೆಂಬ ಅಪೇಕ್ಷೆ ಉಳ್ಳವರಾಗಿದ್ದರು. ಆದರೆ ಸನಂದನರಿಗೂ ಇತರ ಸಂನ್ಯಾಸಿಗಳಿಗೂ ಈ ವಿಚಾರದಲ್ಲಿ ಸಹಮತ ಇರಲಿಲ್ಲ. ಸದಾಶಿವ ಪರಮೇಶ್ವರರೂ ಸಹ ಸೂತ್ರಭಾಷ್ಯಕ್ಕೆ ವಾರ್ತಿಕವನ್ನು ಬರೆಯಲು ಸನಂದನರೇ ಸಮರ್ಥರು, ಎಂದು ನಂಬಿದ್ದರು.

ಆಚಾರ್ಯರೂ ತಮ್ಮ ಬಹು ಶಿಷ್ಯರ ಮನಸ್ಸನ್ನು ಸೂಕ್ಷ್ಮವಾಗಿ ಗ್ರಹಿಸಿದರು, ತಮ್ಮ ಶಿಷ್ಯರನ್ನೆಲ್ಲಾ ಕರೆದು, "ಸೂತ್ರ ಭಾಷ್ಯಕ್ಕೆ ವಾರ್ತಿಕರನ್ನು ರಚಿಸಲು ಯಾರು ಸಮರ್ಥರು?" ಎಂದು ಪ್ರಶ್ನಿಸಿದರು. ಬಹುಜನ ಸನಂದನರ ಹೆಸರನ್ನು ಮುಂದಿಟ್ಟರು. ಸನಂದನರಾದರೋ ಹಸ್ತಾಮಲಕರನ್ನು ಸೂಚಿಸಿದರು. ಆಚಾರ್ಯರು "ಹಸ್ತಮಲಕರು ನಮ್ಮ ಗುರುಗಳಾದ ಗೋವಿಂದಪಾದರಂತೆ ಸದಾ ಸಮಾಧಿಸ್ಥಿತಯಲ್ಲಿ ಇರುತ್ತಾರೆ.ಅವರನ್ನು ಬಾಹ್ಯಕಾರ್ಯಕ್ಕೆ ಪ್ರವರ್ತಿಸುವಂತೆ ಮಾಡುವುದು ಕಷ್ಟಸಾಧ್ಯ" ಎಂದರು.

ಶಿಷ್ಯರೆಲ್ಲಾ ಗುರುವಿನತ್ತ ಕುತೂಹಲದಿಂದ ನೋಡುತಿದ್ದರು. ಆಚಾರ್ಯರು ಮುಂದುವರಿದು "ಆದ್ದರಿಂದ ಸುರೇಶ್ವರರು ತೈತ್ತಿರೀಯ ಮತ್ತು ಬೃಹದಾರಣ್ಯಕ ಭಾಷ್ಯಗಳಿಗೆ ವಾರ್ತಿಕಗಳನ್ನು ಬರೆಯಲಿ . ಸನಂದನರು ಸೂತ್ರಭಾಷ್ಯಕ್ಕೆ ವಾರ್ತಿಕವನ್ನು ಬರೆಯಲಿ" ಎಂದು ಅಪ್ಪಣೆ ಮಾಡಿದರು. ಸುರೇಶ್ವರರು "ಗುರುದೇವ, ನನ್ನದೊಂದು ಪ್ರಾರ್ಥನೆಯಿದೆ" ಎಂದು ಬಿನ್ನವಿಸಿದರು.

"ಹೇಳಿ ಸುರೇಶ್ವರರೇ" ಎಂದರು ಆಚಾರ್ಯರು.

"ತಮ್ಮ ಅಪ್ಪಣೆಯಂತೆ ಉಪನಿಷತ್ ಭಾಷ್ಯಗಳಿಗೆ ವಾರ್ತಿಕವನ್ನು ರಚಿಸುತ್ತೇನೆ. ಅದರ ಮೊದಲು ನನ್ನ ಅದ್ವೈತ ಜ್ಞಾನವನ್ನು ದೃಢಪಡಿಸಿಕೊಳ್ಳಲು ಒಂದು ಸ್ವತಂತ್ರ ಗ್ರಂಥವನ್ನು ಬರೆಯಬೇಕೆಂದಿದ್ದೇನೆ."

"ಆಗಬಹುದು, ಹಾಗೆಯೇ ಮಾಡಿ" ಎಂದರು.

ಸುರೇಶ್ವರರು ಗುರುಗಳ ಅಪ್ಪಣೆಯಂತೆ 'ನೈಷ್ಕರ್ಮ್ಯಸಿದ್ಧಿ' ಎಂಬ ಗ್ರಂಥರಚನೆಯನ್ನು ಆರಂಭಿಸಿದರು. ಸನಂದನರು 'ಪಂಚಪಾದಿಕಾ' ಎಂಬ ಸೂತ್ರಭಾಷ್ಯದ ವ್ಯಾಖ್ಯಾನ ಗ್ರಂಥವನ್ನು ಆರಂಭಿಸಿದರು. ಆಚಾರ್ಯರು ಸಹ ಹಲವಾರು ಪ್ರಕರಣ ಗ್ರಂಥಗಳ ರಚನೆಯಲ್ಲಿ ತೊಡಗಿದರು. ಹೀಗೆ ಶೃಂಗಗಿರಿಯು ಸಾರಸ್ವತ ಕೃಷಿಕೇಂದ್ರವೂ, ತಪೋನುಷ್ಠಾನ ಸ್ಥಾನವೂ ಆಯಿತು.

ಒಂದು ದಿನ ಆಚಾರ್ಯರು ಮಧ್ಯಾಹ್ನ ಭಾಷ್ಯ ಪ್ರವಚನಕ್ಕೆ ಸಿದ್ಧರಾಗಿ ಬಂದು ಆಸೀನರಾದರು. ಸುತ್ತಲೂ ನೋಡಿದರು. ಗಿರಿಯು ವಿನಾ ಉಳಿದ ಎಲ್ಲ ಶಿಷ್ಯರೂ ಬಂದು ಕುಳಿತ್ತಿದ್ದರು. ಸಾಮಾನ್ಯವಾಗಿ ಗಿರಿಯು ಸದಾಶಿವ ಪರಮೇಶ್ವರ ಬಳಿಯಲ್ಲಿ ಕುಳಿತಿರುತಿದ್ದ. ಈ ದಿನ ಆತ ಏಕೋ ಇನ್ನೂ ಪಾಠಕ್ಕೆ ಬಂದಿರಲಿಲ್ಲ. ಆಚಾರ್ಯರು ಪಾಠವನ್ನು ಆರಂಭಿಸದೆ, ಸದಾಶವನನ್ನು ಕುರಿತು ಪ್ರಶ್ನಿಸುತ್ತ:

"ಗಿರಿಯೆಲ್ಲಿ? ಇನ್ನೂ ಬರಲಿಲ್ಲವಲ್ಲ" ಎಂದರು.

ಸದಾಶಿವನು "ಹೊಳೆಗೆ ವಸ್ತ್ರವನ್ನು ಒಗೆಯಲು ಹೋಗಿರಬೇಕು. ಇನ್ನೇನು ಬರಬಹುದು" ಎಂದನು. ಮತ್ತೊಬ್ಬ ಶಿಷ್ಯ ಪರಮೇಶ್ವರನು "ಗಿರಿಯಿದ್ದರೂ ಒಂದೇ ಎಲ್ಲದಿದ್ದರೂ ಒಂದೇ" ಎಂದನು. ಸನಂದರು ವಿನೋದವಾಗಿ

"ಗಿರಿಯ ಸ್ಥಾನದಲ್ಲಿ ಅವನು ಒರಗುವ ಕಂಬವೇ ಎದೆಯಲ್ಲಾ" ಎಂದು ಬಿಟ್ಟರು. ಆಚಾರ್ಯರಿಗೆ ತಮ್ಮ ಈ ಶಿಷ್ಯರ ವಿಷಯದಲ್ಲಿ ಬೇಸರವುಂಟಾಯಿತು. ಗಿರಿ ಮಾತನಾಡುತ್ತಿರಲಿಲ್ಲ. ಪ್ರಶ್ನಗಳನ್ನು ಕೇಳುತ್ತಿರಲಿಲ್ಲ. ಆದರೆ ಆತ ವಿದ್ವಾಂಸ, ತುಂಬಿದ ಕೊಡ, ಸ್ವಭಾವತಃ ಮೌನಿ, ಮಿತಭಾಷಿ. ವೇದ ಶಾಸ್ತ್ರಗಳನ್ನು ಅಧ್ಯಯನ ಮಾಡಿದವನು. ಆತನ ಯೋಗ್ಯತೆಯನ್ನು ಸರಿಯಾಗಿ ತಿಳಿಯದೆ ಈ ತರುಣರು ಹೀಗೆ ಹಾಸ್ಯಮಾಡಿಬಿಟ್ಟರಲ್ಲಾ ಎಂದು ಆಚಾರ್ಯರಿಗೆ ಖೇದವಾಯಿತು. ತಮ್ಮನ್ನು ತುಂಬಾ ಚಚ್ಚರವಾಗಿ ಸೇವಿಸುತ್ತಿದ್ದ ಗಿರಿಯ ವಿಚಾರದಲ್ಲಿ ಆಚಾರ್ಯರಿಗೆ ತುಂಬಾ ಅಭಿಮಾನವಿತ್ತು.

ತೀರಾ ನಸುಕಿನಲ್ಲಿಯೇ ಎದ್ದು, ಗಿರಿಯು ಆಚಾರ್ಯರ ಎಲ್ಲ ಸೇವೆಗಳಿಗೂ ಸಿದ್ಧವಾಗಿರುತ್ತಿದ್ದನು. ಅವರೊಡನೆ ಸ್ನಾನಕ್ಕೆ ಹೋಗುತಿದ್ದನು. ಅವರ ಮೊದಲೇ ಸ್ನಾನ ಮಾಡಿ, ಅಹ್ನೀಕ ಮುಗಿಸಿ, ಒಗೆದು ಒಣಗಿಸಿದ ವಸ್ತ್ರಗಳನ್ನು ಪುನಃ ಬಂದು ಒಯ್ಯುತ್ತಿದ್ದನು. ಅಹ್ನೀಕಕ್ಕೆ ಸಿದ್ಧಮಾಡುತಿದ್ದನು. ಮಧ್ಯಾಹ್ನದ ಭಿಕ್ಷೆಗೂ ಆತನೇ ವ್ಯವಸ್ಥೆ ಮಾಡುತ್ತಿದ್ದನು. ಪ್ರವಚನಕ್ಕೆ ಕುಳಿತಾಗ ಮಣೆ, ವ್ಯಾಸಪೀಠಗಳನ್ನು ಜೋಡಿಸಿ, ಆ ದಿನದ ಶಾಸ್ತ್ರಗ್ರಂಥವನ್ನು ತಂದಿಡುತ್ತಿದ್ದನು. ರಾತ್ರಿ ಆಚಾರ್ಯರು ವಿಶ್ರಾಂತಿಗಾಗಿ ಮಲಗಿದ ನಂತರ, ಬಾಗಿಲ ಹೊರಗೆ ತಾನೇ ಕಾವಲಿದ್ದು ಮಲಗಿ ಪುನಃ ಉಷಃ ಕಾಲದ ಸೇವೆಗೆ ಅನುವಾಗುತ್ತಿದ್ದನು. ಈ ಪ್ರಿಯ ಶಿಷ್ಯನ ವಿಚಾರವನ್ನು ಉಳಿದವರಾರೂ ಅರಿಯಲು ಪ್ರಯತ್ನಿಸಿರಲೇ ಇಲ್ಲ.

ಈ ದಿನ ಅವನು 'ದಡ್ಡ' ಎಂಬರ್ಥ ಬರುವಂತೆ ತಮ್ಮ ಶಿಷ್ಯರು ಮಾಡಿದ ಹಾಸ್ಯ ಆಚಾರ್ಯರಿಗೆ ಒಪ್ಪಿತವಾಗಲಿಲ್ಲ. ಅವರು ಗಿರಿಯನ್ನು ಮನಸಾ ಸ್ಮರಿಸಿ ಆಶೀರ್ವದಿಸಿದರು. ಅವನಲ್ಲಿ ಸುಪ್ತವಾಗಿ, ಗುಪ್ತವಾಗಿದ್ದ ಜ್ಞಾನವು ಪ್ರಕಾಶಿಸುವಂತೆ ಅನುಗ್ರಹಿಸಿದರು. ಗಿರಿಯು ಆಶ್ರಮಕ್ಕೆ ಬರುತ್ತಾ ತನ್ನಂತೆ ತಾನು ಹಾಡಿಕೊಳ್ಳುತ್ತಾ ಬರುವುದನ್ನು ಎಲ್ಲರೂ ಕಂಡರು! ಆತ ಉಲಿಯತ್ತಿದ್ದ ಸ್ತೋತ್ರವನ್ನು ಕೇಳಿ, ವಿಸ್ಮಯದಿಂದ ಅವರೆಲ್ಲಾ ಸ್ತಬ್ಧರಾದರು.

ಆಚಾರ್ಯರು ಪ್ರಸನ್ನವದನರಾಗಿ ಗಿರಿಯನ್ನೇ ವೀಕ್ಷಿಸುತ್ತಿದ್ದರು. ಗಿರಿಗೆ ಇವರಾರತ್ತಲೂ ಗಮನವೇ ಎಲ್ಲ. ತನ್ನಂತೆ ತಾನು ಹಾಡಿಕೊಳ್ಳುತ್ತಿದ್ದನು. ಬಹುದಿನಗಳದಿಂದ ಆಚಾರ್ಯ ಸೇವೆಯಲ್ಲಿ ಮಗ್ನನಾಗಿದ್ದ ಗಿರಿ, ತನ್ನನ್ನು ಅನುಗ್ರಹಿಸಿ ಪಾರಮಾರ್ಥದ ದಾರಿಯನ್ನು ತೋರಬೇಕೆಂದು, ಅಂದು ಅನನ್ಯವಾಗಿ ಶ್ರೀ ಗುರುವನ್ನು ಅಶುಕವಿಯಾಗಿ ಪ್ರಾರ್ಥಿಸುತ್ತಿದ್ದನು. ಎಲ್ಲರೂ ಆಶ್ಚರ್ಯದಿಂದ ಆತನನ್ನೇ ನೋಡುತ್ತಿದ್ದರು, ಆತನ ದಿವ್ಯಗಾನವನ್ನು ಆಲಿಸುತ್ತಿದ್ದರು.

ವಿಧಿತಾಖಿಲ ಶಾಸ್ತ್ರ ಸುಧಾ ಜಲಧೇ
ಮಹಿತೋಪನಿಷತ್ ಕಥಿತಾರ್ಥನಿಧೇ
ಹೃದಯೇ ಕಲಯೇ ವಿಮಲಂ ಚರಣಂ
ಭವಶಂಕರದೇಶಿಕಮೇ ಶರಣಮ್॥
ಕರುಣಾವರುಣಾಲಯ ಪಾಲಯ ಮಾಂ
ಭವಸಾಗರ ದು:ಖವಿದೂರ ಹೃದಂ
ರಚಯಾಖಿಲದರ್ಶನ ತತ್ತ್ವವಿದಂ
ಭವಶಂಕರದೇಶಿಕಮೇ ಶರಣಮ್॥

ಅಮೃತ ಸರಸ್ಸಿನಂತಿರುವ ಸರ್ವಶಾಸ್ತ್ರವಿದನೇ, ಮಹತ್ವಪೂರ್ಣವಾದ ಉಪನಿಷತ್ತುಗಳಲ್ಲಿ ಇರುವ ಗೂಢಾರ್ಥವನ್ನು ತಿಳಿದವನೇ, ನಿನ್ನ ನಿರ್ಮಲವಾದ ಪಾದಗಳನ್ನು ನನ್ನ ಹೃದಯದಲ್ಲಿ ಧ್ಯಾನಿಸುತ್ತೇನೆ. ಹೇ ಆಚಾರ್ಯ ಶಂಕರನೇ ನನ್ನನ್ನು ಅನುಗ್ರಹಿಸು.

ತನ್ನಂತೆ ತಾನೇ ಹಾಡಿಕೊಳ್ಳುತ್ತ ಬಂದ ಗಿರಿಯು ಆಚಾರ್ಯರ ವಸ್ತ್ರಗಳನ್ನೆಲ್ಲಾ ಒಣಗಲು ಹಾಕಿ, ಪ್ರವಚನ ಸ್ಥಳಕ್ಕೆ ಬಂದು, 'ಭವಶಂಕರದೇಶಕಮೇ ಶರಣಮ್' ಎನ್ನುತ್ತ ಸಾಷ್ಟಾಂಗ ವಂದನೆ ಮಾಡಿ ಕುಳಿತನು. ಆ ದಿನ ಗಿರಿ ಎಂದಿನಂತೆ ಇರಲಿಲ್ಲ. ಅವನ ಶರೀರವೆಲ್ಲಾ ಕಂಪಿಸುತ್ತಿತ್ತು. ಹರ್ಷೋನ್ಮಾದದಿಂದ ಮೈಕೂದಲೆಲ್ಲಾ ನೆಟ್ಟಗಾಗುತ್ತದ್ದವು. ಕಣ್ಣುಗಳು ಕಾಂತಿಯಿಂದ ಬೆಳಗುತ್ತಿದ್ದವು. ಅವನು 'ಭವಶಂಕರದೇಶಕಮೇ ಶರಣಮ್' ಎಂದು ಹೇಳಿ ಕೊಳ್ಳುತ್ತಲೇ ಇದ್ದನು.

ಆಚಾರ್ಯರೇ ಎದ್ದು ಮೆಲ್ಲನೆಗೆ ಗಿರಿಯ ಬಳಿ ಸಾಗಿದರು. ಆತನ ತಲೆಯ ಮೇಲೆ ತಮ್ಮ ಕರಕಮಲವನ್ನಿಟ್ಟು "ಗಿರಿ ವತ್ಸ ನಿನಗೇನು ಬೇಕಪ್ಪಾ?" ಎಂದು ಮೃದುವಾಗಿ ಪ್ರಶ್ನಿಸಿದರು. ಗಿರಿಯ ವದನದಿಂದ ಪುನಃ ಕಾವ್ಯಲಹರಿ ಹೊರಟಿತು:

ಭಗವನ್ಮಧಧೌಮೃತಿ ಜನ್ಮಜಲೇ
ಸುಖದುಃಖಜುಷೇ ಪತಿತಂ ವ್ಯಥಿತಮ್
ಕೃಪಾಯಾ ಶರಣಾಗತಮುದ್ಧರಮಾ
ಮನುಶಾಧ್ಯುಪಸನ್ನಮನನ್ಯಗತಿಮ್॥

ಗುರು ಭಗವಂತನೇ, ಹುಟ್ಟು ಸಾವುಗಳೆಂಬ ಈ ಸಂಸಾರ ಸಮುದ್ರದಲ್ಲಿ ಬಿದ್ದು, ಸುಖ ದುಃಖಗಳೆಂಬ ಬೆಂಕಿಯಲ್ಲಿ ಬೇಯುತ್ತಿದ್ದೇನೆ. ನೀನೇ ನನಗೆ ಅನನ್ಯ ಗತಿಯೆಂದು ಶರಣು ಬಂದಿದ್ದೇನೆ, ಕೃಪೆಯಿಂದ ನನಗೆ ಉಪದೇಶ ಮಾಡಿ ನನ್ನನ್ನು ಉದ್ಧಾರ ಮಾಡು.

ಗಿರಿಯ ಪ್ರಾರ್ಥನೆ ಆಚಾರ್ಯ ಹೃದಯವನ್ನು ಮುಟ್ಟಿತು. ಅವರು ಆತನ ಶಿರಸ್ಸನ್ನು ಮೃದುವಾಗಿ ನೇವರಿಸಿ ನಾಲ್ಕು ಶ್ಲೋಕಗಳಲ್ಲಿ ಆತನಿಗೆ ಮರಮ ತತ್ವವನ್ನು ಉಪದೇಶಿಸಿದರು!

"ವಿಷಮವಾಗಿರುವ ಇಂದ್ರಿಯ ವಿಷಯಗಳಲ್ಲಿ ಇರುವ ನಿನ್ನ ಆಸಕ್ತಿಯನ್ನು ಬಿಡು. ಶರೀರವೇ ನಾನು ಎಂದು ತಿಳಿದುಕೊಂಡು ನಡೆಸುತ್ತಿರುವ ವ್ಯವಹಾರವನ್ನು ಬಿಡು. ಯಾವಾಗಲೂ ಪರಬ್ರಹ್ಮದಲ್ಲಿಯೇ ಮನಸ್ಸನ್ನಿಡು. ಆತ್ಮನಲ್ಲಿ ಮನಸ್ಸನ್ನು ನಿಲ್ಲಿಸಿ, ಮೋಹಗೊಳಿಸುತ್ತಿರುವ ಈ ಸಂಸಾರದ ಭ್ರಮೆಯನ್ನು ಗೆಲ್ಲು.

"ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಕೋಶಗಳಲ್ಲಿ ಇಟ್ಟಿರುವ ನಾನು, ನನ್ನದು ಎಂಬ ಬುದ್ಧಿಯನ್ನು ತೊಡೆದು ಹಾಕು. ಅನಂತವೂ, ಅಜವೂ, ಸಾಕ್ಷಿ ರೂಪವೂ ಆಗಿ ಸದಾ ಕಾಲವೂ ನಿನ್ನ ಹೃದಯದಲ್ಲಿ ಬೆಳಗುತ್ತಿರುವ ಪರತತ್ತ್ವವೇ 'ನಾನು' ಎಂಬುದನ್ನು ತಿಳಿ.

"ಸೂರ್ಯನು ಒಬ್ಬನೇ ಆಗಿದ್ದು, ಅವಿಕಾರಿಯಾಗಿದ್ದರೂ, ನೀರು ತುಂಬಿದ ಅನೇಕ ಗಡಿಗೆಗಳಲ್ಲಿ ಅನೇಕವಾಗಿ ತೋರುವಂತೆ, ಆಕಾಶವು ಒಂದೇ ಆಗಿದ್ದರೂ ಘಟಗಳ(ಮಡಕೆಗಳ) ಉಪಾಧಿಯಿಂದ ಅನೇಕವಾಗಿ ತೋರುವಂತೆ, ಯಾವಗಲೂ ಅವಿಕಾರಿಯಾಗಿ ಒಂದೇ ಆಗಿರುವ ಬ್ರಹ್ಮವು, ನಿನ್ನ ಬುದ್ಧಿಯ ಉಪಾಧಿಯಿಂದ, ಅನೇಕವಾಗಿ ತೋರುತ್ತಿದೆಯೆಂದು ತಿಳಿದುಕೋ.

"ಸೂರ್ಯ ಪ್ರಕಾಶದ ಕಾರಣದಿಂದ ಈ ಪ್ರಪಂಚವೆಲ್ಲವೂ ಕಣ್ಣಿಗೆ ಕಾಣುವಂತೆ ನಿನ್ನ ಆ 'ಸತ್' ತತ್ತ್ವವೊಂದೇ ಇದ್ದು, ಅದೇ ನೀನಾಗಿದ್ದೀಯೆ"

ಎಂದು ಆಚಾರ್ಯರು ಗಿರಿಗೂ ಗಿರಿಯ ವ್ಯಾಜದಿಂದ ಇತರರಿಗೂ ಸರಳವಾಗಿ ಉಪದೇಶವನ್ನು ನೀಡಿದರು. ಗಿರಿಯ ಕಣ್ಣುಗಳಲ್ಲಿ ಧಾರಕಾರವಾಗಿ ಹರ್ಷದ ನೀರು ಹರಿಯತ್ತಿತ್ತು. ಆತನೆದ್ದು ಸಾಷ್ಟಾಂಗ ವಂದನೆ ಮಾಡಿ ತನ್ನ ಕೈಗಳೆರಡರಿಂದಲೂ ಆಚಾರ್ಯರ ಪಾದವನ್ನು ಹಿಡಿದು, 'ಗುರುವೇ, ಶರಣಾಗತನಾಗಿದ್ದೇನೆ. ಮಾಮುದ್ಧರ ಉದ್ಧರಿಸಿ, ನನ್ನನ್ನು ಕಾಪಾಡಿ' ಎಂದು ಬೇಡಿಕೊಂಡನು. ಸನಂದನಾದಿ ಶಿಷ್ಯರಿಗೆ ಈ ಗಿರಿ ಎಷ್ಟು ಸುಸಂಸ್ಕೃತ, ಎಷ್ಟು ಶ್ರೇಷ್ಠ ಜೀವಿ ಎಂಬುದು ಅರ್ಥವಾಯಿತು. ಅವರು ತಮ್ಮ ನಡವಳಿಕೆಗೆ ತುಂಬಾ ಪರಿತಾಪಪಟ್ಟರು. ಗಿರಿಯನ್ನು, ಗುರುವನ್ನು ಕ್ಷಮೆ ಕೋರಿದರು.

ಗಿರಿಯು ಹಾಡಿದ ಸ್ತೋತ್ರ ತೋಟಕ ವೃತ್ತದಲ್ಲಿತ್ತು. ಎಲ್ಲರ ಬಾಯಿಲ್ಲಿಯೂ ಆ ಸ್ತೋತ್ರ ಗುಂಯ್ ಗುಡುತ್ತಿತ್ತು. ಆಶ್ರಮದಲ್ಲೆಲ್ಲಾ ಆ ಸ್ತೋತ್ರ ಪ್ರತಿಧ್ವನಿಸುತ್ತಿತ್ತು.

ಒಂದೆರಡು ದಿನಗಳ ನಂತರ ಶ್ರೀ ಶಂಕರಾಚಾರ್ಯರು ಶೃಂಗಗಿರಿಯ ಆನಂದಗಿರಿ ಶರ್ಮನಿಗೆ ಸಂನ್ಯಾಸವನ್ನಿತ್ತು 'ಶೀ ತೋಟಕಾಚಾರ್ಯ' ಎಂದು ನಾಮಕರಣ ಮಾಡಿದರು. ಶ್ರೀ ತೋಟಕಾಚಾರ್ಯರು ಯುಗಾವತರಿಯಾದ ಶ್ರೀ ಶಂಕರರಿಗೆ ಕರ್ನಾಟಕವು ಇತ್ತ ಎರಡನೆಯ ಕಾಣಿಕೆ! ತೋಟಕರೂ ಸಹ ಹಸ್ತಾಮಲಕರಂತೆಯೇ ಸದಾ ಆತ್ಮರತರು. ಶ್ರೀ ಶಂಕರಾಚಾರ್ಯರು ಬೋಧಿಸುತ್ತಿದ್ದ ಅದ್ವೈತ ತತ್ತ್ವಕ್ಕೆ ಪ್ರತ್ಯಕ್ಷ ನಿದರ್ಶನರಾಗಿದ್ದವರು. ತೋಟಕರು ತಾವು ಸಂನ್ಯಾಸಿಯಾದ ನಂತರವೂ ಗುರುಗಳ ಸೇವೆಯನ್ನು ಬೇರೆ ಯಾರಿಗೂ ವಹಿಸದೆ ತಾವೇ ಮಾಡುತ್ತಿದ್ದರು. ಗುರು ಭಕ್ತಿ ಮತ್ತು ಗುರು ಸೇವೆಯೇ ಅವರ ಭಕ್ತಿ ಯೋಗ, ಕರ್ಮಯೋಗವಾಗಿದ್ದವು.

ಶ್ರೀ ಶಂಕರಾಚಾರ್ಯರ ಸನ್ನಿಧಿಯಲ್ಲಿ, ಶೃಂಗಗಿರಿಯಲ್ಲಿ ಗ್ರಂಥ ರಚನೆ ಸಾಗುತ್ತಿತ್ತು, ಅಧ್ಯಯನ ಮುಂದುವರಿಯುತ್ತಿತ್ತು. ಭಾಷ್ಯ ಗ್ರಂಥಗಳ ಪ್ರವಚನವೂ ಸಾಗುತ್ತಿತ್ತು.

---

ಕಗ್ಗದ ಬೆಳಕಿನಲ್ಲಿ

# ಈ ನಶ್ವರ ದೇಹದಿಂದ ಗುರಿಯನ್ನು ಸಾಧಿಸುವುದು ಹೇಗೆ?

ಲೇ : ವಿ॥ ಜಿ. ಎಸ್. ನಟೇಶ.

**ಕಲ್ಮಷದ ವಲ್ಮೀಕವೆಂದೊಡಲಜರೆಯದಿರು**
**ಬ್ರಹ್ಮಪುರಿಯೆಂದದನು ಋಷಿಗಳೊರೆದಿಹರುI**
**ಹಮ್ಮುಳ್ಳ ಹಯವ ಕಾಪಿಟ್ಟು ಕಡಿವಣ ತೊಡಿಸೆ**
**ನಮ್ಮ ಗುರಿಗೈದಿಪುವು–ಮಂಕುತಿಮ್ಮII**

**'ಮಲಿನವಾದ ಹುತ್ತ'ವೆಂದು ಈ ಶರೀರವನ್ನು ನಿಂದಿಸಬೇಡ. ಋಷಿಗಳು ಅದನ್ನೇ ಬ್ರಹ್ಮಪುರಿಯೆಂದು ಹೇಳಿದ್ದಾರೆ. ಅಹಂಕಾರದಿಂದ ಕೂಡಿದ ಕುದುರೆಗಳನ್ನು ನಿಯಂತ್ರಿಸಿ ಕಡಿವಾಣವನ್ನು ತೊಡಿಸಿದರೆ ಅವು ನಮ್ಮನ್ನು ಗುರಿಮುಟ್ಟಿಸುತ್ತವೆ.**

'ಶರೀರಮಾದ್ಯಂ ಖಲು ಧರ್ಮ ಸಾಧನಂ' ಯಾವುದೇ ಸತ್ಕಾರ್ಯಗಳ ಸಾಧನೆಗೆ ಈ ನಮ್ಮ ಶರೀರವೇ ಮೊದಲ ಸಾಧನ. ಈ ಶರೀರವಿಲ್ಲದ್ದರೆ ನಾವೇನು ಮಾಡುವಂತಿಲ್ಲ. ಆದ್ದರಿಂದ ಈ ಶರೀರವನ್ನು ಕೊಳಕು ಹುತ್ತವೆಂದು ತಾತ್ಸಾರ ಮಾಡಬೇಡ. ನಮ್ಮ ಪುರಾತನ ಋಷಿಗಳು ಇದನ್ನು ಬ್ರಹ್ಮಪುರಿಯೆಂದು ಕರೆದಿದ್ದಾರೆ. ಇದೊಂದು ಪುಟ್ಟ ವಿಶ್ವ. ಹೊರಗಿರುವ ಅದ್ಭುತಗಳೆಲ್ಲವೂ ಈ ಪುಟ್ಟ ವಿಶ್ವದಲ್ಲಿವೆ. ಈ ದೇಹದ ಸಹಾಯದಿಂದಲೇ ನಮ್ಮ ಗುರಿಯನ್ನು ಸಾದಿಸಬೇಕು. ಅಹಮಿಕೆಯಿಂದ ಮೆರೆಯುತ್ತಿರುವ ಇಂದ್ರಿಯಗಳ ರೂಪದ ಕುದುರೆಗಳನ್ನು ನಿಯಂತ್ರಿಸಿ ಕಡಿವಾಣವನ್ನು ತೊಡಿಸಿ, ಸವಾರಿ ಮುಂದುವರಿಸಿದರೆ ಅವು ನಮ್ಮ ಗುರಿಯನ್ನು ಸಾಧಿಸಿಕೊಡುತ್ತವೆ. ಈ ದೇಹದಲ್ಲಿ ಇಂದ್ರಿಯಗಳ ಕಾರುಬಾರೇ ಹೆಚ್ಚು. ಅವುಗಳ ದರ್ಬಾರಿಗೆ ನಿಯಂತ್ರಣ ಹಾಕಿದರೆ ಅದೇ ಇಂದ್ರಿಯಗಳು ನಮಗೆ ಸಹಕಾರಿಯಾಗಬಲ್ಲವು. ಚಿಕ್ಕ ಹಣತೆಯನ್ನು ಆರಿಸುವ ಗಾಳಿ, ದೊಡ್ಡದಾಗಿ ಉರಿಯುವ ಅಗ್ನಿಗೆ ಪ್ರೋತ್ಸಾಹವನ್ನು ನೀಡುವುದಲ್ಲವೇ?.

**ದೇಹಾತ್ಮಗಳ ಸ್ನೇಹ ಹೇಗಿರಬೇಕು?**

**ದೇಹವೆಂಬುದು ಕುದುರೆಯಾತ್ಮನದರಾರೋಹಿ**
**ವಾಹನವನುಪವಾಸವಿರಿಸೆ ನಡೆದೀತೆ?I**



ಕ್ರಿ.ಪೂ.155.ಗ್ರೀಕ್ ಮಿನಾಂಡರ್ ನ ಭಾರತದ ಮೇಲಿನ ಧಾಳಿ.

**ರೋಹಿ ಜಾಗ್ರತೆ ತಪ್ಪೆ ಯಾತ್ರ ಸುಖ ಸಾಗಿತೆ?**
**ಸ್ನೇಹವೆರಡಕಮುಚಿತ–ಮಂಕುತಿಮ್ಮII**

**ಈ ಶರೀರ ಎಂಬುದೊಂದು ಕುದುರೆ. ಆತ್ಮ ಅದರ ಸವಾರ. ವಾಹನವನ್ನು ಉಪವಾಸವಿರಿಸಿದರೆ ಅದು ಹೇಗೆ ನಡೆದೀತು? ಅದರ ಸವಾರ ಎಚ್ಚರ ತಪ್ಪಿದರೆ ಯಾತ್ರೆಯ ಸುಖ ಸಿಗದು. ಎರಡಕ್ಕೂ ಸ್ನೇಹವಿರುವುದು ಯೋಗ್ಯ.**

' ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವತುI
ಬುದ್ಧಿಂತು ಸಾರಥಿಂವಿದ್ಧಿ ಮನ: ಪ್ರಗ್ರಹಮೇವಚII
ಇಂದ್ರಿಯಾಣಿ ಹಯಾನಾಹು:'

'ಕಠೋಪನಿಷತ್ತಿನ ಈ ವಾಕ್ಯ ದೇಹಾತ್ಮಗಳ ಸಂಬಂದದ ಕುರಿತು ಹೇಳುತ್ತದೆ. ನಮ್ಮ ಈ ಶರೀರ ರಥವಿದ್ದಂತೆ. ಆತ್ಮ ರಥಿಕ. ಬುದ್ಧಿ ಸಾರಥಿ, ಮನಸ್ಸು ಕಡಿವಾಣ ಹಾಗೂ ಇಂದ್ರಿಯಗಳು ಕುದುರೆಗಳು. ಇದನ್ನೇ ಡಿ.ವಿ.ಜಿ. ಬೇರೆ ರೀತಿಯಲ್ಲಿ ಹೇಳುತ್ತಾರೆ. ನಮ್ಮ ದೇಹ ಕುದುರೆ. ಆ ಕುದುರೆಯನ್ನು ಏರುವವನು ಆತ್ಮ. ವಾಹನವಾದ ಕುರುರೆಯನ್ನು ಉಪವಾಸವಿರಿಸಿದರೆ ಅದು ನಡೆಯಲು ಶಕ್ಯವೇ? ಸವಾರಿ ಮಾಡುವವನು ಎಚ್ಚರ ತಪ್ಪಿದರೆ ಯಾತ್ರೆಯ ಸುಖ ಸಿಕ್ಕೀತೆ? ಆದ್ದರಿಂದ ಕುದುರೆಗೂ ಅದರ ಸವಾರನಿಗೂ ಸರಿಯಾದ ಹೊಂದಾಣಿಕೆಯಿದ್ದರೆ ಮಾತ್ರ ಪ್ರಯಾಣ ಸುಖಕರವಾಗಿ ಸಾಗುತ್ತದೆ. ಆತ್ಮ ದೇಹಗಳಸ್ನೇಹ ಸದಾ ಇರಬೇಕು. ದೇಹವನ್ನು ನಾವೆಂದೂ ತಾತ್ಸಾರ ಮಾಡಬಾರದು. ದೇಹವಿದ್ದರೆ ಮಾತ್ರ ಮುಂದಿನ ಎಲ್ಲ ಸಾಧನೆ.

ಜಗತ್ತು ಎಷ್ಟರ ಮಟ್ಟಿಗೆ ಸತ್ಯ?

**ಹುರಿಯುರುಳೆ ಹಾವಲ್ಲವಾದೊಡಂ ಮಬ್ಬಿನಲಿ**
**ಹರಿದಾಡಿದಂತಾಗೆ ನೋಳ್ಪವಂ ಬೆದರಿ I**
**ಸುರಿಸುವಾಬೆವರುದಿಟ; ಜಗವುಮಂತುಟೆ ದಿಟವು**
**ಜರೆಯದಿರು ತೋರ್ಕೆಗಳ–ಮಂಕುತಿಮ್ಮII**

**ಹಗ್ಗ ಹಾವಲ್ಲವಾದರೂ ಮುಸುಕಿನಲ್ಲಿ ಅದು ಹರಿದಾಡಿದಂತೆ ಕಂಡರೆ ನೋಡುವವನು ಹೆದರಿ ಸುರಿಸುವ ಬೆವರು ನಿಜವೇ ಆಗಿರುತ್ತದೆ. ಈ ಜಗತ್ತು ಅಷ್ಟರ ಮಟ್ಟಿಗೆ ಸತ್ಯ. ಯಾವುದು ಕಾಣಿಸುತ್ತದೆಯೋ ಅದನ್ನು ಸುಳ್ಳೆಂದು ಜರೆಯಬೇಡ.**

'ಜಗನ್ಮಿಥ್ಯಾ ಬ್ರಹ್ಮ ಸತ್ಯಂ' ಎಂದು ಅದ್ವೈತಮತ ಸಾರುತ್ತದೆ. ಆದಿ ಶಂಕರಚಾರ್ಯರ ಪ್ರಕಾರ ಜಗತ್ತು ಸತ್ಯದಂತೆ ಕಾಣುವ ಸತ್ಯವಲ್ಲದ ವಸ್ತು. ಇದಕ್ಕೆ ಆಚಾರ್ಯರು ಅಧ್ಯಾಸ ಎಂದು ಕರೆದರು. ಹಿರಿಯನ್ನು ರಾತ್ರಿಯ ಹೊತ್ತು ಕಂಡು ಅದನ್ನು ಹಾವೆಂದು ಭ್ರಮಿಸುವುದು ಅಧ್ಯಾಸ. ನಿಜವಾಗಿಯೂ ಅದು ಹಾವಾಗಿರುವುದಿಲ್ಲ ಜಗತ್ತೂ ಕೂಡ ಹಾಗೆಯೇ. ಆದರೆ ಡಿ.ವಿ.ಜಿ. ಇನ್ನೂ ಹೆಚ್ಚಿನ ವಿಚಾರವನ್ನು ಇದರಲ್ಲಿ ತರುತ್ತಾರೆ. ಜಗತ್ತನ್ನು ಸಂಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ಹಗ್ಗ ಹಾವಲ್ಲದಿದ್ದರೂ ಮಬ್ಬಿನಲ್ಲಿ ಹರಿದಾಡಿದಂತಾದಾಗ ಅದನ್ನು ಕಂಡ ವ್ಯಕ್ತಿ ಆ ಕ್ಷಣ ಹೆದರುವುದು ಸತ್ಯ. ಆ ಹೆದರಿಕೆಯಿಂದಾಗಿ ಅವನು ಬೆವರುವುದು ದಿಟ. ಜಗತ್ತು ಅಷ್ಟರ ಮಟ್ಟಿಗೆ ಸತ್ಯ. ಆದ್ದರಿಂದ ಏನು ನಮಗೆ ಕಾಣುತ್ತದೆಯೋ ಅದೆಲ್ಲವನ್ನೂ ಅಸತ್ಯವೆಂದು ತಳ್ಳಿಹಾಕಬೇಡ. ಅಸತ್ತಿನಿಂದಲೇ ಸತ್ತನ್ನು ಕಂಡುಕೊಳ್ಳುವ ಸಾರ್ಥಕ ಪ್ರಯತ್ನ ನಮ್ಮದಾಗಬೇಕು. 'ಜ್ಞಾನದಿಂದ ಅಜ್ಞಾನದ ಕೇಡು ನೋಡಯ್ಯಾ'

**ಯಾವುದು ನಮ್ಮ ಜೀವಕ್ಕೆ ಮುಳ್ಳು?**

**ಸುಳ್ಳಲ್ಲ ತಿರುಕನು ಕಂಡ ಸವಿಗನಸು**
**ಚೆಲ್ಲಿತಲ್ಲವೆ ಹಿಟ್ಟು ಘಟವನವನೊದೆಯೆ?I**
**ಜಳ್ಳು ಸುಖದು:ಖವಿರಬಹುದಾದೊಡದರ ಮೊನೆ**
**ಮುಳ್ಳುಹುದು ಜೀವಕ್ಕೆ–ಮಂಕುತಿಮ್ಮII**

**ತಿರುಕ ಕಂಡ ಸವಿಯಾದ ಕನಸು ಸುಳ್ಳಲ್ಲ. ಅವನು ಕನಸಿನಲ್ಲಿ ಮಡಕೆಯನ್ನು ಒದ್ದಾಗ ಹಿಟ್ಟು ಚೆಲ್ಲಿರುವುದು ಸತ್ಯವಲ್ಲವೆ? ಸುಖ–ದು:ಖಗಳು ಜಳ್ಳಾಗಿದ್ದರೂ ಅದರ ತುದಿ ಜೀವಕ್ಕೆ ಮುಳ್ಳಾಗುತ್ತದೆ.**

ಸಾಧುವಲ್ಲದ, ಸಾಧ್ಯವಾಗದ ವಿಚಾರಗಳು ನಮ್ಮೆದುರಿಗೆ ಬಂದಾಗ ಅದೊಂದು'ತಿರುಕನ ಕನಸು' ಎಂದು ನಾವು ತಳ್ಳಿ ಹಾಕಿಬಿಡುವುದುಂಟು. ಗುಂಡಪ್ಪನವರು ಅದನ್ನು ಸಂಪೂರ್ಣವಾಗಿ ತಳ್ಳಿ ಹಾಕಿಬಿಡುವಂತಿಲ್ಲ ಎಂದು ಈ ಪದ್ಯದ ಮೂಲಕ ಸ್ಪಷ್ಟಪಡಿಸುತ್ತಾರೆ. ತಿರುಕ ಕನಸು ಕಾಣುತ್ತಿದ್ದ ನಿಜ. ಆದರೆ ಆ ಕನಸಿನಲ್ಲಿ ಅವನು ಹಿಟ್ಟಿನ ಗಡಿಗೆಯನ್ನು ಒದ್ದಾಗ ಹಿಟ್ಟು ಚೆಲ್ಲಿರುವುದು ಸತ್ಯವಲ್ಲವೆ? ಈ ಜಗತ್ತಿನಲ್ಲಿ ಸುಖ, ದು:ಖ ಇವೆಲ್ಲ ಸತ್ತ್ವಹೀನವಾದರೂ ಅವುಗಳ ಸ್ಪರ್ಶ ನಮಗೆ ಮುಳ್ಳಾಗಿ ಚುಚ್ಚುವುದಂತೂ ಸತ್ಯ. ಸುಖದುಖ:ಗಳು ನಮ್ಮ ಜೀವನದ ಮೇಲೆ ಅಲ್ಪಸ್ವಲ್ಪ ಪರಿಣಾಮವನ್ನು ಖಂಡಿತವಾಗಿಯೂ ಬೀರುತ್ತವೆ. ಅವುಗಳನ್ನು ಪೂರ್ತಿಯಾಗಿ ಜಳ್ಳು ಎಂದು ತೀರ್ಮಾನ ಮಾಡಲಾಗುವುದಿಲ್ಲ. ತಾವರೆಯ ಎಲೆಯ ಮೇಲೆ ನೀರು ಅಂಟಿಕೊಳ್ಳುವುದಿಲ್ಲ ನಿಜ. ಆದರೆ ನೀರು ಅದರ ಮೇಲಿರುವುದು ಸತ್ಯವಲ್ಲವೇ? ಆದ್ದರಿಂದ ಈ ಜಗತ್ತನ್ನು ಎಷ್ಟು ಬೇಕೋ ಅಷ್ಟು ಉಪಯೋಗಿಸಿಕೊಂಡು ಬದುಕುವುದನ್ನು ನಾವು ಕಲಿಯಬೇಕು. ಅದಕ್ಕೇ ಅಂಟಿಕೊಳ್ಳಬಾರದು ಅಷ್ಟೆ.

ವಚನ ಭಾಗವತ

# ಸತೀ ಸುಕನ್ಯೆ

–ಲೇ॥ ತ.ಸು.ಶಾಮರಾಯ

ವೈವಸ್ವತ ಮನುವಿನ ಪೀಳಿಗೆಯಲ್ಲಿ ಹುಟ್ಟಿದ ಒಬ್ಬೊಬ್ಬನೂ ಮಹಾಪುರುಷನೆ. ಆತನು ಆ ಮಕ್ಕಳಲ್ಲಿ ಒಬ್ಬನಾದ ಶರ್ಯಾತಿಯು ಕ್ಷತ್ರಿಯನಾದರೂ ಬ್ರಹ್ಮಜ್ಞಾನಿಯಾಗಿದ್ದನು. ಒಮ್ಮೆ ಆತನು ಅಂಗಿರಸಮಹಾಮುನಿಯ ಯಾಗದಲ್ಲಿ ಎರಡನೆಯ ದಿವಸದ ಕರ್ಮಗಳನ್ನೆಲ್ಲ ಹೀಗೆಯೇ ಮಾಡಬೇಕೆಂದು ಪುರೋಹಿತರಿಗೇ ಉಪದೇಶಿಸಿದ್ದನಂತೆ! ಈ ಪುಣ್ಯಪುರುಷನಿಗೆ ಸುಕನ್ಯೆ ಎಂಬ ದಿವ್ಯ ಸುಂದರಿಯಾದ ಮಗಳೊಬ್ಬಳಿದ್ದಳು. ಆಕೆಯಲ್ಲಿ ಪಂಚಪ್ರಾಣ, ಶರ್ಯಾತಿ ರಾಜನಿಗೆ . ಒಂದು ದಿನ ಆತನು ಪರಿವಾರದೊಡನೆ ವನವಿಹಾರಕ್ಕೆ ಹೊರಟು, ಈ ಮುದ್ದು ಮಗಳನ್ನೂ ಜೊತೆಯಲ್ಲಿ ಕರೆದೊಯ್ದು ಅವರೆಲ್ಲರೂ ಚ್ಯವನಋಷಿಯ ಆಶ್ರಮಕ್ಕೆ ಹೋದರು. ಅಲ್ಲಿ ಸುಕನ್ಯೆ ತನ್ನ ಸಖಿಯರೊಡನೆ ವನದ ಸೊಬಗನ್ನು ಸವಿಯುತ್ತಾ ವಿಹರಿಸುತ್ತಿರಲು, ದೊಡ್ಡದೊಂದು ಹುತ್ತ ಅವಳ ಕಣ್ಣಿಗೆ ಬಿತ್ತು. ಅವಳು ಅದರ ಹತ್ತಿರಕ್ಕೆ ಹೋಗಿ, ಅದರಲ್ಲಿದ್ದ ರಂಧ್ರದಲ್ಲಿ ಇಣಿಕಿ ನೋಡಿದಳು. ಒಳಗೆ ವಜ್ರದಂತೆ ನಿಗಿನಿಗಿ ಹೊಳೆಯುತ್ತಿರುವ ಎರಡು ವಸ್ತುಗಳು ಕಾಣಿಸಿದವು. ಹುಡುಗುತನದ ಕುತೂಹಲದಿಂದ ಅವಳು ಒಂದು ಮುಳ್ಳನ್ನು ತೆಗೆದುಕೊಂಡು ಆ ವಸ್ತುವಿಗೆ ಚುಚ್ಚಿದಳು. ಒಡನೆಯೆ ಅವುಗಳಿಂದ ಧಾರೆಧಾರೆಯಾಗಿ ನೆತ್ತರು ಹರಿಯಲು ಪ್ರಾರಂಭವಾಯಿತು. ಇದನ್ನು ಕಂಡು ಹುಡುಗಿಗೆ ತುಂಬಾ ಭಯವಾಯಿತು. ಅವಳು ಬಿಡಾರಕ್ಕೆ ಓಡಿದಳು.

ಅತ್ತ ಹುತ್ತದಿಂದ ನೆತ್ತರು ಹರಿಯಲು ಪ್ರಾರಂಭವಾಗುತ್ತಲೆ, ಇತ್ತ ಅರಸನ ಪರಿವಾರದವರಿಗೆಲ್ಲಾ ಮಲಮೂತ್ರಗಳು ಕಟ್ಟಿಹೋದವು. ಅವರೆಲ್ಲ ಸಂಕಟದಿಂದ ಲಿಬಿಲಿಬಿ ಒದ್ದಾಡಲು ಪ್ರಾರಂಭಿಸಿದರು. ಇದನ್ನು ಕಂಡು ರಾಜನಿಗೆ ಆಶ್ಚರ್ಯವಾಯಿತು. ಇದ್ದಕ್ಕಿದ್ದಂತೆಯೆ ಹೀಗಾಗಬೇಕಾಗಿದ್ದರೆ ಆಶ್ರಮದಲ್ಲಿದ್ದ ಚ್ಯವನಮಹರ್ಷಿಗೆ ಏನೋ ಅಪಚಾರ ನಡೆದಿರಬೇಕೆಂದು ಭಯ ಹುಟ್ಟಿತ್ತು. ಆತನು ತನ್ನ ಪರಿವಾರದವರನ್ನೆಲ್ಲ ಕರೆದು ವಿಚಾರಿಸಿದನು. ಯಾರೂ ಯಾವ ತಪ್ಪನ್ನೂ ಮಾಡಿದಂತೆ ಕಂಡುಬರಲಿಲ್ಲ. ಆ ವೇಳೆಗೆ ಅಲ್ಲಿಗೆ ಬಂದ ಸುಕನ್ಯೆ ಭಯದಿಂದ ಗಡಗಡ ನಡುಗುತ್ತಾ ನಡೆದುದನ್ನು ನಡೆದಂತೆ ಆತನಿಗೆ ತಿಳಿಸಿದಳು. ಒಡನೆಯೆ ರಾಜನು ಮಗಳೊಡನೆ ಹುತ್ತದ ಬಳಿಗೆ ಹೋದನು. ಅಲ್ಲಿ ಆಗಿದ್ದ ಅನರ್ಥವನ್ನು ಕಂಡು ರಾಜನು ನಡುಗಿಹೋದನು. ಆ ಹುತ್ತದಲ್ಲಿ ಸ್ವತಃ ಚ್ಯವನಋಷಿಯೇ ಕುಳಿತು ತಪಸ್ಸು ಮಾಡುತ್ತಿದ್ದಾನೆ ! ಸುಕನ್ಯೆ ಮುಳ್ಳಿನಿಂದ ಚುಚ್ಚಿರುವುದು ಆತನ ಕಣ್ಣಗಳನ್ನು ! ಶರ್ಯಾತಿಯು ಆ ಮಹಾಮುನಿಯ ಮುಂದೆ ಅಡ್ಡ ಬಿದ್ದು, ತನ್ನ ಮಗಳ ತಪ್ಪನ್ನು ಕ್ಷಮಿಸುವಂತೆ ಬೇಡಿಕೊಂಡನು. ಕ್ಷಮಿಸುವುದೇನೋ ಸರಿ, ಕಣ್ಣಿಲ್ಲದ ಆ ಋಷಿಯನ್ನು ಮುಂದೆ ನೋಡಿಕೊಳ್ಳುವವರು ಯಾರು ? ದಯಾಮಯನಾದ ರಾಜನು ಆ ಕಾರ್ಯಕ್ಕೆ ತನ್ನ ಕಣ್ಮಣಿಯಾದ ಮಗಳನ್ನೇ ನೇಮಿಸಿದನು. ಮುಪ್ಪಿನ ಮುದುಕನಾದ ಚ್ಯವನಋಷಿಗೆ ತನ್ನ ಮಗಳನ್ನು ಕೊಟ್ಟು ವಿವಾಹಮಾಡಿ, ಆಕೆಯನ್ನು ಆತನ ಸೇವೆಯಲ್ಲಿ ನಿಲ್ಲಿಸಿದನು. ಆಗ ಪರಿವಾರಕ್ಕೆ ಒದಗಿದ್ದ ಸಂಕಟ ನಿವಾರಣೆಯಾಯಿತು. ರಾಜನು ಅಳಿಯನಿಂದಲೂ ಮಗಳಿಂದಲೂ ಬೀಳ್ಕೊಂಡು ರಾಜಧಾನಿಗೆ ಹಿಂದಿರುಗಿದನು.

ಸುಕನ್ಯೆ ತನಗೆ ಅನ್ಯಾಯವಾಯಿತೆಂದು ಮರುಗಲಿಲ್ಲ. ಪಾಲಿಗೆ ಬಂದುದು ಪಂಚಾಮೃತವೆಂದುಕೊಂಡು ಮುದಿಗಂಡನ ಸೇವೆಯಲ್ಲಿ ತತ್ಪರಳಾದಳು. ಮುನಿಗಳಿಗೆ ಮೂಗಿನ ಮೇಲೆಯೆ ಕೋಪ. ಇದನ್ನರಿತ ಸುಕನ್ಯೆ ಮೈಯಲ್ಲ ಕಣ್ಣಾಗಿ ನಡೆದುಕೊಳ್ಳುತ್ತ ಆತನನ್ನು ಆನಂದಪಡಿಸುತ್ತಿದ್ದಳು. ಹೀಗೆ ಕೆಲವು ಕಾಲ ಕಳೆಯಲು ಒಂದು ದಿನ ದೇವವೈದ್ಯರಾದ ಅಶ್ವಿನೀದೇವತೆಗಳು ಚ್ಯವನಮಹರ್ಷಿಯ ದರ್ಶನಕ್ಕಾಗಿ ಆತನ ಬಳಿಗೆ ಬಂದರು. ಋಷಿಯು ಆ ಅತಿಥಿಗಳನ್ನು ಅತ್ಯಂತ ಆದರದಿಂದ ಕಂಡು ಸತ್ಕರಿಸಿದನು. ಇದರಿಂದ ಅವರು ಸಂತೋಷಗೊಂಡಿರುವಾಗ ಋಷಿಯು 'ಅಯ್ಯಾ ದೇವತೆಗಳೆ, ಮುದುಕನಾದ ನನ್ನನ್ನು ಯುವಕನಾಗಿ ಮಾಡಬಾರದೆ ? ನನಗೆ ಈಗತಾನೆ ಮದುವೆಯಾಗಿದೆ ; ಹುಡುಗಿಯಾದ ಆ ಹೆಂಡತಿಯ ಕಣ್ಣಿಗೆ ಸಂತೋಷವಾಗುವಂತಹ ರೂಪವನ್ನು ನೀವು ನನಗೆ ದಯಪಾಲಿಸುವಿರಾದರೆ, ಇನ್ನು ಮುಂದೆ ಯಾಗಗಳಲ್ಲೆಲ್ಲ ನಿಮಗೆ ಸೋಮಭಾಗವನ್ನು ಕೊಡಿಸುತ್ತೇನೆ' ಎಂದ ಸೋಮಭಾಗದ ಹೆಸರು ಕೇಳಿ ಅಶ್ವಿನೀದೇವತೆಗಳ ಬಾಯಲ್ಲಿ ನೀರೂರಿತು. ಪಾಪ, ದೇವವೈದ್ಯರಾದರೂ ಸೋಮವನ್ನು ಕುಡಿಯುವ ಭಾಗ್ಯ ಆವರಿಗೆ ದೊರೆತಿರಲಿಲ್ಲ. ಅವರು ಚ್ಯವನಮಹರ್ಷಿಯ ಮಾತಿಗೆ ತಕ್ಷಣವೇ ಒಪ್ಪಿಕೊಂಡರು. ಅವರು ಋಷಿಯನ್ನು ಕೈಹಿಡಿದು ಕರೆತಂದು ಒಂದು ಸಿದ್ಧರಸದ ಮಡುವಿನಲ್ಲಿ ಆತನೊಡನೆ ಹಾರಿಕೊಂಡರು. ಮರು ನಿಮಿಷದಲ್ಲಿ ಮೂರು ದಿವ್ಯ ಸುಂದರ ವಿಗ್ರಹಗಳು ಅದರಿಂದ ಹೊರಗೆ ಬಂದವು.

ಸುಕನ್ಯೆಗೆ ಆ ಮೂವರಲ್ಲಿ ತನ್ನ ಗಂಡ ಯಾರೆಂದು ಹೇಗೆ ಗೊತ್ತಾಗಬೇಕು ? ಮೂವರ ರೂಪಸಂಪತ್ತು ಒಂದೇ ಬಗೆಯಾಗಿದೆ. ಮೂವರೂ ಧರಿಸಿರುವ ವಸ್ತ್ರಾಭರಣಗಳೂ ಒಂದೇ ರೀತಿಯಾಗಿವೆ. ಮೂವರ ಕೊರಳಿನಲ್ಲಿಯೂ ಒಂದೇ ತರಹದ ಹೂಮಾಲೆಗಳು. ನರೆತ ಕೂದಲು, ಸುಕ್ಕುಬಿದ್ದ ತೊಗಲು, ಉಬ್ಬಿದ ನರಗಳಿದ್ದ ವಿಕಾರರೂಪಿನ ತನ್ನ ಗಂಡ ಈ ಸಮಾನ ರೂಪಿನ ಸುಂದರ ಯುವಕರಲ್ಲಿ ಯಾರೆಂದು ಹೇಗೆ ಕಂಡು ಹಿಡಿಯುವುದು? ಸುಕನ್ಯೆ ಕ್ಷಣಕಾಲ ಮುಂದೋರದೆ ನಿಂತಿದ್ದು, ಅನಂತರ ಅಶ್ವಿನೀ ದೇವತೆಗಳನ್ನೆ ಧ್ಯಾನಮಾಡುತ್ತಾ, ತನಗೆ ಪತಿಭಿಕ್ಷೆಯನ್ನು ನೀಡುವಂತೆ ಬೇಡಿಕೊಂಡಳು. ಅವರು ಆಕೆಯ ಪ್ರಾರ್ಥನೆಗೆ ಮೆಚ್ಚಿ ಸ್ವಸ್ವರೂಪವನ್ನು ತಾಳಿದರು. ಯುವಕನಾದ ಚ್ಯವನನು ಮುಗುಳ್ನಗುತ್ತಾ ಮಡದಿಯ ಕೈಹಿಡಿದನು. ಅಶ್ವಿನೀದೇವತೆಗಳು ಆ ದಂಪತಿಗಳಿಂದ ಬೀಳ್ಕೊಂಡು ಸ್ವಸ್ಥಾನಕ್ಕೆ ಹಿಂದಿರುಗಿದರು.



ಕ್ರಿ.ಶ.78–101 ಕಾನಿಷ್ಕನ ಕಾಲ.

ಚ್ಯವನ ಸುಕನ್ಯೆಯರು ಜಕ್ಕವಕ್ಕಿಗಳಂತೆ ಸಂಸಾರಸುಖದ ಸಾರವನ್ನು ಹೀರುತ್ತಾ ಯುಗವೊಂದು ಕ್ಷಣವಾಗಿ ಕಳೆಯುತ್ತಿರಲು, ಒಂದು ದಿನ ಶರ್ಯಾತಿ ಮಹಾರಾಜನು ತಾನು ಮಾಡಬೇಕೆಂದು ಕೊಂಡಿದ್ದ ಒಂದು ಯಾಗಕ್ಕೆ ಅಳಿಯನನ್ನೂ ಮಗಳನ್ನೂ ಕರೆದುಕೊಂಡು ಹೋಗಬೇಕೆಂದು ಚ್ಯವನಋಷಿಯ ಆಶ್ರಮಕ್ಕೆ ಬಂದನು. ಅಲ್ಲಿ ಬಂದು ನೋಡಿದರೆ ತನ್ನ ಮಗಳು ಸುಂದರನಾದ ತರುಣನೊಬ್ಬನೊಡನೆ ಸರಸ ಸಲ್ಲಾಪದಲ್ಲಿ ತೊಡಗಿದ್ದಾಳೆ. ಆತನಿಗೆ ರೇಗಿಹೋಯಿತು. ತನಗೆ ಬಂದು ನಮಸ್ಕರಿಸದ ಮಗಳನ್ನು ಹರಸುವುದಕ್ಕೆ ಬದಲಾಗಿ 'ಅಯ್ಯೋ ನೀಚಳೆ, ಎಂತಹ ಅನ್ಯಾಯ ಮಾಡಿದೆ? ಲೋಕಪೂಜ್ಯನಾದ ಮಹರ್ಷಿ, ನಿನ್ನ ಗಂಡ ! ಅಂತಹ ಮಹಾನುಭಾವನಿಗೆ ಮೋಸಮಾಡಿದೆಯಲ್ಲಾ, ನೀನು ! ಆತ ಮುದುಕನೆಂದು ಹಾದಿಹೋಕನೊಬ್ಬನನ್ನು ಕಟ್ಟಿಕೊಂಡೆಯಾ ? ಆತ ಕುರೂಪಿಯೆಂದು ಸುಂದರ ವಿಟಪುರುಷನಿಗೆ ದೇಹವನ್ನು ಮಾರಿಕೊಂಡೆಯಾ ? ಅಯ್ಯೋ ಪಾಪಿ ಹೆಣ್ಣೆ, ನನ್ನ ವಂಶಕ್ಕೆ ಎಂತಹ ಅಪಕೀರ್ತಿಯನ್ನು ತಂದೆ ! ಹುಟ್ಟಿದ, ಸೇರಿದ ವಂಶಗಳೆರಡನ್ನೂ ನರಕದಲ್ಲಿ ಅದ್ದಿದೆಯಲ್ಲಾ !' ಎಂದು ಕಿರಿಚಿಕೊಂಡನು. ಅಪ್ಪನ ಈ ಮಾತುಗಳನ್ನು ಕೇಳಿ ಮಗಳಿಗೆ ನಗು ಬಂತು. ಆಕೆ ಮುಗುಳ್ನಗುತ್ತಾ 'ಅಪ್ಪಾ, ಇವರೇ ನಿನ್ನ ಅಳಿಯಂದಿರು. ಅಶ್ವಿನೀ ದೇವತೆಗಳ ಅನುಗ್ರಹದಿಂದ ಇವರು ಸುಂದರ ಯುವಕರಾಗಿದ್ದಾರೆ. ಈ ನನ್ನ ಪತಿದೇವರನ್ನು ವಿಟರೆಂದು ಕರೆಯುವುದೆ ?' ಎಂದಳು. ಆಕೆಯಿಂದ ನಡೆದ ವೃತ್ತಾಂತವನ್ನೆಲ್ಲ ಕೇಳಿ ಶರ್ಯಾತಿಗೆ ಅತ್ಯಂತ ಸಂತೋಷವಾಯಿತು ; ಮಗಳನ್ನು ಬಾಚಿ ತಬ್ಬಿಕೊಂಡು ಮುದ್ದಾಡಿದನು.

ಚ್ಯವನ ಸುಕನ್ಯೆಯರು ಶರ್ಯಾತಿರಾಜನ ಯಾಗಕ್ಕೆ ಹೋದರು. ಚ್ಯವನ ಮಹರ್ಷಿಯೆ ಪುರೋಹಿತನಾಗಿ, ಆ ಯಾಗವನ್ನು ಸಾಂಗವಾಗಿ ನೆರವೇರಿಸಿ, ಅಶ್ವಿನೀ ದೇವತೆಗಳಿಗೆ ಹಿಂದೆಂದೂ ಇಲ್ಲದ ಸೋಮಭಾಗವನ್ನು ಸಲ್ಲಿಸಿದನು. ಇದರಿಂದ ಇಂದ್ರನಿಗೆ ಕೋಪ ಬಂತು ; ಚ್ಯವನಮಹರ್ಷಿಯನ್ನು ಕೊಂದುಬಿಡಬೇಕೆಂದು ತನ್ನ ವಜ್ರಾಯುಧವನ್ನು ಕೈಗೆ ಎತ್ತಿಕೊಂಡನು. ಆದರೆ ಆ ಮಹರ್ಷಿಯ ಪ್ರಭಾವದಿಂದ ಅವನ ಕೈ ಮಿಸುಕಾಡದಂತಾಯಿತು. ಇದನ್ನು ಕಂಡು, ದೇವತೆಗಳೆಲ್ಲ ಸೇರಿ, ಇನ್ನು ಮುಂದೆ ಅಶ್ವಿನೀ ದೇವತೆಗಳಿಗೆ ಸೋಮಭಾಗವನ್ನು ಕೊಡಬಹುದೆಂದು ತೀರ್ಮಾನಿಸಿದರು. ಇದರಿಂದ ಇಂದ್ರನ ಕೈ ಸರಿಹೋಯಿತು. ಚ್ಯವನಋಷಿಯ ಕೀರ್ತಿ ಹಬ್ಬಿ ಹರಡಿತು. ಆತನು ಸುಕನ್ಯೆಯೊಡನೆ ಇಹದಲ್ಲಿ ಪರಮ ಸುಖಿಯಾಗಿದ್ದು, ತನ್ನ ಸತ್ಕರ್ಮಗಳಿಂದ ಸದ್ಗತಿಯನ್ನೂ ಪಡೆದನು.

"ಆನೋ ಭದ್ರಾಃ ಕೃತವೋಯಂತು ವಿಶ್ವಥಃ" ಇಂಟರ್‌ನೆಟ್‌ನಿಂದ ಪಡೆದದ್ದು

# ಇನ್ನೊಬ್ಬರಿಗೆ ಕೇಡು ಬಯಸಿದರೆ ಏನಾಗುತ್ತೆ..

ಫಲವತ್ತಾದ ಇಪ್ಪತ್ತೈದು ಎಕರೆ ತೋಟದ ಭೂಮಿಯ ಒಡೆಯನಾಗಿದ್ದ ನಿಂಗಪ್ಪ ಅನಕ್ಷರಸ್ಥನಾಗಿದ್ದ.

ಓದಲು ಬರೆಯಲು ಬಾರದೆ ತಾನು ಅನುಭವಿಸಿದ ಕಷ್ಟಗಳನ್ನು ತನ್ನ ಮಗ ಅನುಭವಿಸಬಾರದೆಂದು ನಿರ್ಧರಿಸಿದ್ದ. ಕಷ್ಟಪಟ್ಟು ಮಗನನ್ನು ವಿದ್ಯಾವಂತನಾಗಿ ಮಾಡಿದ್ದ. ಆತನ ಹೆಸರು ವಿನಯ. ನಿಜಕ್ಕೂ ವಿನಯವಂತನಾಗಿದ್ದ. ಪಟ್ಟಣದ ಹಾಸ್ಟೆಲ್ನಲ್ಲಿ ಇದ್ದುಕೊಂಡು, ಹಗಲಿರುಳೂ ಓದಿ, ಉನ್ನತ ಶ್ರೇಣಿಯಲ್ಲಿ ಕೃಷಿ ಪದವಿಯನ್ನು ಪಡೆದುಕೊಂಡಿದ್ದ. ಸರ್ಕಾರಿ ನೌಕರಿಯ ಕನಸು ಕಾಣದ ಆತ ದಿನವೂ ಪಂಚೆ ಉಟ್ಟುಕೊಂಡು, ತಲೆಗೆ ಟವಲ್ಲು ಸುತ್ತಿಕೊಂಡು ಅಪ್ಪನೊಡನೆ ಹೊಲದಲ್ಲಿ ಮಣ್ಣಿನ ಮಗನಾಗಿ ಬೆವರು ಸುರಿಸಿ ದುಡಿಯುತ್ತಿದ್ದ. ತಾನು ಕಲಿತ ಕೃಷಿ ಪದವಿಯ ಜ್ಞಾನವನ್ನು ಬಳಸಿಕೊಂಡು ಹೊಸ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದ.

ತಾತನ ಕಾಲದಿಂದಲೂ ತನ್ನಪ್ಪ ಬೆಳೆಯುತ್ತಿದ್ದ ನಾಟಿ ದ್ರಾಕ್ಷಿ ತೋಟದಲ್ಲಿ ಹೊಸ ತಳಿಯ ಬೀಜರಹಿತ ಕಪ್ಪು ದ್ರಾಕ್ಷಿ ಸಸಿಗಳನ್ನು ವಿನಯ ನಾಟಿ ಮಾಡಿದ. ಅವುಗಳ ಬುಡಕ್ಕೆ ಹನಿ ಹನಿಯಾಗಿ ನೀರು ತೊಟ್ಟಿಕ್ಕುವಂತೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿದ. ಹಾಗಾಗಿ ಬಹಳ ಬೇಗನೆ ದ್ರಾಕ್ಷಿ ಸಸಿಗಳು ಆಳೆತ್ತರಕ್ಕೆ ಬೆಳೆದುನಿಂತವು. ಮಾರುದ್ದ ಅಂತರದಲ್ಲಿ ಕಲ್ಲಿನ ಕಂಬಗಳನ್ನು ನೆಟ್ಟು ನಿರ್ಮಿಸಿದ್ದ ಚಪ್ಪರದ ತುಂಬ ಬಳ್ಳಿಯಾಗಿ ಹರಡಿಕೊಂಡವು. ಕೆಲ ತಿಂಗಳುಗಳು ಕಳೆಯುತ್ತಲೇ ದ್ರಾಕ್ಷಿ ಬಳ್ಳಿಗಳಲ್ಲಿ ಹೂವುಗಳು ಕಾಣಿಸಿಕೊಂಡವು. ಆ ಹೂವುಗಳನ್ನು ಕೀಟಗಳು ತಿನ್ನಬಾರದು, ತಿಂದರೆ ಇಳುವರಿ ಕಡಿಮೆಯಾದೀತೆಂದು ಮುಂಜಾಗ್ರತೆಯಿಂದ ವಿನಯ ಹದಿನೈದು ದಿನಕ್ಕೊಮ್ಮೆ ರಾಸಾಯನಿಕ ಕೀಟನಾಶಕವನ್ನು ಸಿಂಪಡಿಸತೊಡಗಿದ.

ದಿನಗಳೆದಂತೆ ಹೂವುಗಳು ಸಣ್ಣ ಸಣ್ಣ ಕಾಯಿಗಳಾದವು. ಎಲೆಗಳ ಕೆಳಗೆ ಬೊಗಸೆಯಷ್ಟು ದ್ರಾಕ್ಷಿ ಕಾಯಿಗಳ ಗೊಂಚಲು ಜೋತುಬಿದ್ದವು. ಆಗ ಊರಿನಲ್ಲಿದ್ದ ಎಲ್ಲ ರೈತರ ಕಣ್ಣುಗಳು ಅರಳಿದವು. ಪಟ್ಟಣದ ಹಾಸ್ಟೆಲ್ನಲ್ಲಿದ್ದು ಓದಿ, ಹಳ್ಳಿಗೆ ಮರಳಿದ ನಿಂಗಪ್ಪನ ಮಗ ಒಳ್ಳೆಯ ಫಸಲನ್ನು ಬೆಳೆಯುತ್ತಿದ್ದಾನೆ. ಇದ್ದರೆ ಇಂತಹ ಮಗ ಇರಬೇಕು ಅಂತ ಅನೇಕರು ಹೊಗಳಿದರು.

ಆದರೆ ನಿಂಗಪ್ಪನ ಹೊಲದ ಅಕ್ಕಪಕ್ಕದ ದ್ಯಾವಪ್ಪ ಮತ್ತು ಸಂಗಪ್ಪ ಮಾತ್ರ ಹೊಗಳಿಕೆಯ ಮಾತುಗಳನ್ನು ಕೇಳಿ ಹೊಟ್ಟೆಕಿಚ್ಚುಪಟ್ಟರು. ಹೇಗಾದರೂ ಮಾಡಿ ದ್ರಾಕ್ಷಿ ತೋಟವನ್ನು ನಾಶಪಡಿಸಬೇಕೆನ್ನುವ ಕೆಟ್ಟ ಯೋಚನೆ ಅವರಿಬ್ಬರಲ್ಲಿ ಮೂಡಿತು. ಒಂದು ದಿನ ರಾತ್ರಿ ಇಬ್ಬರೂ ತಮ್ಮ ನೂರಾರು ಕುರಿಗಳನ್ನು ನಿಂಗಪ್ಪನ ತೋಟದೊಳಕ್ಕೆ ನುಗ್ಗಿಸಿಬಿಟ್ಟು ತೆಪ್ಪಗೆ ನಿದ್ದೆ ಹೋದರು.



ಕ್ರಿ.ಶ.320–540 ಗುಪ್ತ ಸಾಮ್ರಾಜ್ಯ.

ಬೆಳಗಾಯಿತು. ದ್ಯಾವಪ್ಪ ಮತ್ತು ಸಂಗಪ್ಪನ ಕೆಟ್ಟ ಯೋಚನೆ ಅವರಿಗೇ ತಿರುಮಂತ್ರವಾಗಿತ್ತು. ಹಿಂದಿನ ಸಂಜೆ ವಿನಯ ದ್ರಾಕ್ಷಿ ತೋಟಕ್ಕೆ ಕೀಟನಾಶಕವನ್ನು ಸಿಂಪಡಿಸಿದ್ದ. ಕುರಿಗಳು ಕೀಟನಾಶಕ ಅಂಟಿದ ಒಂದಿಷ್ಟು ದ್ರಾಕ್ಷಿ ಬಳ್ಳಿಯನ್ನು ತಿನ್ನುತ್ತಲೇ ಎಚ್ಚರ ತಪ್ಪಿ, ಹೊಟ್ಟೆ ಉಬ್ಬಿಕೊಂಡು ಅರೆಜೀವವಾಗಿ ಬಿದ್ದಿದ್ದವು. ಅವುಗಳನ್ನು ನೋಡಿದ ದ್ಯಾವಪ್ಪ ಮತ್ತು ಸಂಗಪ್ಪ ಇಬ್ಬರೂ ಎದೆಬಡಿದುಕೊಂಡು ಅಳತೊಡಗಿದರು. 'ಜೀವನಕ್ಕೆ ಆಧಾರವಾಗಿರುವ ಕುರಿಗಳು ಸಾಯುತ್ತಿವೆ. ಯಾರಾದರೂ ಕಾಪಾಡಿ' ಎಂದು ಗೋಳಾಡತೊಡಗಿದರು.

ಆಗ ತೋಟದ ಸುತ್ತಮುತ್ತಲಿನ ರೈತರೆಲ್ಲರೂ ಓಡೋಡಿ ಬಂದರು. ಕಷ್ಟಪಟ್ಟು ಬೆಳೆದ ನಿಂಗಪ್ಪನ ದ್ರಾಕ್ಷಿ ತೋಟವನ್ನು ನಾಶಪಡಿಸಲು ರಾತ್ರೋರಾತ್ರಿ ಕುರಿಗಳನ್ನು ತೋಟದೊಳಗೆ ಬಿಟ್ಟಿದ್ದೂ ಅಲ್ಲದೆ, ತಮ್ಮ ಕುರಿಗಳನ್ನು ಕಾಪಾಡಿ ಎನ್ನುತ್ತಿದ್ದಾರೆ ಇವರನ್ನು ಸುಮ್ಮನೆ ಬಿಡಬಾರದು, ಪೊಲೀಸರಿಗೆ ದೂರು ಕೊಟ್ಟು, ಇವರಿಬ್ಬರನ್ನು ಜೈಲಿಗೆ ಕಳುಹಿಸಬೇಕು. ಸುಮ್ಮನಿದ್ದರೆ ಇವರಿಬ್ಬರೂ ಪಾಠ ಕಲಿಯುವುದಿಲ್ಲವೆಂದು ನಿರ್ಧರಿಸಿದರು.

ಆ ಕೂಡಲೇ ಅಪ್ಪನೊಂದಿಗೆ ಹೊಲದತ್ತ ಧಾವಿಸಿಬಂದ ವಿನಯ, 'ಆಗಿದ್ದು ಆಗಿ ಹೋಯಿತು, ಈಗ ಅರೆಜೀವವಾಗಿ ಬಿದ್ದಿರುವ ಮೂಕಪ್ರಾಣಿಗಳಾದ ಕುರಿಗಳನ್ನು ಬದುಕಿಸೋಣ ಬನ್ನಿ, ಎಲ್ಲರೂ ಕುರಿಗಳನ್ನು ಒಂದೊಂದಾಗಿ ಎತ್ತಿಕೊಂಡು ಬನ್ನಿ...' ಎಂದು ಹೇಳಿದವನೇ ಕುರಿಯೊಂದನ್ನು ಎತ್ತಿಕೊಂಡು ತೋಟದ ಬದುವಿನ ಮೇಲೆ ಹೋಗಿ ಕುಳಿತ. ಅದೇ ಬದುವಿನ ಮೇಲೆ ಬೆಳೆದಿದ್ದ ಒಂದೆರಡು ಜಾತಿಯ ಗಿಡದ ಸೊಪ್ಪನ್ನು ಕಿತ್ತುಕೊಂಡ. ಅಗಲವಾದ ಕಲ್ಲಿನ ಮೇಲೆ ಹಾಕಿ ಕುಟ್ಟಿ ಅರೆದು, ಅಗತ್ಯವಾದ ಔಷಧಿಯನ್ನು ತಯಾರಿಸಿದ. ಆ ಔಷಧಿಯನ್ನು ಕುರಿಗಳಿಗೆ ಕುಡಿಸಿದ. ಸ್ವಲ್ಪ ಸಮಯದ ಬಳಿಕ ಎಲ್ಲ ಕುರಿಗಳು ತಲೆಕೊಡವಿಕೊಂಡು ಎದ್ದು ನಿಂತವು. 'ಬ್ಯಾ.. ಬ್ಯಾ...' ಅಂತ ಅರಚತೊಡಗಿದವು.

ನಿಂಗಪ್ಪ ಮತ್ತು ಆತನ ಮಗ ವಿನಯನ ಶ್ರಮದ ಫಲವನ್ನು ನೋಡಲಾಗದೆ ಹೊಟ್ಟೆಕಿಚ್ಚುಪಟ್ಟು ನಾಶಪಡಿಸಲು ಹೋಗಿ ತಾವೇ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಕ್ಕೆ ದ್ಯಾವಪ್ಪ ಮತ್ತು ಸಂಗಪ್ಪ ಪಶ್ಚಾತ್ತಾಪಪಟ್ಟರು. ಸಕಾಲಕ್ಕೆ ತಮ್ಮ ಕುರಿಗಳಿಗೆಲ್ಲ ಔಷಧಿಯುಣಿಸಿ ಕಾಪಾಡಿದ್ದಕ್ಕೆ ಇಬ್ಬರೂ ವಿನಯನ ಕಾಲಿಗೆ ಎರಗಿದರು. ಕೂಡಲೇ ವಿನಯ ಅವರ ಭುಜಗಳನ್ನು ಹಿಡಿದು ಮೇಲಕ್ಕೆ ಎತ್ತಿದ. ಪಶ್ಚಾತ್ತಾಪ ತುಂಬಿದ ಅವರಿಬ್ಬರ ಕಣ್ಣಂಚಿನಲ್ಲಿ ಹನಿಗಳು ಉದುರಿದವು.

# ಔಷಧೀಯ ಸಸ್ಯ ಸಂಪತ್ತು

ಲೇ : ಶ್ರೀ ಪಿ. ಎಸ್. ವೆಂಕಟರಾವ್ ದೈತೋಟ.



**ಅಶೋಕ**

ಗರ್ಭಾಂಗಗಳ ಅಕ್ರಮಕ್ಕೆ ಅನುಪಮ

**ಹೆಸರುಗಳು**

**ಕನ್ನಡ** : ಅಶೋಕ ಮರ, ಕೆಂಕಲಿ ಮರ, ಅಸುಗೆ ಮರ: ತುಳು: ಅಸೋಕೊದ ಮರ, ತಮಿಳು: ಅಶೋಗಮು: ಹಿಂದಿ: ಅಶೋಕ್: ಸಂಸ್ಕೃತ: ಅಶೋಕ, ಶೋಕನಾಶ: ಇಂಗ್ಲಿಷ್ : Asoka Tree: ಸಸ್ಯಶಾಸ್ತ್ರೀಯ: Saraca asoca (Roxb.) Willd. ಕುಟುಂಬ , Fabaceae (leguminosa): ಉಪಯೋಗ : ಎಲೆ, ಚಿಗುರು, ಬೀಜ, ತೊಗಟೆ ಪ್ರತ್ಯೇಕವಾಗಿ. ಕುಟುಂಬ

**ಮೂಲಿಕಾ ಪರಿಚಯ**

ಹಿಂದೂ ಹಾಗೂ ಬೌದ್ಧರಿಗೆ ಬರಿಯ ನೋಟವೂ ಪುಣ್ಯಕರವೆನಿಸುವ ಪೌರಾಣಿಕ ತರು. ಅಂತಃಪುರಗಳ ವೃಕ್ಷವಾಟಿಕೆಗಳಲ್ಲಿ ಅನಿವಾರ್ಯವಾಗಿರುತ್ತಿದ್ದ, ಕವ್ಯೋಕ್ತ ದೋಹದ ವೃಕ್ಷ. ಸಾಮೀಪ್ಯವೇ ಸ್ತ್ರೀಯರ ಕೋಟಲೆಗಳ ಪರಿಹಾರಕ ಚೈತನ್ಯ ಹೊಂದಿರುವ ಅಂಗನಾಪ್ರಿಯ ಪುಷ್ಪಪಾದಪ. ಆಯುರ್ವೇದಾಚಾರ್ಯರುಗಳ ಶ್ಲಾಘನೆಗೊಳಗಾದ ಔಷಧ ದ್ರುವ – ಅಶೋಕ ಸಣ್ಣದೊಂದು ಸುಂದರ ಮರ. 12 ತಿಂಗಳೂ ಹಸುರೆಲೆಗಳ ಮುಚ್ಚಿಗೆ. ವಸಂತದಲ್ಲಿ ತಾಮ್ರ ವರ್ಣದ ಚಿಗುರು ಬೆಳೆದಂತೆ ಕಂದುಗೆಂಪು –ಬೂದು ಹಸುರುಗಳಿಗೆ ದಾಟುವುದು. ಬೇಸಿಗೆಯಲ್ಲಿ ಬೆಳೆದ ರೆಂಬೆ ಕಾಂಡಗಳ ಮೇಲಿನ ಗ್ರಂಥಿಯೊಡೆದು ಕೊನರುವ ನಸು ಪರಿಮಳದ ಬೊಸುಗೆ ತುಂಬುವ ಹೂಗೊಂಚಲು. ನಾಲ್ಕು ದಳಗಳ ಕಿತ್ತಳೆ ಹಳದಿಯಿಂದ ಕೆಂಪಿಗೆ ತಿರುಗುವ ಬಹುಸಂಖ್ಯೆಯ ಕಂದು– ನೇರಳೆ



ಕ್ರಿ.ಶ.335–375 ಸಮುದ್ರಗುಪ್ತನ ಆಳ್ವಿಕೆ.

ಕೇಸರ ಸಹಿತ ಸೂಸುವ ಚೆಲುವು ಮರದ ಆಕರ್ಷಣೆ. ಗೇಣುದ್ದದ ಚೂಪು ತುದಿಯ ಕೋಡುಗಳು ಕಂದುಗೆಂಪಿನಿಂದ–ಬೂದುಕಂದು ದೊಡ್ಡ ಗಾತ್ರದ 6–8 ಬೀಜಗಳು. ಭಾರತ, ಬರ್ಮಾ, ದಕ್ಷಿಣ ದ್ವೀಪಗಳು ಮೂಲ. ಪಶ್ಚಿಮ ಘಟ್ಟದ ಕಾಡುಗಳಲ್ಲಿ ಸಾಕಷ್ಟಿದ್ದುದು ಈಗ ವಿನಾಶದ ಹಾದಿ ಹಿಡಿದಿದೆ. ಆಯುರ್ವೇದವು ಹಲವಾರು ರೋಗಗಳಿಗೆ ಚಿಕಿತ್ಸೆಯಾಗಿ ಸೂಚಿಸಿದೆ. ಮುಖ್ಯವಾಗಿ ಅಲ್ಪಾರ್ತವ, ಅನಾರ್ತವ, ಅತ್ಯಾರ್ತವ, ಶ್ವೇತ ಪ್ರದರಗಳಲ್ಲಿ ವಿಶೇಷ, ಗರ್ಭಾಶಯ, ಡಿಂಭಾಶಯಗಳ ಕೆರಳಿಕೆ, ವಿಕಾಸ ಸಂಕೋಚಗಳನ್ನು ಕ್ರಮವಾಗಿಸಲು ಅನುಪಮ ಔಷದ. ಕೇಸರಗಳನ್ನು ತೆಗೆದು ಹಾಕಿದ ಹೂಗಳ ಪಲ್ಯ ರುಚಿಪ್ರದ. ಹೂದಲುಗಳ ಶರಬತ್ತು ದಾಹ ನೀಗುವುದು. ಕೋಡನ್ನು ಅಡಿಕೆಯಂತೆ ಜಗಿಯುವ ಅಭ್ಯಾಸ ಕೆಲವರ್ಗಗಳಲ್ಲಿದೆ. ತೊಗಟೆ, ಹೂಗಳಲ್ಲಿ ಹಲ ಲೋಹಗಳ ಯೌಗಿಕಗಳು (ಮುಖ್ಯಾವಾಗಿ ಕಬ್ಬಿಣ, ಕ್ಯಾಲ್ಸಿಯಂ ), ಸ್ಟಿರೈಡಗಳು, ಸುಗಂಧಗಳು ಶೋಧಿಸಲ್ಪಟ್ಟಿವೆ. ವಾಸದ ಮನೆಯ ಸಮೀಪ ನೆಡುವುದನ್ನು ವಾಸ್ತುಶಾಸ್ತ್ರ ನಿಷೇಧಿಸುತ್ತದೆ. ಬಹುಶಃ ಬೇರುಗಳು ಕಟ್ಟಡದಡಿ ನುಸುಳಿ ಪಾಯ ಶಿಥಿಲಗೊಳಿಸುವುದರಿಂದ ಇರಬೇಕು. ಆಗ್ನೇಯ ಏಷ್ಯಾದಿಂದ ಬಂದ ಇದರ 2 ಪ್ರಭೇದಗಳೂ ಇವೆ.

**ಉಪಯೋಗಗಳು**

**ಯಾವುದೇ ಮುಟ್ಟಿನ ಅಕ್ರಮಗಳಿಗೆ :** 20 ಗ್ರಾಂ ಅಶೋಕ ಚಕ್ಕೆಯನ್ನು ಜಜ್ಜಿ 400 ಮಿ.ಲೀ. ನೀರಿನಲ್ಲಿ ಕುದಿಸಿ ಅರ್ಧ ಬತ್ತಿದಾಗ 100 ಮಿ.ಲೀ. ಆಕಳ ಹಾಲು ಹಾಕಿ ಕೆನೆ ಕಟ್ಟದಂತೆ ಬತ್ತಿಸಿ 150 ,ಮಿ.ಲೀ. ಉಳಿಸಿ ಸೋಸಿ ಕಲ್ಲುಸಕ್ಕರೆಯೊಂದಿಗೆ ರಾತ್ರಿ ಆಹಾರದ ನಂತರ ಸೇವನೆ. ಮುಟ್ಟು ಸ್ನಾನದಂದಿನಿಂದ 6ದಿನಗಳಂತೆ ಮೂರು ಸರದಿ.

**ಮಕ್ಕಳ ತುರಿಕೆ ಹುಣ್ಣು ಮತ್ತು ಕಜ್ಜಿಗಳಿಗೆ** ( ಸಾಮಾನ್ಯ ಚರ್ಮರೋಗಗಳಿಗೆ) : ಅಶೋಕ ಹೂ 1 ಹಿಡಿ , ಮುಖ್ಯನಾರು ತೆಗೆದ ಅದರದೇ ಹಸುರೆಲೆ 2 ಯಾ 3 ಇವನ್ನು ಅರೆದು, 150 ಮಿ.ಲೀ. ಹೊಸದಾದ ಕೊಬ್ಬರಿ ಎಣ್ಣೆಯನ್ನು ಹಾಕಿ ಕುದಿಸಿ ಕರಕಾಗಿಸಿಟ್ಟುಕೊಂಡು ಲೇಪಿಸುತ್ತಾ ಬರುವುದು. 1–2 ವಾರ.

ಸುಂದರಕಾಂಡದ ಸೌಂದರ್ಯ

# ಶ್ರೀ ವೀರಾಂಜನೇಯ

ಲೇ : ರಾಮಕೃಷ್ಣ. ಎನ್. ಹೆಗಡೆ

ಶ್ರೀರಾಮನಿಗೆ ಸೀತಾವೃತ್ತಾಂತವನ್ನು ತಿಳಿಸಿದ ಹನುಮಂತನು ಲಂಕೆಗೆ ಹೋಗುವ ಉಪಾಯದ ಕುರಿತಾಗಿ ಯೋಚಿಸುವ ವಿಚಾರವನ್ನು ಎಲ್ಲರಿಗೂ ತಿಳಿಸಿ ಹೇಳುತ್ತಾನೆ. ಏಕೆಂದರೆ ಲಂಕೆಗೆ ಹೋಗುವ ಮಾರ್ಗವೂ ದುಸ್ತರವಾಗಿರುವುದೆಂದು ಸ್ವತಃ ಮಾರುತಿಯು ತಿಳಿದುಕೊಂಡಿದ್ದಾನೆ. ಹಾಗೆಯೇ ಸೀತೆಯನ್ನು ಕಾಣುವುದಕ್ಕೆ ಸಮಯವೂ ಕೂಡ ಕಡಿಮೆ ಇದೆ ಸೀತೆಯೂ ಹೇಳಿರುವ ಹಾಗೆ ಒಂದು ಮಾಸದ ಅವಧಿಯು ಅತ್ಯಂತ ಚಿಕ್ಕದಾಗಿದೆ ಹಾಗಾಗಿ ಬುದ್ದಿವಂತನಾದ ಹನುಮಂತನು ಈ ವಿಷಯವಾಗಿ ಯೋಚನೆ ಮಾಡಿರುವುದು ಸಮರ್ಪಕವಾಗಿದೆ ಹಾಗೆಯೇ ಸೀತೆಯು ಗುರುತಿಗಾಗಿ ನೀಡಿರುವ ಆ ಅಮೂಲ್ಯವಾಗಿರುವ ಚೂಡಾಮಣಿಯನ್ನು ಶ್ರೀರಾಮನಿಗೆ ನೀಡುತ್ತಾನೆ.

ಇಂತಹ ಚೂಡಾಮಣಿಯನ್ನು ಪಡೆದ ಶ್ರೀರಾಮನು ದುಃಖವನ್ನು ಹೊಂದುತ್ತಾನೆ ಸಹಜವಾಗಿಯೇ ಸೀತಾಮಾತೆಯ ನೆನಪುಗಳು ಅವನನ್ನು ಆವರಿಸುತ್ತವೆ ಇದನ್ನು ಇಲ್ಲಿ ಹೀಗೆ ವರ್ಣಿಸುತ್ತಾರೆ.

**ಏವಮುಕ್ತೋ ಹನುಮತಾ ರಾಮೋ ದಶರಥಾತ್ಮಜಃ ।**
**ತಂ ಮಣಿಂ ಹೃದಯೇ ಕೃತ್ವಾ ಪ್ರರುರೋದ ಸಲಕ್ಷ್ಮಣಃ ॥**

ಹನುಮಂತನಿಂದ ಸೀತೆಯು ಕುರಿತಾಗಿ ಆ ಎಲ್ಲಾ ವಿಷಯಗಳನ್ನು ತಿಳಿದ ಬಳಿಕ ಆ ಚೂಡಾಮಣಿಯನ್ನು ಎದೆಗಪ್ಪಿಕೊಂಡು ಲಕ್ಷ್ಮಣನೊಂದಿಗೆ ಸೇರಿ ಅಳತೊಡಗಿದನು. ದುಃಖವಾದಾಗ ಅಳುವುದು ಸಾಮಾನ್ಯ ವಿಷಯವಾಗಿದೆ. ಆದರೆ ದೇವನಾದ ಶ್ರೀರಾಮನೂ ಕೂಡ ಸಾಮಾನ್ಯ ಮನುಷ್ಯರಂತೆ ಅಳುವುದು ವಿಶೇಷವಾಗಿದೆ. ಇಲ್ಲಿ ಮಾನವ ಸಹಜವಾದ ಗುಣಗಳು ವ್ಯಕ್ತವಾಗಿದೆ. ಪ್ರೀತಿ–ವಾತ್ಸಲ್ಯಗಳು ಕಂಡುಬರುತ್ತವೆ ಕವಿಯು ಇಲ್ಲಿ ಸಮಯೋಚಿತವಾಗಿ ಕರುಣರಸವನ್ನು ಕಾವ್ಯದಲ್ಲಿ ತಂದಿರುವುದು ಕಾವ್ಯ ವೈಶಿಷ್ಟ್ಯವಾಗಿದೆ. ಶ್ರೀರಾಮನು ತನ್ನ ಮಾತುಗಳಲ್ಲಿ ಹೇಳುವಂತೆ,

**ಯಥೈವ ಧೇನುಃ ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ ।**
**ತಥಾ ಮಮಾಪಿ ಹೃದಯಂ ಮಣಿರತ್ನಸ್ಯ ದರ್ಶನಾತ್ ॥**

ಅಂದರೆ ಅತ್ಯಂತ ವಾತ್ಸಲ್ಯ ಮಯಿಯಾದ ಹಸುವು ಕರುವನ್ನು ಕಂಡೊಡನೆ ಹಾಲನ್ನು ಸ್ರವಿಸುವಂತೆ ಈ ಉತ್ತಮವಾಗಿರುವ ಚೂಡಾಮಣಿಯನ್ನು ನೋಡುತ್ತಲೇ ನನ್ನ ಹೃದಯವು ದ್ರವಿಸುತ್ತದೆ ಎಂದು ನುಡಿಯುತ್ತಾ ಈ ಚೂಡಾಮಣಿಯ ಹಿನ್ನಲೆಯನ್ನು ನೆನಪಿಸಿಕೊಳ್ಳುತ್ತಾನೆ.



ಕ್ರಿ.ಶ.405–411 ಭಾರತದಲ್ಲಿ ಫಾಹಿಯಾನ.

(20ನೇ ಪುಟದಿಂದ.....)

**ಮಣಿರತ್ನಮಿದಂ ದತ್ತಂ ವೈದೇಹ್ಯಾಃ ಶ್ವಶುರೇಣ ಮೇ।**
**ವಧೂಕಾಲೇ ಯಥಾಬದ್ಧಮಧಿಕಂ ಮಾರ್ಧ್ನಿ ಶೋಭತೇ॥**

ಶ್ರೀರಾಮನ ಮಾವನಾದ ಜನಕಮಹಾರಾಜನು ಜಾನಕಿಯ ಮದುವೆಯ ಸಮಯದಲ್ಲಿ ಅವಳ ತಾಯಿಯ ಮೂಲಕ ದಶರಥನ ಸಮ್ಮುಖದಲ್ಲಿ ಅವಳಿಗೆ ತೊಡಿಸಿದ್ದರು. ಅದನ್ನು ಸೀತೆಯು ಶಿರದಲ್ಲಿ ಧರಿಸಿದಾಗ ತುಂಬಾ ಶೋಭಾಯಮಾನವಾಗಿ ಕಾಣುತ್ತಿತ್ತು. ಇಚಿತಹ ವಿಚಾರಗಳನ್ನು ಶ್ರೀರಾಮನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುತ್ತಾ ದುಃಖಪಡುತ್ತಿದ್ದನು.

ಮುಂದುವರಿಯುವುದು...

**ವಿ.ಸೂ :–** ಭಕ್ತ ಮಹಾಜನಗಳೇ ಹಾಗೂ ಪ್ರಿಯ ಹೇಮಪುರ ಓದುಗರೇ ಬರೆಯುವ ಅಭಿರುಚಿ ಇರುವವರು ತಮ್ಮ ಸ್ವ-ರಚನೆಯ ಕತೆ ಕವನ ಲೇಖನ ಹಾಗೂ ಧಾರ್ಮಿಕ ಆಚಾರ ವಿಚಾರ ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಲೇಖನವನ್ನು ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಆಯ್ಕೆ ಮಾಡಿ ಪ್ರಕಟಿಸಲಾಗುವುದು. ಇವುಗಳನ್ನು ಪ್ರತಿ ತಿಂಗಳ 15ನೇ ದಿನಾಂಕದೊಳಗೆ ತಲುಪಿಸಿ. ಇಮೇಲ್ ಅಥವಾ ವಾಟ್ಸಪ್‌ಗೆ ಸಹ ಕಳುಹಿಸಬಹುದು. ಇಮೇಲ್ hemapura.bangarmakki@gmail.com ವಾಟ್ಸಪ್ +919449109299 [ಕಡ್ಡಾಯವಾಗಿ 'ಹೇಮಪುರ ಮಾಸ ಪತ್ರಿಕೆಗಾಗಿ' ಎಂದು ತಲೆಬರಹ ಇರಲಿ]

# ಪದಬಂಧ–40

**–ಶ್ರೀ ಗುರು ದಾಸ.**

**ಎಡದಿಂದ ಬಲಕ್ಕೆ :–**

1. ಪುರದೊಳಗೆ ವಾಸಿಸುತ್ತಿರುವ ಪೌರ –4
5. ಹೆಚ್ಚಾಗಿರುವ ಅಥವಾ ಗಾಢವಾದ –4
7. ಕೂದಲು ಸುರುಳಿ ಸುರುಳಿಯಾಗಿದೆ –3




**(ಉತ್ತರ ಮುಂದಿನ ಸಂಚಿಕೆಯಲ್ಲಿ)**

8. ಬಸವನ ಮಂದಿರ –4
9. ಸಮುದ್ರವನ್ನು ಕರಮುಗಿದು ಕರೆ –4
12. ತಿರುಗಿದ್ದರೂ ಯುದ್ಧಮಾಡಲು ಸಿದ್ಧನಾಗಿದ್ದಾನೆ –3
13. ಸೂರ್ಯನು ಮಕರರಾಶಿ ಪ್ರವೇಶಿಸುವ ಪರ್ವಕಾಲ –3
14. ಅಲುಗಾಡದೆ ಸ್ಥಿರವಾಗಿ ನಿಂತಿದ್ದಾನೆ –4

**ಮೇಲಿಂದ ಕೆಳಕ್ಕೆ :–**

1. 'ಕಲಹಭೋಕ್ತೃ'ನೆಂದೆ ಗುರುತಿಸಿಕೊಂಡ ಪುರಾಣದ ಒಂದು ಪಾತ್ರ –3
2. ನೆಲದಲ್ಲಿ ತಗ್ಗು ಮಾಡಿ ಕಸ ಸಂಗ್ರಹಿಸಿದ್ದಾರೆ –5
3. ಪ್ರಪಂಚಕ್ಕೆ ಜ್ಞಾನ ನೀಡಿದ ಭಾರತ ಎಲ್ಲರಿಗೂ ಗುರು –4
4. ನಾಸಿಕ್‌ನಲ್ಲಿರುವ ಪ್ರಸಿದ್ಧ ಪ್ರಾಚೀನ ದೇವಾಲಯ –6
6. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಒಂದು ಗಿರಿಧಾಮ ಇಲ್ಲಿ ತಿರುಗಿದೆ –4
9. ಶಿಕ್ಷೆ ನೀಡದೆ ಪಾಲನೆ ಪೋಷಣೆ ಮಾಡುವಾತ –3
10. ಕೆಸರಿನಿಂದ ಕಳಾಹೀನವಾಗದೆ ದೇವರ ಮುಡಿಯೇರಿದೆ –3
11. ಜನಜಂಗುಳಿಯಿದ್ದರೂ ತಿರುಗಿದೆ –2
12. ಮತಿಯನ್ನು ಅಂಕೆಯಲ್ಲಿಟ್ಟುಕೊಂಡಿರುವ ಆಧ್ಯಾತ್ಮಿಕ ಸಾಧಕ –2

ಪದಬಂಧ–39ರ ಉತ್ತರ

**ಎಡದಿಂದ ಬಲಕ್ಕೆ:–** 1.ಆತ್ರೇಯ, 3.ವಿಚ್ಛೇದನ, 5.ಕೃತಘ್ನ, 6.ಷರತ್ತು, 8.ವಿವಿಧತೆ, 10.ಚೀನಾ, 11.ನೆನೆಸಿ, 13.ಶತಕವಿ, 15.ಡಿರಕ(ಕರಡಿ), 17.ಸವಾರಿ, 18.ನೆಪ, 19.ತಪತಿ.

**ಮೇಲಿಂದ ಕೆಳಕ್ಕೆ:–** 1.ಆಮಿಷ, 2.ಯಕೃತ್ತು, 3.ವಿಘ್ನವಿನಾಶಕ, 4.ನಡತೆ, 7.ರಪ್ಪನೆ, 9.ಧನಿಕ, 11.ನೆರಮನೆ, 12.ಸಿಡಿ, 14.ವಿಹರಿಸು, 16.ರಹಿತ, 17.ಸತಿ.



ಕ್ರಿ.ಶ. 535–757 ಬಾದಾಮಿಯ ಚಾಲುಕ್ಯರು.